


# ೧೦ ನೆಯ ತರಗತಿ ಸಿರಿ ಕನ್ನಡ

## (ಪ್ರಥಮಭಾಷೆ ಕನ್ನಡ )

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಶು ಕದಾಚನ ।**

**ಮಾ ಕರ್ಮಫಲಹೇತುಭೂರ್ಮಾ ತೇ ಸಂಗೋಽಸ್ತ್ವ ಕರ್ಮಣಿ।**

**-ಭಗವದ್ಗೀತೆ**


**ರಚನೆ**

ಮಮತಾ ಭಾಗ್ವತ್

ಸಹಶಿಕ್ಷಕಿ (ಕನ್ನಡ ಭಾಷೆ )

ಸರ್ಕಾರಿ ಪ್ರೌಢ ಶಾಲೆ ಬೇಗೂರು ಬೆಂಗಳೂರು

-೬೮



# ಪರಿವಿಡಿ


| ಕ್ರ.ಸಂ. | ಗದ್ಯಭಾಗ | ಕೃತಿಕಾರರ ಹೆಸರು | ಪುಟಸಂಖ್ಯೆ |
|---|---|---|---|
| ೧ | ಯುದ್ಧ | ಸಾರಾಅಬೂಬಕ್ಕರ್ | ೩-೭ |
| ೨ | ಶಬರಿ | ಪು.ತಿ.ನರಸಿಂಹಾಚಾರ್ | ೮-೧೩ |
| ೩ | ಲಂಡನ್ ನಗರ | ವಿ.ಕೃ.ಗೋಕಾಕ್ | ೧೪-೧೮ |
| ೪ | ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜಒಡೆಯರು ಸರ್.ಎಂ.ವಿಶ್ವೇಶ್ವರಯ್ಯ ) | ಸಮಿತಿ ರಚನೆ / ಡಿ.ಎಸ್.ಜಯಪ್ಪಗೌಡ | ೧೯-೨೩ |
| ೫ | ಎದೆಗೆ ಬಿದ್ದ ಅಕ್ಷರ | ದೇವನೂರು ಮಹಾದೇವ | ೨೪-೨೭ |
| ೬ | ವ್ಯಾಘ್ರಗೀತೆ | ಎ.ಎನ್.ಮೂರ್ತಿರಾಯರು | ೨೮-೩೨ |
| ೭ | ವೃಕ್ಷಸಾಕ್ಷಿ | ದುರ್ಗಸಿಂಹ | ೩೩-೪೦ |
| ೮ | ಸುಕುಮಾರ ಸ್ವಾಮಿಯ ಕತೆ | ಶಿವಕೋಟ್ಯಾಚಾರ್ಯ | ೪೧-೪೮ |
| ಕ್ರ.ಸಂ. | ಪದ್ಯಭಾಗ | ಕೃತಿಕಾರರ ಹೆಸರು | ಪುಟಸಂಖ್ಯೆ |
| ೧ | ಸಂಕಲ್ಪಗೀತೆ | ಜಿ.ಎಸ್.ಶಿವರುದ್ರಪ್ಪ | ೪೯-೫೩ |
| ೨ | ಹಕ್ಕಿ ಹಾರುತಿದೆ ನೋಡಿದಿರಾ | ದ.ರಾ.ಬೇಂದ್ರೆ | ೫೪-೫೮ |
| ೩ | ಹಲಗಲಿ ಬೇಡರು | ಜನಪದ ಲಾವಣಿ (ಸಂಗ್ರಹ) | ೫೯-೬೩ |
| ೪ | ಕೌರವೇಂದ್ರನ ಕೊಂದೆ ನೀನು | ಕುಮಾರವ್ಯಾಸ | ೬೪-೭೧ |
| ೫ | ಹಸುರು | ಕುವೆಂಪು | ೭೨-೭೫ |
| ೬ | ಛಲಮನೆ ಮೆರೆವೆಂ | ರನ್ನ | ೭೬-೮೦ |
| ೭ | ವೀರಲವ | ಲಕ್ಷ್ಮೀಶ | ೭೯-೮೩ |
| ೮ | ಕೆಮ್ಮನೆ ಮೀಸೆವೊತ್ತೆನೇ | ಪಂಪ | ೮೫-೯೧ |
| ಕ್ರ.ಸಂ. | ಪಠ್ಯಪೂರಕ ಅಧ್ಯಯನ | ಕೃತಿಕಾರರ ಹೆಸರು | ಪುಟಸಂಖ್ಯೆ |
| ೧ | ಸ್ವಾಮಿ ವಿವೇಕಾನಂದರ ಚಿಂತನೆಗಳು | ಸಮಿತಿ ರಚನೆ | ೯೨ |
| ೨ | ವಸಂತ ಮುಖ ತೋರಲಿಲ್ಲ | ವಿಜಯಶ್ರೀ ಸಬರದ | ೯೩ |
| ೩ | ಭಗತ್ ಸಿಂಗ್ | ಜಿ.ರಾಮಕೃಷ್ಣ | ೯೪ |
| ೪ | ಮೃಗ ಮತ್ತು ಸುಂದರಿ | ಪಿ.ಲಂಕೇಶ್ | ೯೫ |
| ೫ | ಒಗಟುಗಳು | ಜನಪದ | ೯೬ |

# ಗದ್ಯಪಾಠ ೧.   ಯುದ್ಧ –ಸಾರಾ ಅಬೂಬಕ್ಕರ್

## ಕೃತಿಕಾರರ ಪರಿಚಯ



ಲೇಖಕಿ ಸಾರಾ ಅಬೂಬಕ್ಕರ್ ಅವರು ೩೦ ಜೂನ್ ೧೯೩೬ ರಂದು ಕಾಸರಗೋಡಿನಲ್ಲಿ ಜನಿಸಿದರು.ಇವರು ಚಂದ್ರಗಿರಿಯ ತೀರದಲ್ಲಿ ,ಸಹನಾ, ಕದನ ವಿರಾಮ, ವಜ್ರಗಳು ,ಸುಳಿಯಲ್ಲಿ ಸಿಕ್ಕವರು ,ತಳ ಒಡೆದ ದೋಣಿಯಲಿ ಮೊದಲಾದ ಕಾದಂಬರಿಗಳನ್ನೂ ,ಚಪ್ಪಲಿಗಳು ,ಖೆಡ್ಡಾ , ಅರ್ಧರಾತ್ರಿಯಲಿ ಹುಟ್ಟಿದ ಕೂಸು, ಪಯಣ ಮೊದಲಾದ ಕಥಾ ಸಂಕಲನಗಳನ್ನೂ ಬರೆದಿದ್ದಾರೆ. ಇವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಹಾಗೂ ಇನ್ನಿತರ ಪ್ರಶಸ್ತಿಗಳೂ ದೊರೆತಿವೆ.

ಇವರ ' ಚಪ್ಪಲಿಗಳು ' ಎಂಬ ಕಥಾ ಸಂಕಲನದಿಂದ ಪ್ರಸ್ತುತ ಗದ್ಯಭಾಗವನ್ನು ಆಯ್ದುಕೊಳ್ಳಲಾಗಿದೆ.

### ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ರಾಹಿಲನು ಯಾರು ?

ಉ : ರಾಹಿಲನು ಸೈನ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಒಬ್ಬ ಡಾಕ್ಟರ್ (ವೈದ್ಯ )

೨. ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?

ಉ: ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಬೇಕಾದ ಶಸ್ತ್ರ ಚಿಕಿತ್ಸಾ ಸಾಮಾನುಗಳ ಪೆಟ್ಟಿಯನ್ನು ಭದ್ರವಾಗಿ ಹಿಡಿದುಕೊಂಡನು .

೩. ಗಡಿ ಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?

ಉ : ಗಡಿಪ್ರದೇಶಗಳಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ' ಬ್ಲಾಕ್ ಔಟ್ ' ನಿಯಮವನ್ನು ಪಾಲಿಸಲಾಗುತ್ತದೆ.

೪. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?

ಉ: “ನಾನು ಯುದ್ಧ ಮಾಡುವ ಮೂರ್ಖರ ಕಡೆಯವನಲ್ಲ .ಸಂಕಷ್ಟಕ್ಕೀಡಾದ ಮನುಷ್ಯರ ಕಡೆಯವನು "ಎಂದು ರಾಹಿಲನು ಮುದುಕಿಯ ಎದುರಿಗೆ ಗಂಭೀರವಾಗಿ ನುಡಿದನು.

೫. ಯುದ್ಧದ ಬಗೆಗೆ ಮುದುಕಿಯ ಅಭಿಪ್ರಾಯವೇನು ?

ಉ: ಯುದ್ಧವು ಎಲ್ಲರಿಗೂ ದೇಹಕ್ಕೂ ಮನಸ್ಸಿಗೂ ಗಾಯ ಮಾಡುವುದು ಎನ್ನುವುದು ಯುದ್ಧದ ಕುರಿತ ಮುದುಕಿಯ ಅಭಿಪ್ರಾಯವಾಗಿದೆ.

### ಕೊಟ್ಟಿರುವ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಡಾಕ್ಟರ್ ಗೆ ವಿಮಾನದ ಪೈಲಟ್ ಏನು ಹೇಳಿದನು ?

ಉ : ರೇಡಿಯೋ ಸಮನಾಗಿ ಕಾರ್ಯನಿರ್ವಹಿಸುತ್ತಿಲ್ಲ.ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ.ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸ್ತಾ ಇಲ್ಲವಲ್ಲ ಎಂದು ವಿಮಾನದ ಪೈಲಟ್ ಡಾಕ್ಟರ್ ಗೆ ಹೇಳಿದನು.

೨. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳು ಯಾವುವು ?
ಉ: ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ ? ಆ ಮನೆಯೊಳಗೆ ಏನು ಸಂಭವಿಸುತ್ತದೆ ?ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು ? ಆ ಮನೆಯಿಂದ ಒಂದೇ ಒಂದು ಬೆಳಕಿನ ಕಿರಣವೂ ಹೊರಗಡೆಗೆ ಹಾಯುತ್ತಿರಲಿಲ್ಲ. ಗಡಿ ಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಬ್ಲಾಕ್ ಔಟ್ ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ ? ಎಂದು ಮಹಿಳೆಯ ಆರ್ತನಾದ ಕೇಳಿದ ರಾಹಿಲನು ಯೋಚಿಸಿದನು.

೩. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು ?
ಉ: ಮುದುಕಿಯು ತಾನು ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು .ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು .ಜಮೀನು ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ . ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ ಯುದ್ಧವಂತೆ ,ಯುದ್ಧ !ಎಂದು ಯುದ್ಧದ ಕುರಿತು ರಾಹಿಲನ ಬಳಿ ತಿರಸ್ಕಾರದಿಂದ ನುಡಿದಳು.

೪. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು ?
ಉ: ಇಷ್ಟು ವರ್ಷಗಳಿಂದಲೂ ಹಂಬಲಿಸಿ ಹುಟ್ಟಿದ ಮಗು ಕೊನೆಗೂ ದಕ್ಕಲಿಲ್ಲವಲ್ಲ ? ಈ ಯುದ್ಧವಲ್ಲದೆ ಹೋಗಿದ್ದರೆ ನನ್ನ ಮಗುವನ್ನು ಹೇಗಾದರೂ ಬದುಕಿಸಿಕೊಳ್ಳುತ್ತಿದ್ದೆವಲ್ಲ ದೇವರೇ ? ಈ ಮನುಷ್ಯರಿಗೆ ಎಂತಹ ಬುದ್ಧಿ ಕೊಡುತ್ತಿಯಾ ? ಎಂದು ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದಳು .

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?
ಉ: ಶತ್ರು ಪಡೆಯ ವೈಮಾನಿಕ ದಾಳಿಯಿಂದ ವಿಮಾನವು ಚೂರಾಗಿ ಸಮುದ್ರದಲ್ಲಿ ಬಿದ್ದ ವೈದ್ಯ ರಾಹಿಲನು ಈಜಿ ದಡ ಸೇರುತ್ತಾನೆ. ಕಾಲಿಗೆ ತೀವ್ರ ಪೆಟ್ಟಾಗಿದ್ದರಿಂದ ಹೆಚ್ಚು ದೂರ ನಡೆಯಲಾರದೆ ಅಲ್ಲಿಯೇ ಸಮೀಪದಲ್ಲಿದ್ದ ಶತ್ರು ದೇಶದ ಮುದುಕಿಯ ಮನೆಯಲ್ಲಿ ಆಶ್ರಯ ಪಡೆದು ಹೆರಿಗೆ ನೋವಿನಿಂದ ಬಳಲುತ್ತಿದ್ದ ಸೊಸೆಯ ಜೀವವನ್ನು ಉಳಿಸುತ್ತಾನೆ. ಶತ್ರು ಸೈನಿಕರನ್ನು ಹುಡುಕುತ್ತ ಬಂದ ತನ್ನ ದೇಶದ ಸೈನಿಕರಿಂದ ಮುದುಕಿಯೂ ಅವನನ್ನು ರಕ್ಷಿಸುತ್ತಾಳೆ. ಒಂದೆರಡು ದಿನಗಳಲ್ಲಿ ಪರಸ್ಪರ ವಿಶ್ವಾಸ ಬೆಳೆದು ರಾಹಿಲ ಮತ್ತು ಮುದುಕಿ ಪರಸ್ಪರ ಮಾತನಾಡುತ್ತಿದ್ದಾಗ ರಾಹಿಲನು ನಿಮ್ಮ ಮಗನೆಲ್ಲಿದ್ದಾನೆ ಎಂದು ವಿಚಾರಿಸುತ್ತಾನೆ. ಆಗ ಮುದುಕಿಯು " ಯುದ್ಧಕ್ಕೆ ಹೋಗಿದ್ದಾನೆ ! ನನ್ನ ಮಗನಿನ್ನೂ ಚಿಕ್ಕವನಿದ್ದಾಗ ಯುದ್ಧಕ್ಕೆ ಹೋದ ಅವನ ತಂದೆ ಹಿಂತಿರುಗಲಿಲ್ಲ.ಎದೆ ತುಂಬ ಬೂದಿ ಮುಚ್ಚಿದ ಕೆಂಡ ,ಎದೆಯ ಗಾಯ ಇಂದಿಗೂ ಇದೆ , ನೋಡು .ಎಲ್ಲ ದುಃಖ ನುಂಗಿಕೊಂಡು ಮಗನನ್ನು ಸಾಕಿ ಸಲುಹಿದೆ.ಮದುವೆಯನ್ನೂ ಮಾಡಿದೆ .ಈಗ ಐದಾರು ವರ್ಷಗಳ ಬಳಿಕ ಸೊಸೆ ಗರ್ಭಿಣಿಯಾದಳು .ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ಮಗನು ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು. ಅಷ್ಟರಲ್ಲಿ ಬಂತು ಯುದ್ಧ !ಅವನೊಮ್ಮೆ ಹಿಂತಿರುಗಿ ಬಂದಿದ್ದರೆ ಸಾಕಾಗಿತ್ತು. ಈ ವಿಷಯ ತಿಳಿದು ಅವನೆಷ್ಟು ಸಂಕಟ ಪಡುತ್ತಾನೋ .. ಎಂದು ರಾಹಿಲನಿಗೆ ವಿವರಿಸಿದಳು.

೨. ರಾಹಿಲನು ಮುದುಕಿಯ ಕುಟುಂಬಕ್ಕೂ ,ಮುದುಕಿಯು ರಾಹುಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

ದೇಶದ ಗಡಿ ಭಾಗದಲ್ಲಿ ಸಮುದ್ರದ ಮೇಲಿನ ಆಕಾಶದಲ್ಲಿ ಹಾರುತ್ತಿದ್ದ ಯುದ್ಧವಿಮಾನದ ಮೇಲೆ ವೈರಿಗಳ ವೈಮಾನಿಕ ದಾಳಿಯಿಂದಾಗಿ ವಿಮಾನವು ನುಚ್ಚುನೂರಾಗಿ ಸಮುದ್ರದ ಮೇಲೆ ಬಿದ್ದಿತು. ಅದರಲ್ಲಿದ್ದ ವೈದ್ಯ ರಾಹಿಲನು ಕಾಲಿಗೆ ತೀವ್ರ ಪೆಟ್ಟಾಗಿದ್ದರೂ ಈಜಿ ದಡ ಸೇರುತ್ತಾನೆ. ಅಲ್ಲಿಯೇ ಇದ್ದ ಅನ್ಯ ದೇಶದವರ ಮನೆಗೆ ಬಂದು ಬಾಗಿಲು ತಟ್ಟುತ್ತಾನೆ. ಬಾಗಿಲು ತೆಗೆದ ಮುದುಕಿಯ ಸೊಸೆಯು ಹೆರಿಗೆಯ ಬೇನೆಯಿಂದ ಬಳಲುತ್ತಿರುತ್ತಾಳೆ. ಆ ವೇಳೆಯಲ್ಲಿ ಆಸ್ಪತ್ರೆಗೆ ಕರೆದೊಯ್ಯುವ ಪರಿಸ್ಥಿತಿಯಲ್ಲಿ ಅವಳಿರಲಿಲ್ಲ. ವೈದ್ಯನಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನು ಮರೆತು ಮಗುವನ್ನು ರಕ್ಷಿಸಲು ಸಾಧ್ಯವಾಗದಿದ್ದರೂ ತಾಯಿಯನ್ನು ರಕ್ಷಿಸುವಲ್ಲಿ ಯಶಸ್ವಿಯಾಗುತ್ತಾನೆ. ಹೀಗೆ ರಾಹಿಲನು ಮುದುಕಿಯ ಕುಟುಂಬಕ್ಕೆ ನೆರವಾಗುತ್ತಾನೆ.

ಅದೇ ವೇಳೆಯಲ್ಲಿ ಅವನನ್ನು ಹುಡುಕುತ್ತ ತನ್ನದೇ ದೇಶದ ಸೈನಿಕರು ಮುದುಕಿಯ ಮನೆಗೆ ಬರುತ್ತಾರೆ. ಬಾಗಿಲು ತೆಗೆಯಬೇಡಿ ಎಂದು ರಾಹಿಲನು ಅಸಹಾಯಕತೆಯ ದಯನೀಯ ನೋಟದಿಂದ ಕೈ ಸನ್ನೆ ಮಾಡಿದಾಗ ಮುದುಕಿಯು ಆ ನೋಟದಲ್ಲಿ ತನ್ನ ಮಗನನ್ನು ಕಾಣುತ್ತಾಳೆ. ಯಾರಾದರೂ ಗಾಯಗೊಂಡ ಸೈನಿಕರು ಈ ಕಡೆ ಬಂದಿದ್ದಾರೆಯೇ ಎಂದು ಕೇಳುತ್ತಾ ಒಳ ನುಗ್ಗಿದಾಗ ಬಂದವರಿಗೆ ಅವಳು ಯಾರೂ ಬಂದಿಲ್ಲ ಎಂದು ಉತ್ತರಿಸಿ ರಾಹಿಲನನ್ನು ರಕ್ಷಿಸುತ್ತಾಳೆ . ಹೀಗೆ ತನಗೆ ಸಹಾಯ ಮಾಡಿದ ರಾಹಿಲನಿಗೆ ಮುದುಕಿಯು ಪ್ರತಿಯಾಗಿ ಅವನನ್ನು ಸೈನಿಕರ ದಾಳಿಗೆ ತುತ್ತಾಗುವುದರಿಂದ ರಕ್ಷಿಸಿ ಪ್ರತ್ಯುಪಕಾರ ಮಾಡುತ್ತಾಳೆ.

೩. ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

ಉ: ಯುದ್ಧದ ಪರಿಣಾಮ ಯಾವಾಗಲೂ ಸರ್ವನಾಶವೇ .ಯುದ್ಧಕ್ಕೆ ಕಾರಣ ಯಾರೇ ಆಗಿದ್ದರೂ ಅದರ ಪರಿಣಾಮವನ್ನು ಎಲ್ಲರೂ ಅನುಭವಿಸಬೇಕಾಗುತ್ತದೆ. ಯುದ್ಧದ ಭೀಕರತೆಯು ಧರ್ಮ ,ದೇಶಗಳ ಭೇದವಿಲ್ಲದೆ ಭಾಗಿಯಾದ ಸೈನಿಕರಿಗೂ ಅವರ ಕುಟುಂಬ ವರ್ಗದವರಿಗೂ ಹಾಗೂ ದೇಶಕ್ಕೂ ನಾನಾ ರೀತಿಯ ಸಂಕಷ್ಟಗಳನ್ನು ತಂದೊಡ್ಡುತ್ತದೆ. ಯುದ್ಧ ಒಂದು ಪೀಳಿಗೆಯ ಸುಖೀ ಜೀವನವನ್ನು ಕಸಿಯಬಲ್ಲುದು. ದುಡಿಯುವ ತಂದೆ ,ಮಗ ಅಥವಾ ಗಂಡನನ್ನು ಆಶ್ರಯಿಸಿದವರ ಬದುಕನ್ನೇ ಯುದ್ಧ ಕಸಿದುಕೊಂಡು ಬಿಡುತ್ತದೆ. ಭೌತ ಸ್ವರೂಪದ ಹಾನಿ ಉಂಟಾಗಿ ಗತಿಚಕ್ರ ಹಿಂದಕ್ಕೆ ಓಡುತ್ತದ. ಯುದ್ಧವೆನ್ನುವುದು ಮಾನವ ನಿರ್ಮಿತ ಕೆಡುಕಿನ ಕಾರ್ಯ .ಯುದ್ಧದಲ್ಲಿ ಬಳಕೆಯಾಗುವ ಬಾಂಬ್ ಗಳಿಂದ ಪರಿಸರದ ಮೇಲೆ ಪ್ರತಿಕೂಲ ಪರಿಣಾಮಗಳುಂಟಾಗಿ ಮಾನವ ಮತ್ತು ಪ್ರಾಣಿ,ಸಸ್ಯವರ್ಗಗಳ ಮೇಲೆ ಅದು ದುಷ್ಪರಿಣಾಮವನ್ನು ಉಂಟು ಮಾಡುವುದು. ಒಟ್ಟಾರೆಯಾಗಿ ಯುದ್ಧದಿಂದ ಯಾರಿಗೂ ನೆಮ್ಮದಿ ಉಂಟಾಗಲು ಸಾಧ್ಯವಿಲ್ಲ.

## ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ದಯವಿಟ್ಟು ಬಾಗಿಲು ತೆಗೆಯಿರಿ. ನಾನು ಗಾಯಗೊಂಡಿದ್ದೇನೆ? "

ಉ: ಈ ಮೇಲಿನ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದುಕೊಳ್ಳಲಾದ ' 'ಯುದ್ಧ ' ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಹಿಲನು ಹೇಳಿದ್ದಾನೆ.

ಸಂದರ್ಭ :ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಶತ್ರು ಸೈನಿಕರ ವೈಮಾನಿಕ ದಾಳಿಯಿಂದ ವಿಮಾನವು ನುಚ್ಚುನೂರಾಗಿ ಸಮುದ್ರ ಪಾಲಾದಾಗ ಅದರಲ್ಲಿದ್ದ ವೈದ್ಯ ರಾಹಿಲನು ಕಾಲಿಗೆ ಪೆಟ್ಟಾಗಿದ್ದರೂ ಕಷ್ಟಪಟ್ಟು ಈಜಿ ದಡ ಸೇರುತ್ತಾನೆ. ಆ ವೇಳೆಯಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು ಮಳೆಯಿಂದ ಮೊದಲು ರಕ್ಷಣೆ ಪಡೆಯಬೇಕೆಂದು ಯೋಚಿಸಿ ನಡೆಯುತ್ತಿದ್ದಾಗ ಅಲ್ಲೇ ಸಮೀಪದಲ್ಲಿದ್ದ ಮನೆಯೊಳಗಿಂದ ಮಹಿಳೆಯ ಆರ್ತನಾದ ಕೇಳಿಬರುತ್ತದೆ. ಆ ಮನೆಯೊಳಗೆ ಯಾವ ಕ್ರೌರ್ಯ ನಡೆಯುತ್ತಿರಬಹುದು ಎಂದು ಯೋಚಿಸಿದ ರಾಹಿಲನು ಅಲ್ಲಿಯೇ ಆಶ್ರಯ ಪಡೆಯುವ ಸಲುವಾಗಿ ಬಾಗಿಲು ಬಡಿಯುವಾಗ ಮೇಲಿನಂತೆ ಹೇಳುವನು.

ಸ್ವಾರಸ್ಯ : ರಾಹಿಲನು ಶತ್ರು ದೇಶದವರ ಮನೆಯಲ್ಲಿಯೇ ರಕ್ಷಣೆ ಪಡೆಯಲು ಪ್ರಯತ್ನಿಸುವ ಸನ್ನಿವೇಶ ಇಲ್ಲಿನ ಸ್ವಾರಸ್ಯವಾಗಿದೆ.

೨. “ ನಾನಾಕೆಯನ್ನು ಪರೀಕ್ಷಿಸುವೆ, ನೀವು ಬಿಸಿ ನೀರು ಸಿದ್ಧಪಡಿಸಿ. ”
ಉ : ಈ ಮೇಲಿನ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದುಕೊಳ್ಳಲಾದ ' 'ಯುದ್ಧ ' ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ರಾಹಿಲನು ಹೇಳಿದ್ದಾನೆ.
ಸಂದರ್ಭ : ಯುದ್ಧದಲ್ಲಿನ ವೈಮಾನಿಕ ದಾಳಿಯಿಂದ ಪಾರಾದ ವೈದ್ಯ ರಾಹಿಲನು ಗಾಯಗೊಂಡು ರಕ್ಷಣೆಗಾಗಿ ಶತ್ರು ದೇಶದವರ ಮನೆಯ ಬಾಗಿಲು ಬಡಿಯುತ್ತಾನೆ. ಬಾಗಿಲು ತೆಗೆದು ಒಳ ಕರೆದುಕೊಂಡ ಮುದುಕಿಯ ಸೊಸೆಯು ಹೆರಿಗೆಯ ಬೇನೆಯಿಂದ ನರಳುತ್ತಿರುತ್ತಾಳೆ. ಡಾಕ್ಟರಾಗಿದ್ದ ರಾಹಿಲನು ತನ್ನ ಕಾಲಿನ ನೋವನ್ನು ಮರೆತು ಆಕೆಯನ್ನು ಪರೀಕ್ಷಿಸಲು ಮುಂದಾಗುವಾಗ ಮುದುಕಿಗೆ ಮೇಲಿನಂತೆ ಹೇಳುತ್ತಾನೆ.
ಸ್ವಾರಸ್ಯ: ಅನ್ಯದೇಶದವರ ಕುಟುಂಬದಲ್ಲಿ ಉಂಟಾಗಿದ್ದ ಸಂಕಷ್ಟವನ್ನು ತಾನು ನೋವಿನಲ್ಲಿದ್ದರೂ ಪರಿಹರಿಸಲು ಪ್ರಯತ್ನಿಸುವ ಮಾನವೀಯ ಗುಣ ಮತ್ತು ಅವನ ವೃತ್ತಿ ಧರ್ಮ ಇಲ್ಲಿ ವ್ಯಕ್ತವಾಗಿದೆ.

೩. " ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ ?”
ಉ: ಈ ಮೇಲಿನ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದುಕೊಳ್ಳಲಾದ ' 'ಯುದ್ಧ ' ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಮುದುಕಿಯು ಹೇಳಿದ್ದಾಳೆ.
ಸಂದರ್ಭ : ವೈಮಾನಿಕ ದಾಳಿಯಲ್ಲಿ ಪ್ರಾಣ ಉಳಿಸಿಕೊಂಡ ರಾಹಿಲ ಸಮುದ್ರದಲ್ಲಿ ಈಜಿ ಶತ್ರು ದೇಶದ ಮುದುಕಿಯ ಮನೆಯಲ್ಲಿಯೇ ರಕ್ಷಣೆ ಪಡೆದುಕೊಳ್ಳುತ್ತಾನೆ. ಅದೇ ವೇಳೆಯಲ್ಲಿ ಹೆರಿಗೆಯ ಬೇನೆಯಿಂದ ಬಳಲುತ್ತಿದ್ದ ಮುದುಕಿಯ ಸೊಸೆಯ ಪ್ರಾಣವನ್ನು ಉಳಿಸುವಲ್ಲಿ ಸಫಲನಾಗುತ್ತಾನೆ. ಆಗ ಅವನನ್ನು ಹುಡುಕುತ್ತ ಶತ್ರು ದೇಶದ ಸೈನಿಕರು ಅದೇ ಮನೆಯ ಬಳಿ ಬಂದು ಬಾಗಿಲು ತೆಗೆಯುವಂತೆ ಹೇಳುತ್ತಾರೆ. ಮುದುಕಿಯು ಮನೆಯಲ್ಲಿ ಆಶ್ರಯ ಪಡೆದಿರುವವನು ತಮ್ಮವನಲ್ಲ ,ತಮ್ಮ ದೇಶಕ್ಕೆ ದ್ರೋಹ ಬಗೆಯುವವನು ಎಂದು ಆಲೋಚಿಸಿ ರೋಷದಿಂದ ಬಾಗಿಲು ತೆಗೆಯಲು ಹೊರಟು ರಾಹಿಲನ ಕಡೆ ನೋಡಿದಾಗ ಅವನ ಅಸಹಾಯಕತೆಯ ನೋಟ ನೋಡಿ ತನ್ನ ಮನದಲ್ಲಿ ಮೇಲಿನಂತೆ ಅಂದುಕೊಳ್ಳುತ್ತಾಳೆ.
ಸ್ವಾರಸ್ಯ:ಯುದ್ಧಕ್ಕೆ ಹೋದ ತನ್ನ ಮಗನನ್ನು ರಾಹಿಲನಲ್ಲಿ ಕಾಣುವ ಮುದುಕಿಯ ಅಸಹಾಯಕ ಭಾವನೆ ಇಲ್ಲಿ ವ್ಯಕ್ತವಾಗಿದೆ.

೪. “ ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ! ”
ಉ: ಈ ಮೇಲಿನ ವಾಕ್ಯವನ್ನು ಸಾರಾ ಅಬೂಬಕ್ಕರ್ ಅವರು ಬರೆದಿರುವ 'ಚಪ್ಪಲಿಗಳು' ಕಥಾ ಸಂಕಲನದಿಂದ ಆಯ್ದುಕೊಳ್ಳಲಾದ ' 'ಯುದ್ಧ ' ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಮುದುಕಿಯು ಹೇಳಿದ್ದಾಳೆ.
ಸಂದರ್ಭ : ಶತ್ರು ದೇಶದ ರಾಹಿಲನಿಗೆ ಮುದುಕಿಯು ಆಶ್ರಯ ನೀಡಿದ ಮನೆಗೆ ಆ ದೇಶದ ಸೈನಿಕರು ಯಾರಾದರೂ ಶತ್ರು ಸೈನಿಕರು ಬಂದಿದ್ದಾರೆಯೆ ಎಂದು ಹುಡುಕಲು ಬರುತ್ತಾರೆ. ಮುದುಕಿಯು ಮನೆಗೆ ಯಾರೂ ಬಂದಿಲ್ಲವೆಂದು ಹೇಳಿದರೂ ಬಂದವರಲ್ಲಿ ಒಬ್ಬಾತ ಯಾವುದಕ್ಕೂ ಮನೆಯನ್ನೊಮ್ಮೆ ನೋಡಿ ಬಿಡಿ ಎನ್ನುತ್ತಾನೆ. ಆಗ ಮುದುಕಿಯು ಅಳುತ್ತಾ ಮೇಲಿನಂತೆ ಹೇಳುತ್ತಾ ಯಾರಿಗಾಗಿ ಯಾತಕ್ಕಾಗಿ ಯುದ್ಧ ? ಈ ಯುದ್ಧ ನನ್ನ ಮೊಮ್ಮಗುವನ್ನೂ ಉಳಿಸಲಿಲ್ಲ ಎಂದು ಹೇಳುತ್ತಾಳೆ.
ಸ್ವಾರಸ್ಯ : ಯುದ್ಧವು ಯಾರಿಗೂ ಒಳಿತು ಮಾಡುವುದಿಲ್ಲ ಎಂಬ ಭಾವದ ಜೊತೆಗೆ ಮುದುಕಿಯು ಮೊಮ್ಮಗುವನ್ನು ಕಳೆದುಕೊಂಡ ಅಸಹಾಯಕತೆಯನ್ನು ವ್ಯಕ್ತಪಡಿಸಿರುವುದು ಇಲ್ಲಿ ವ್ಯಕ್ತವಾಗಿದೆ.

## ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. ರಾಹಿಲನ ದೇಹದಲ್ಲಿ ---- ಸಂಚಾರವಾದಂತಾಯಿತು. ( ಅ)ಶಕ್ತಿ ಆ)ವಿದ್ಯುತ್ ಇ)ಹೊಸರಕ್ತ ಈ)ಮಿಂಚು )
ಉತ್ತರ : ಇ) ಹೊಸರಕ್ತ
೨. ನರಳಾಟದ ಬೆನ್ನಲ್ಲೇ ಹಿರಿಯ ಹೆಂಗಸೊಬ್ಬಳ __ಕೇಳಿ ಬಂತು .(ಅ)ಆರ್ತನಾದ ಆ)ಆಳು ಇ)ಚೀರಾಟ ಈ)ಸಾಂತ್ವನ )

ಉತ್ತರ : ಈ) ಸಾಂತ್ವನ

೩. ಮುದುಕಿ ಮತ್ತು ಸೊಸೆಯ -- ಮನೆಯ ಮೂಲೆಮೂಲೆಯಲ್ಲಿ ಪ್ರತಿಧ್ವನಿಸಿತು.(ಅ)ಸಂತಸ ಆ)ಜಗಳ ಇ)ರೋದನ ಈ)ಸಂಗೀತ ) ಉತ್ತರ : ಇ) ರೋದನ

೪. ಯಾರಾದರೂ ಗಾಯಗೊಂಡ ___ ಈ ಕಡೆ ಬಂದಿದ್ದಾರೆಯೇ ?( ಅ)ಜನರು ಆ) ಸೈನಿಕರು ಇ)ಗಂಡಸರು ಈ)ಹೆಂಗಸರು ) ಉತ್ತರ : ಆ) ಸೈನಿಕರು

೫. ಮನೆಯಲ್ಲೊಂದು ಪುಟ್ಟ ಮಗುವಿನ ಅಳು ಕೇಳಲು ನನ್ನ ---- ತುದಿಗಾಲಲ್ಲಿ ನಿಂತು ಕಾಯುತ್ತಿದ್ದನು.

(ಅ)ತಂದೆಯು ಆ) ತಾಯಿಯು ಇ)ಮಗಳು ಈ)ಮಗನು ) ಉತ್ತರ : ಈ) ಮಗನು

***ಕೊಟ್ಟಿರುವ ಪದಗಳಲ್ಲಿ ವಿಜಾತೀಯ ಸಂಯುಕ್ತಾಕ್ಷರಗಳನ್ನು ಆರಿಸಿ ಬರೆಯಿರಿ.***

ಕಾರ್ಯ,ಕತ್ತಲೆ, ಇಲ್ಲ, ಶಸ್ತ್ರ, ಸ್ಫೋಟಿಸು ,ಎಚ್ಚರ , ಕಣ್ಣೆಗೆ , ಅದ್ಭುತ , ಡಾಕ್ಟರ್ , ಬಟ್ಟೆ

ಕಾರ್ಯ, ಶಸ್ತ್ರ , ಸ್ಫೋಟಿಸು , ಅದ್ಭುತ , ಡಾಕ್ಟರ್ (ರ್ಯ, ಸ್ತ್ರ,ಸ್ಫೋ, ದ್ಭು,ಕ್ಟ )

***ನೀಡಿರುವ ಪದಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳನ್ನು ಆರಿಸಿ ಬರೆಯಿರಿ.***

ಸಮನಾಗಿ, ದೇಶ, ಮನೆಯ , ರೋದನ , ಬಳಿಕ, ನೆಲ, ಮದುವೆ, ಮಾನುಷ, ಹೊತ್ತು ,ಒಳಗೆ .

ಸಮನಾಗಿ : ಸ ದೇಶ : ಶ ಮನೆಯ : ಯ ರೋದನ : ರೋ ನೆಲ : ಲ ಮದುವೆ : ವೆ ಮಾನುಷ : ಷ ಹೊತ್ತು :ಹೊ ಒಳಗೆ : ಳ

***ಈ ಪಾಠದಲ್ಲಿ ಬರುವ ಇಂಗ್ಲಿಷ್ ಪದಗಳನ್ನು ಪಟ್ಟಿ ಮಾಡಿ.*** ಡಾಕ್ಟರ್, ರೇಡಿಯೋ, ಗ್ರೌಂಡ್, ಪೈಲಟ್ ,ಬ್ಲಾಕ್ ಔಟ್ , ಪ್ಲೀಸ್

೪. ***ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ನಾಲ್ಕನೆಯ ಪದವನ್ನು ಬರೆಯಿರಿ.***

ಅ)ಕ್,ಗ್: ಅಲ್ಪಪ್ರಾಣಾಕ್ಷರಗಳು : : ಛ, ಝ : __ (ಮಹಾಪ್ರಾಣಾಕ್ಷರಗಳು)

ಆ) ವರ್ಗೀಯ ವ್ಯಂಜನಾಕ್ಷರಗಳು : ೨೫ : : ಅವರ್ಗೀಯ ವ್ಯಂಜನಾಕ್ಷರಗಳು : __ (೯)

ಇ)ಆ , ಈ, ಊ : ದೀರ್ಘಸ್ವರಗಳು : : ಅ,ಇ,ಉ,ಋ : ___ (ಹ್ರಸ್ವಸ್ವರಗಳು )

ಈ ) ಸ್ವರಗಳು : ೧೩ : : ಯೋಗವಾಹಗಳು : -- (೨)

| | |
|---|---|
| ಘಟಕ ಪರೀಕ್ಷೆ –೧ ೨೦ ಅಂಕಗಳು<br>ಸಾರಾಅಬೂಬಕ್ಕರ ಅವರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು<br>ಒಂದು ವಾಕ್ಯದಲ್ಲಿ ಉತ್ತರಿಸಿ ೩*೧=೩<br>೧. ರಾಹಿಲನು ಯಾರು ?೨ .ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾಯವೇನು?<br>೩.ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು ?<br>ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ ೨*೩=೬ .<br>೧. ದಯವಿಟ್ಟು ಬಾಗಿಲು ತೆಗೆಯಿರಿ.ನಾನು ಗಾಯಗೊಂಡಿದ್ದೇನೆ . ೨.ನಾನಾಕೆಯನ್ನು ಪರೀಕ್ಷಿಸುವೆ .ಬಿಸಿನೀರು ಸಿದ್ಧಪಡಿಸಿ.<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ ೨*೪=೮<br>.೧. ಮುದುಕಿಯು ತನ್ನ ಮಗನುಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು?೨.ರಾಹಿಲನು ಮುದುಕಿಯ ಕುಟುಂಬಕ್ಕು ಮುದುಕಿಯು ರಾಹಿಲನ ಕುಟುಂಬಕ್ಕೂ ಮಾಡಿದ ಸಹಾಯ ವಿವರಿಸಿ. | ಘಟಕ ಪರೀಕ್ಷೆ –೨<br>ಒಂದು ವಾಕ್ಯದಲ್ಲಿ ಉತ್ತರಿಸಿ. ೨*೧=೨<br>೧.ರಾಹಿಲನು ತುರ್ತು ಪರಿಸ್ಥಿತಿ ನಿರ್ವಹಣೆಗೆ ಭದ್ರವಾಗಿ ಹಿಡಿದುಕೊಂಡಿದ್ದೇನು ?<br>೨.ಗಡಿಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಪಾಲಿಸಲಾಗುತ್ತದೆ ?<br>ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೪*೨=೮<br>೧.ಡಾಕ್ಟರ್ ಗೆ ವಿಮಾನದ ಪೈಲಟ್ ಏನು ಹೇಳಿದನು?೨. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳು ಯಾವುವು ?<br>೩.ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳು ಯಾವುವು ?೪. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು ?<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.೨*೩=೬ ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆಯಲ್ಲ.೨. ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ ಅದನ್ನೂ ನೋಡಿ<br>೮ ರಿಂದ ೧೦ ವಾಕ್ಯಗಳಲ್ಲಿ ಉತ್ತರಿಸಿ.<br>ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ. |

# ಗದ್ಯ ಪಾಠ ೨. – ಶಬರಿ –ಪು.ತಿ.ನ.

## ಕೃತಿಕಾರರ ಪರಿಚಯ :



ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ ಕ್ರಿ.ಶ.೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಇವರು ಅಹಲ್ಯೆ ,ಶಬರಿ ,ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು,ಹಣತೆ,ರಸಸರಸ್ವತಿ,ಗಣೇಶದರ್ಶನ ,ಶಾರದಯಾಮಿನಿ,ಶ್ರೀಹರಿಚರಿತೆ,ರಥಸಪ್ತಮಿ ಮೊದಲಾದ ಕೃತಿಗಳನ್ನು ಬರೆದಿದ್ದಾರೆ.

ಇವರ ಹಂಸ ದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,ಶ್ರೀಹರಿಚರಿತೆ ಕಾವ್ಯಕ್ಕೆ ಪಂಪ ಪ್ರಶಸ್ತಿ , ಲಭಿಸಿದೆ. ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ.

ಪ್ರಸ್ತುತ ಶಬರಿ ಗೀತನಾಟಕವನ್ನು ಶ್ರೀರಂಗ ಮತ್ತು ನಾ .ಕಸ್ತೂರಿಯವರು ಸಂಪಾದಿಸಿದ **ಏಕಾಂಕನಾಟಕಗಳು** ಕೃತಿಯಿಂದ ಆಯ್ದುಕೊಳ್ಳಲಾಗಿದೆ .

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಶ್ರೀರಾಮನ ತಂದೆಯ ಹೆಸರೇನು ?

ಉ: ಶ್ರೀರಾಮನ ತಂದೆಯ ಹೆಸರು ದಶರಥ .

೨. ಲಕ್ಷ್ಮಣನ ತಾಯಿ ಯಾರು ?

ಉ: ಲಕ್ಷ್ಮಣನ ತಾಯಿ ಸುಮಿತ್ರೆ

೩.ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?

ಉ: ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ .

೪.ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

ಉ: ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಧನು .

೫. ಶಬರಿ ಗೀತ ನಾಟಕದ ಕರ್ತೃ ಯಾರು ?

ಉ: ಶಬರಿ ಗೀತ ನಾಟಕದ ಕರ್ತೃ ಪು.ತಿ.ನರಸಿಂಹಾಚಾರ್

## ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

ಉ: ದೊರೆವಳೇ ಸೀತೆ | ಭೂಮಿಜಾತೆ ಆತ್ಮಕಾಮಕಲ್ಪಲತೆ ದೊರೆವಳೇಚೆಲುವೆ ?ಎರೆವೆ ಎರೆವೆ ಗಿರಿವನವೇ, ಪೇಳಿರಿ ನಾನೆರೆವೆ ದೊರೆವಳೇ?ದೊರೆಯಳೇ ?ಅವಳ ನೆಲೆ ಯಾರು ಅರಿಯಿರೇ, ಪೇಳಿ ಎನ್ನರಸಿ ದೊರೆಯಳೇ ?ಈ ಬೇಗೆ ಕೆಡದಲಾ| ನನ್ನೆದೆಯ ಬಿಡದಲಾ ಈ ಜಗವ ಸುಡದಲಾ |ಹಾ !ಹಾ! ಹಾ!ಎಂದು ರಾಮನು ಗಿರಿವನವನ್ನು ಪ್ರಾರ್ಥಿಸಿದನು .

೨.ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?
ಉ: ತಾಳಿಕೋ ಅಣ್ಣ ತಾಳಿಕೋ |ಸೂರ್ಯನೇ ತೇಜಗೆಡೆ ತೇಜಕೆಡೆಯಾರು ?ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆಯಾರು ? ಚಿತ್ರಕೂಟದಲ್ಲಿದ್ದ ಸಂದರ್ಭದಲ್ಲಿ ನಾನು ಆಕೆಯನ್ನು ಒಂಟಿಯಾಗಿ ಬಿಟ್ಟು ಹೋಗಿದ್ದರಿಂದ ಈ ಗತಿ ಒದಗಿತು. ನಾನು ಹಾಗೆ ಮಾಡಬಾರದಾಗಿತ್ತು ಎಂದು ಹೇಳುತ್ತ ಲಕ್ಷ್ಮಣನು ರಾಮನನ್ನು ಸಂತೈಸಿದನು.

೩.ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?
ಉ: ಶಬರಿ ಪ್ರತಿದಿನವೂ ರಾಮ ಬರುವನೆಂದು ಅವನಿಗಾಗಿ ಒಳ್ಳೆಯ ಸಿಹಿಯಾದ ಹಣ್ಣುಗಳನ್ನು ಆಯ್ದು ತರುವಳು.ಒಳ್ಳೆಯ ಸುವಾಸನೆಭರಿತ ಹೂವುಗಳನ್ನು ಹುಡುಕಿ ತಂದು ರಾಮನಿಗಾಗಿ ಮಾಲೆಯನ್ನು ಸಿದ್ಧಪಡಿಸುವಳು. ಮಧುಪರ್ಕವನ್ನು ರಾಮನಿಗಾಗಿ ಅಣಿಗೊಳಿಸುವಳು. ರಾಮನಿಗೆ ಅರ್ಪಿಸಲು ಅಣಿಗೊಳಿಸಿದ ಹೂ ಹಣ್ಣುಗಳು ಅವನಿಗೆ ಅರ್ಪಿಸಲಾಗದೇ ವ್ಯರ್ಥವಾದುದರ ಕುರಿತು ಚಿಂತಿಸುತ್ತ ಮತ್ತೆ ಅವನಿಗೆ ಅರ್ಪಿಸಲು ಪ್ರತಿದಿನವೂ ಹೊಸತನ್ನು ಆಯ್ದುತರುವಳು.ರಾತ್ರಿಯ ಕತ್ತಲನ್ನು ಹೋಗಲಾಡಿಸುವ ಚಂದ್ರನೇ ರಾಮಾ ಬಾ ,ನೀನು ಬಂದು ಈಹಣ್ಣು ಗಳನ್ನು ಸೇವಿಸದೇ ನನಗೇನೂ ಸೇರದು ಎಂದು ರಾಮನ ಸ್ವಾಗತಕ್ಕಾಗಿ ಕಾಯುವಳು.

೪.ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
ಉ: ರಾಮಲಕ್ಷ್ಮಣರನ್ನು ನೋಡಿದ ಶಬರಿಯು ಕ್ಷಣಹೊತ್ತು ಬೆರಗಾದಳು.ಬೆರಗು ಕಳೆದ ಬಳಿಕ ಅವನ ಸನಿಹ ಹೋಗಿ ಮೈಯನ್ನು ಸ್ಪರ್ಷಿಸಿ ,ಪಾದಕ್ಕೆರಗಿ ಕೈಯನ್ನು ಕಣ್ಣಿಗೊತ್ತಿಕೊಂಡು ಕಂಬನಿಗರೆದಳು.ಬನ್ನಿರಿ ಎಂದು ಗದ್ಗದಿಸುತ್ತ ಅವನನ್ನು ಉಪಚರಿಸಲು ಅವಳು ಮಾಡಿದ ಸಿದ್ಧತೆ ಸಾಲದೆಂದು ಮರುಗಿದಳು.ಪರಿಮಳವನ್ನು ಸೂಸುವ ವಿವಿಧ ಹೂವುಗಳಿಂದ ಕಟ್ಟಲಾದ ವನಮಾಲೆಯನ್ನು ಕೊರಳಿಗಿಟ್ಟು ಹಿಗ್ಗಿದಳು.ತಾನು ರಾಮನಿಗೆಂದು ತಂದಿರುವ ಹಣ್ಣಿನಷ್ಟು ರುಚಿಯಾದ ಹಣ್ಣು ಈ ಜಗದಲ್ಲಿಯೇ ಇಲ್ಲವೆಂದು ,ನಿಮಗಾಗಿಯೇ ಇದನ್ನು ತಂದಿರುವೆನೆಂದು ಅವರಿಗಿತ್ತು ಉಪಚರಿಸುವಳು.

೫.ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು ?
ಉ: ನಿನ್ನ ಆದರಾತಿಥ್ಯದಿಂದ ನಾವು ಸಂತೃಪ್ತರು.ನಿನ್ನ ಸುಖದಲ್ಲಿಯೇ ನಾವು ಸುಖಿಗಳು.ಈ ಕಾಡಿನಲ್ಲಿಯೇ ಜೀವನದ ಸಂತೃಪ್ತಿ ಕಾಣುವ ನಿನ್ನ ಪುಣ್ಯಕ್ಕೆ ನಾವೂ ನಿನಗೆ ಋಣಿಗಳಾಗಿದ್ದೇವೆ ಎಂದು ತಮ್ಮನ್ನುಉಪಚರಿಸಿದ ಶಬರಿಗೆ ರಾಮನು ನುಡಿದಾಗ ಈ ಬಡವಿಯ ಬಗ್ಗೆ ಮರುಕವೇ ಎಂದು ಶಬರಿ ಪ್ರಶ್ನಿಸುವಳು.ಆಗ ರಾಮನು ನಿನ್ನ ಸೇವೆಯಲ್ಲಿ ಸ್ವಲ್ಪವೂ ಕೊರತೆಯಿಲ್ಲ.ಅಯೋಧ್ಯೆಯ ಅರಮನೆಯಲ್ಲಿ ಪಡೆದದ್ದಕ್ಕಿಂತ ಹೆಚ್ಚಿನ ಸತ್ಕಾರ ನಿನ್ನಿಂದ ದೊರೆಯಿತು.ಇದರಿಂದ ನಾವು ಕಾಡನ್ನೇ ಮರೆತು ಇದೇ ಮನೆಯೆಂದು ತಿಳಿದು ಇಷ್ಟು ಆದರ ಪ್ರೀತಿ ತೋರಿದ ನಿನ್ನಲ್ಲೇ ಮಾತೃಸ್ವರೂಪವನ್ನು ನೋಡಿದೆವು ಎಂದು ಹೇಳಿದನು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.
ಉ: ಮತಂಗ ಮಹರ್ಷಿಗಳಿಂದ ರಾಮನ ದರ್ಶನದಿಂದಲೇ ಮೋಕ್ಷ ಸಿದ್ಧಿ ಎಂಬ ವರವನ್ನು ಪಡೆದಿದ್ದ ಶಬರಿ ರಾಮನ ಬರುವಿಕೆಗಾಗಿ ಕಾದಿದ್ದಳು.ಶಬರಿಯ ಎಷ್ಟೋ ವರ್ಷಗಳ ಕಾಯುವಿಕೆಯ ತಪಸ್ಸು ಕೊನೆಗೂ ಈಡೇರುವಂತೆ ರಾಮನ ದರ್ಶನದ ದಿನ ಸಮೀಪಿಸಿತು.ರಾಮ ಬರುವನೆಂದು ಶಬರಿ ಹೂ ಹಣ್ಣುಗಳನ್ನು ತಂದು ದಿನವೂ ಕಾಯುತ್ತಿದ್ದಳು.ಅಂತೂ ಶಬರಿಯ ಆಸೆ ಪೂರೈಸಲೋ ಎಂಬಂತೆ ಸೀತೆಯನ್ನರಸುತ್ತ ರಾಮ ಲಕ್ಷ್ಮಣ ಸಮೇತನಾಗಿ ಮತಂಗಾಶ್ರಮಕ್ಕೆ ಬಂದನು.ಅಲ್ಲಿ

ತನಗಾಗಿ ಕಾದಿದ್ದ ಶಬರಿಯು ನೀಡಿದ ಹೂ ಹಣ್ಣುಗಳ ಸೇವೆ ಉಪಚಾರದಿಂದ ರಾಮ ಸಂತಸಭರಿತನಾದನು..ರಾಮನ ದರ್ಶನದಿಂದ ಶಬರಿಗೆ ಪರಮಾನಂದವಾಯಿತು.ನಾನು ಸುಖಿ ಪರಮ ಸುಖಿ ,ಇಂದೆನಗೆ ಬಲು ಸಂತಸವಾಗಿದೆ ಎಂದು ಹಿಗ್ಗಿಹಾಡುವಳು .ರಾಮನ ದಿವ್ಯದರ್ಶನ , ವಿನಯಾದರ ತುಂಬಿದ ಮಾತುಗಳನ್ನು ಕೇಳಿ ಶಬರಿ ತಾನು ಧನ್ಯಳಾದೆನೆಂದು,ರಾಮನ ದರ್ಶನದ ಪುಣ್ಯ ಲಭಿಸಿ ತನ್ನ ಚಿಂತೆಯೆಲ್ಲ ಇಂಗಿ ಹೋಯಿತೆಂದು ಧನ್ಯತಾಭಾವವನ್ನು ತಾಳಿದಳು.

೨. ಶಬರಿಯ ಸಡಗರ , ಸಂತೋಷವು ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?

ಉ: ಮಸೀತೆಯನ್ನರಸುತ್ತ ರಾಮಲಕ್ಷ್ಮಣರು ಮತಂಗಾಶ್ರಮದ ಬಳಿ ಶಬರಿಯಿರುವಲ್ಲಿಗೆ ಬರುತ್ತಾರೆ.ರಾಮ ಬಂದು ಎದುರಿಗೆ ನಿಂತಿರುವುದನ್ನು ನೋಡಿದ ಶಬರಿ ಬೆರಗಾದಳು.ಬಳಿಕ ಸಾವರಿಸಿಕೊಂಡು ಅವನ ಸನಿಹಬಂದು ಅವನ ಮೈಯನ್ನು ಸ್ಪರ್ಷಿಸಿದಳು.ಅವನ ಕಾಲಿಗೆ ಬಿದ್ದು ನಮಸ್ಕರಿಸಿದಳು.ರಾಮನ ಕೈಗಳನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು .ಬನ್ನಿರಿ ಎಂದು ಗದ್ಗದಿಸುತ್ತ ಒಳ ಕರೆದು ಆದರಿಸಿದಳು.ಅಯ್ಯೋ,ಏನೂ ಸಿದ್ಧತೆಯೇ ಇಲ್ಲ ,ನಿನ್ನೆಯಷ್ಟು ಚೆನ್ನಾಗಿರುವ ಹೂ ಹಣ್ಣುಗಳು ದೊರೆತೇ ಇಲ್ಲ ಎಂದು ತಳಮಳಿಸಿದಳು.ತನ್ನ ಮನದ ಬಯಕೆಯಂತೆ ಸುಮಧುರ ಪರಿಮಳ ಬೀರುವ ಹೂಗಳ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ನಲಿದಳು.ಇಷ್ಟು ರುಚಿಯಾಗಿರುವ ಹಣ್ಣು ಜಗತ್ತಿನಲ್ಲಿಯೇ ಇಲ್ಲ ಎಂದು ನಿಮಗೋಸ್ಕರವಾಗಿಯೇ ತಂದೆನೆಂದು ಅವರ ಕೈಯೊಳಗಿತ್ತು ಆದರಿಸಿದಳು.ರಾಮ ಲಕ್ಷ್ಮಣರು ಶಬರಿಯ ಆತಿಥ್ಯದಿಂದ ಸಂತೃಪ್ತರಾದಾಗ ಅವಳಲ್ಲಿ ಧನ್ಯತಾಭಾವ ಮೂಡುವುದು.

೩. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

ಉ: ಮತಂಗರ ಆಶ್ರಮದಲ್ಲಿದ್ದ ಶಬರಿಯು ನಿಷ್ಠೆಯಿಂದ ಅವರಿಗೆ ಸಲ್ಲಿಸಿದ ಸೇವೆಯ ಫಲವಾಗಿ ಶ್ರೀರಾಮನ ದರ್ಶನದಿಂದ ಅವಳಿಗೆ ಮುಕ್ತಿ ಎಂಬ ವರವನ್ನು ಅವರಿಂದ ಪಡೆದಿದ್ದಳು.ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆ ಸಿಕ್ಕಿ ಅವನನ್ನುಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಇವಳೂ ಒಬ್ಬಳಾಗಿದ್ದಳು.ಮತಂಗರು ದಿವ್ಯ ಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು.ಪ್ರತಿದಿನವೂ ಹೊಸ ಹೂ ಹಣ್ಣುಗಳನ್ನು ತಂದು ರಾಮನು ಬಂದಾಗ ಅವನಿಗೆ ಅರ್ಪಿಸಬೇಕೆಂದು ಕಾಯುತ್ತಿದ್ದಳು.ರಾಮ ಬಾರದೇ ತನಗೇನೂ ತೋರದೆಂದು ,ಅವನು ಸವಿದಲ್ಲದೇ ಈ ಹಣ್ಣುಗಳು ಸವಿಯಾಗದೆಂದು ಪರಿತಪಿಸುತ್ತಿದ್ದಳು.ಸೀತಾಪಹರಣದ ನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಗಳಾದ ಧನು ಎಂಬುವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತಿದ್ದ ಶಬರಿಯನ್ನು ದರ್ಶಿಸುತ್ತಾರೆ.ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆನಂದಿಸಿ ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸುವನು.ಹೀಗೆ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿ ಪರಿಣಮಿಸಿತು.

## ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ.

೧. " ಆವುದೀ ಮರುಳು ? ನಮ್ಮೆಡೆಗೆ ಬರುತಿಹುದು."

ಉ: ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನು ನೋಡಿದ ರಾಮನು ಲಕ್ಷ್ಮಣನಿಗೆ ಹೇಳಿದನು.

ಸಂದರ್ಭ: ಮತಂಗಾಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಶಬರಿ ಕಾಯುತ್ತಿರುತ್ತಾಳೆ.ಅದೇ ಸಂದರ್ಭದಲ್ಲಿಯೇ ಸೀತೆಯನ್ನು ಕಳೆದುಕೊಂಡಿದ್ದ ರಾಮನು ಲಕ್ಷ್ಮಣನೊಂದಿಗೆ ಅವಳನ್ನು ಅರಸುತ್ತ ಆ ಆಶ್ರಮದ ಸಮೀಪಕ್ಕೆ ಬರುತ್ತಾನೆ. ರಾಮನು ಸೀತೆಗಾಗಿ ಹಂಬಲಿಸುತ್ತ ಶೋಕಿಸುತ್ತಿರುವಾಗ ಲಕ್ಷ್ಮಣನು ಅವನನ್ನು ಸಮಾಧಾನಿಸುವನು .ತನ್ನಿಂದಲೇ ಸೀತೆಗೆ ಈ ದುರ್ಗತಿ ಬಂತೆಂದೂ

ತಾನೂ ದುಃಖಿಸುವನು.ಆಗ ರಾಮನು ಅವನನ್ನು ಸಮೀಪಿಸುತ್ತ ಧನು ಹೇಳಿದ ದಾರಿಯಲ್ಲಿಯೇ ನಾವು ಬಂದಿರುವೆವೋ ಇಲ್ಲವೋ ,ಇದು ಶ್ರಮಣಿಯಾಶ್ರಮವೇ ಎಂದು ಆಲೋಚಿಸುತ್ತಿರುವಾಗ ತಮ್ಮೆಡೆಗೆ ಬರುತ್ತಿರುವ ಶಬರಿಯನ್ನು ನೋಡಿ ಮೇಲಿನಂತೆ ಹೇಳುವನು.

ಸ್ವಾರಸ್ಯ : ಶಬರಿಯು ಕೇವಲ ರಾಮನ ಹಂಬಲದಲ್ಲಿ ಪರಿತಪಿಸುತ್ತಿರುವ ಅವಳ ಸ್ಥಿತಿಯನ್ನು ದೂರದಿಂದ ಗಮನಿಸಿದ ರಾಮನ ಕುತೂಹಲದ ಪ್ರಶ್ನೆ ಇದಾಗಿದೆ.

೨. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ ."

ಉ: ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನುನೋಡಿದ ರಾಮನು ಲಕ್ಷ್ಮಣನಿಗೆ ಹೇಳಿದನು.

ಸಂದರ್ಭ: ಮತಂಗಾಶ್ರಮದಲ್ಲಿ ಶಬರಿ ರಾಮನ ಆಗಮನಕ್ಕಾಗಿ ಕಾಯುತ್ತಿರುತ್ತಾಳೆ. ಹೂಹಣ್ಣು ಹಂಪಲುಗಳನ್ನು ತಂದು ರಾಮನನ್ನು ಸತ್ಕರಿಸಬೇಕೆಂಬ ಅಪೇಕ್ಷೆಯಲ್ಲಿ ಶಬರಿ ಕಾತರಿಸುತ್ತಿದ್ದ ಸಂದರ್ಭದಲ್ಲಿಯೇ ಧನುವಿನ ಹೇಳಿಕೆಯಂತೆ ಸೀತೆಯನ್ನು ಅರಸುತ್ತ ರಾಮಲಕ್ಷ್ಮಣರು ಆಶ್ರಮದ ಸಮೀಪ ಬರುತ್ತಾರೆ .ಶಬರಿ ರಾಮನನ್ನು ಉಪಚರಿಸುವ ಉತ್ಸುಕತೆಯಿಂದ ಕಾದಿರುವುದನ್ನು ನೋಡಿ ರಾಮನು ಲಕ್ಷ್ಮಣನಿಗೆ ದನುವು ಹೇಳಿದ ಶಬರಿ ಇವಳೇ ಇರಬಹುದೆಂದು ಈಕೆಗೆ ನನ್ನಿಂದ ಯಾವುದೇ ಉಪಕಾರವಿಲ್ಲದಿದ್ದರೂ ನನ್ನನ್ನು ನೆನೆಯುತಿಹಳೆಂದು ,ಇವಳ ಪ್ರೀತಿಗೆ ನಾಚುತಿಹೆನೆಂದು ಮೇಲಿನಂತೆ ನುಡಿಯುತ್ತಾನೆ.

ಸ್ವಾರಸ್ಯ : ವೃದ್ಧಾಪ್ಯದ ಉತ್ತುಂಗ ಸ್ಥಿತಿಯಲ್ಲಿದ್ದರೂ ,ಕಾಡಿನ ಮಧ್ಯೆ ರಾಮಲಕ್ಷ್ಮಣರನ್ನು ಉಪಚರಿಸಿದ ಶಬರಿಯ ಭಕ್ತಿಭಾವ ನೋಡಿ ಸಂಕೋಚ ತಾಳುವ ರಾಮನ ಮನಸ್ಥಿತಿ ಇಲ್ಲಿ ವ್ಯಕ್ತವಾಗಿದೆ.

೩. "ತಾಯಿ,ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"

ಉ: ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನು ನೋಡಿದ ರಾಮನು ಶಬರಿಗೆ ಕೇಳಿದನು.

ಸಂದರ್ಭ : ಮತಂಗಋಷಿಯ ಆಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಹಂಬಲಿಸುತ್ತ ಶಬರಿ ರಾಮನಿಗೆ ಕೊಡಲು ತಂದಿರಿಸಿದ ಹೂ ಹಣ್ಣುಗಳು ಅವನನ್ನು ತಲುಪದೇ ಹೋದುದಕ್ಕೆ ಬೇಸರಿಸುತ್ತ ಪುನಃಪುನಃ ಹೊಸತನ್ನು ಆರಿಸಿ ತಂದು ರಾಮನಿಗೆ ಕೊಡಲು ಕಾತರಿಸುತ್ತಿರುತ್ತಾಳೆ.ರಾಮನ ಗುಣಗಾನ ಮಾಡುತ್ತ ಅವನಿಗಾಗಿ ಕಟ್ಟಿದ ಮಾಲೆಗೆ ಮುದ್ದಿಕ್ಕುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಆಗಮಿಸಿದ ರಾಮನು ಶಬರಿಯನ್ನು ಕುರಿತು ಮೇಲಿನಂತೆ ಪ್ರಶ್ನಿಸುವನು.

ಸ್ವಾರಸ್ಯ : ರಾಮನ ವಿನಯದಿಂದ ಕೂಡಿದ ನಡುವಳಿಕೆ ಈ ವಾಕ್ಯದಲ್ಲಿ ಮೂಡಿರುವುದನ್ನು ಗಮನಿಸಬಹುದು.

೪. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ."

ಉ: ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿ ರಾಮನ ಕುರಿತು ಹೇಳಿದ್ದಾಳೆ.

ಸಂದರ್ಭ:ತನ್ನ ಆಶ್ರಮಕ್ಕೆ ಆಗಮಿಸಿದ ರಾಮಲಕ್ಷ್ಮಣರನ್ನು ಅತ್ಯಾದರದಿಂದ ಬರಮಾಡಿಕೊಂಡ ಶಬರಿಯು ಹೂಹಣ್ಣುಗಳನಿತ್ತು ಉಪಚರಿಸಿದಳು. ಅವಳ ಉಪಚಾರದಿಂದ ರಾಜಕುಮಾರರು ಪ್ರಸನ್ನರಾದರು.ಆಗ ಶಬರಿಯು ತನ್ನ ಎಷ್ಟೋ ವರ್ಷಗಳ ತಪಸ್ಸು ಫಲಿಸಿತು .ರಾಮನ ದರ್ಶನದಿಂದ ತಾನು ಸುಖಿಯಾದೆನು ಎಂದು ಹಾಡುವಳು.ರಾಮನು ನಿನ್ನ ಪ್ರೀತಿಗೆ ನಾವು ಋಣಿಯಾಗಿದ್ದೇವೆ.ಅಯೋಧ್ಯೆಯ ಅರಮನೆಯಲ್ಲಿ ಸಿಗುವ ಆದರಕ್ಕಿಂತಲೂ ಮಿಗಿಲಾದ ಆದರ ಇಲ್ಲಿ ಸಿಕ್ಕಿತು , ನಿನ್ನಲ್ಲೇ ತಾಯಿಯನ್ನು ಕಾಣುತ್ತಿದ್ದೇವೆ ಎಂದಾಗ ಶಬರಿ ರಾಮನ ಭವ್ಯ ವ್ಯಕ್ತಿತ್ವವನ್ನು ಮೇಲಿನಂತೆ ಕೊಂಡಾಡುವಳು.

ಸ್ವಾರಸ್ಯ : ಬಾಹ್ಯ ಮತ್ತು ಅಂತರಂಗದ ಸೊಬಗು ರಾಮನಲ್ಲಿ ಮೇಳೈಸಿತ್ತು ಎಂಬುದು ಶಬರಿಯ ಮಾತಿನಿಂದ ವ್ಯಕ್ತವಾಗುತ್ತದೆ.

೫. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು ."

ಉ: ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ರಾಮನು ಶಬರಿಯನ್ನು ಕುರಿತು ಲಕ್ಷ್ಮಣನಿಗೆ ಹೇಳುವನು.

ಸಂದರ್ಭ : ರಾಮನ ದರ್ಶನಕ್ಕಾಗಿ ಕಾಯುತ್ತಿದ್ದ ಶಬರಿಯು ಅವನಿಂದ ಮೋಕ್ಷವನ್ನು ಪಡೆದು ಧನ್ಯಳಾದಳು.ಅವಳನ್ನು ಕುರಿತು ಲಕ್ಷ್ಮಣನು ಅವಳದು ಮಗುವಿನ ರೀತಿಯ ಪ್ರೀತಿ.ನಿನ್ನನ್ನು ನೋಡಿ ನಲಿಯುತ್ತ ಕೊನೆಗೆ ನಮ್ಮನ್ನೇ ಮರೆತಳುಎಂದು ರಾಮನಿಗೆ ಹೇಳಿದಾಗ ಬೆಳಕಿನ ನಿರೀಕ್ಷೆ ಇರುವವರಿಗೆ ಬತ್ತಿ ತಾನು ಉರಿದು ಕಪ್ಪಾಗಿ ಲೋಕಕ್ಕೆ ಬೆಳಕು ನೀಡುವುದು ಅರ್ಥವಾಗುವುದಿಲ್ಲ.ಆದರೆ ಬೆಳಕು ನೀಡುವವರು ಶಬರಿಯ ರೀತಿ ಇರುವರುಎಂದು ಹೇಳುವನು.

ಸ್ವಾರಸ್ಯ :ಶಬರಿಯ ಜೀವನವು ಉರಿವ ದೀಪದ ಹಾಗೆ ,ಬೇರೆಯವರಿಗೆ ಉಪಕಾರ ಮಾಡುವುದರಲ್ಲಿಯೇ ತೃಪ್ತವಾಗುವುದು.ಆದರೆ ಸಾಮಾನ್ಯರು ಮಹಾತ್ಮರ ತ್ಯಾಗವನ್ನು ಗಮನಿಸಲಾರರು.ತಮಗೆ ದೊರೆತದ್ದನ್ನು ಪಡೆದುಕೊಳ್ಳುವರಷ್ಟೇ,ದೀಪದ ಬೆಳಕನ್ನು ಪಡೆದುಕೊಳ್ಳುವವರು ಬತ್ತಿಯ ತ್ಯಾಗವನ್ನು ಅರಿಯಲಾರರು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

## ಹೊಂದಿಸಿ ಬರೆಯಿರಿ.

| ಅ. | ಬ |
|---|---|
| ಮತಂಗ | ಸೀತೆ |
| ಪು.ತಿ.ನ | ಆಶ್ರಮ |
| ದಶರಥ | ಮೇಲಿಕೋಟೆ |
| ಚಿತ್ರಕೂಟ | ಪರ್ವತ |
| ಭೂಮಿಜಾತೆ | ರಾಮ |
| | ಅರಣ್ಯ |

ಉತ್ತರಗಳು
ಮತಂಗ -ಆಶ್ರಮ
ಪು.ತಿ.ನ - ಮೇಲುಕೋಟೆ
ದಶರಥ-ರಾಮ
ಚಿತ್ರಕೂಟ -ಪರ್ವತ
ಭೂಮಿಜಾತೆ -ಸೀತೆ

## ಭಾಷಾ ಚಟುವಟಿಕೆ

೧. ಕನ್ನಡ ಸಂಧಿಗಳನ್ನು ಹೆಸರಿಸಿ

ಕನ್ನಡ ಸಂಧಿಗಳು : ಲೋಪ ,ಆಗಮ,ಆದೇಶ .

ಉದಾ : ಲೋಪಸಂಧಿಗೆ –ನಮ್ಮೆಡೆಗೆ –ನಮ್ಮ+ಎಡೆಗೆ ,ಬನದೊಳಕ್ಕೆ =ಬನದ+ಒಳಕ್ಕೆ

ಆಗಮಸಂಧಿ : ಕೈಯಲ್ಲಿ =ಕೈ+ಅಲ್ಲಿ , ರಕ್ಷೆಯಿಡಲಿ=ರಕ್ಷೆ+ಇಡಲಿ

ಆದೇಶಸಂಧಿಗೆ : ಕಣ್+ಪನಿ = ಕಂಬನಿ , ತೇಜ+ಕೆಡೆ =ತೇಜಗೆಡೆ

೨. ಸಂಸ್ಕೃತ ಸಂಧಿಗಳು

ಸಂಸ್ಕೃತ ಸ್ವರ ಸಂಧಿಗಳು : ಸವರ್ಣದೀರ್ಘ ಸಂಧಿ,ಗುಣಸಂಧಿ ,ಯಣ್ ಸಂಧಿ, ವೃದ್ಧಿಸಂಧಿ

ಸಂಸ್ಕೃತ ವ್ಯಂಜನ ಸಂಧಿಗಳು :ಜಶ್ತ್ವಸಂಧಿ, ಶ್ಚುತ್ವಸಂಧಿ, ಅನುನಾಸಿಕ ಸಂಧಿ

೩. ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ

ಸುರ +ಅಸುರ =ಸುರಾಸುರ =ಸವರ್ಣದೀರ್ಘಸಂಧಿ

ಬಲ್ಲೆನು +ಎಂದು =ಬಲ್ಲೆನೆಂದು =ಲೋಪಸಂಧಿ

ಸೂರ್ಯ +ಉದಯ =ಸೂರ್ಯೋದಯ =ಗುಣಸಂಧಿ

ಮಳೆ+ಕಾಲ=ಮಳೆಗಾಲ =ಆದೇಶಸಂಧಿ

ಅಷ್ಟ+ಐಶ್ವರ್ಯ =ಅಷ್ಟೈಶ್ವರ್ಯ =ವೃದ್ಧಿಸಂಧಿ
ವೇದಿಯಲ್ಲಿ =ವೇದಿ+ಅಲ್ಲಿ =ಆಗಮಸಂಧಿ
೪. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಯಾದ ನಾಲ್ಕನೆಯ ಪದ ಬರೆಯಿರಿ.
ಅ) ನಮೋನಮೋ : ದ್ವಿರುಕ್ತಿ : : ಧೀರಶೂರ : ಜೋಡುನುಡಿ
ಆ. ) ಲೋಪಸಂಧಿ: ಸ್ವರಸಂಧಿ : : ಆದೇಶಸಂಧಿ : ವ್ಯಂಜನ ಸಂಧಿ
ಇ) ಕಟ್ಟಕಡೆಗೆ : ಕಡೆಗೆಕಡೆಗೆ : : ಮೊತ್ತಮೊದಲು : ದ್ವಿರುಕ್ತಿ
ಈ)ಶರಚ್ಚಂದ್ರ : ಶ್ಚುತ್ವಸಂಧಿ : : ದಿಗಂತ : ಜಶ್ತ್ವಸಂಧಿ
ಘಟಕ ಪರೀಕ್ಷೆ –೧ ೨೦ ಅಂಕಗಳು
ಒಂದು ವಾಕ್ಯದಲ್ಲಿ ಉತ್ತರಿಸಿ ೧*೩=೩
೧. ಶ್ರೀರಾಮನ ತಂದೆಯ ಹೆಸರೇನು ?
೨. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು ?
೩. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು ?
ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೪*೨=೮
೧. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?
೨. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?
೩. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು ?
೪. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?
ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. ೨*೩=೬
೧. ಆವುದೀ ಮರುಳು ?ನಮ್ಮೆಡೆಗೆ ಬರುತಿಹುದು ?
೨. ತಾಯಿ ದಾರಿಗರಿಗೆ ಬೀಡಿಲ್ಲಿ ದೊರೆಯುವುದೆ?
೩. ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು
ಪು.ತಿ.ನ. ಅವರ ಕಾಲ,ಸ್ಥಳ, ಕೃತಿ ಮತ್ತು ಅವರಿಗೆ ದೊರೆತ ಪ್ರಶಸ್ತಿಗಳ ಕುರಿತು ಸಂಕ್ಷಿಪ್ತವಾಗಿ ವಾಕ್ಯರೂಪದಲ್ಲಿ ಬರೆಯಿರಿ.
೩ ಅಂಕಗಳು
ಘಟಕ ಪರೀಕ್ಷೆ –೨ ೨೦ ಅಂಕಗಳು
ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೩*೧=೩
೧. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?
೨. ಮಧುಪರ್ಕ ಎಂದರೇನು ?
೩. ಸೌಮಿತ್ರಿ ಎಂದು ಯಾರನ್ನು ಕರೆಯುತ್ತಾರೆ ?
ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨ ಅಂಕಗಳು
ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.
ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ. ೨*೩=೬
೧. ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ.
೨. ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ.
ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
೧. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.
೨. ಶಬರಿಯ ಸಡಗರ ,ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?
೩. ನಂಬಿಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

# ಗದ್ಯಪಾಠ-೩ ಲಂಡನ್ ನಗರ – ವಿ.ಕೃ. ಗೋಕಾಕ

## ಕೃತಿಕಾರರ ಪರಿಚಯ



ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ. ವಿನಾಯಕ ಕೃಷ್ಣ ಗೋಕಾಕರ ಕಾಲ ಕ್ರಿ.ಶ. ೧೯೦೯ .ಇವರು ಹಾವೇರಿ ಜಿಲ್ಲೆಯ ಸವಣೂರಿನವರು . ಇವರು ಸಮುದ್ರ ಗೀತೆಗಳು ,ಪಯಣ, ಉಗಮ, ಇಜ್ಜೋಡು ,ಸಮರಸವೇ ಜೀವನ ,ಭಾರತ ಸಿಂಧು ರಶ್ಮಿ ಮೊದಲಾದ ಕೃತಿಗಳನ್ನು ಬರೆದಿದ್ದಾರೆ . ಇವರ ದ್ಯಾವಾ ಪೃಥಿವೀ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಇದಲ್ಲದೇ ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ,ಬೆಂಗಳೂರು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್ , ಸಮಗ್ರ ಸಾಹಿತ್ಯಕ್ಕಾಗಿ ಜ್ಞಾನಪೀಠ ಪ್ರಶಸ್ತಿ , ಭಾರತ ಸರ್ಕಾರದ ಪದ್ಮಶ್ರೀ ಪುರಸ್ಕಾರ ಮೊದಲಾದ ಪ್ರಶಸ್ತಿಗಳು ದೊರೆತಿವೆ.

ಪ್ರಸ್ತುತ ಗದ್ಯಭಾಗವನ್ನು ವಿ.ಕೃ.ಗೋಕಾಕರ ಸಮುದ್ರದಾಚೆಯಿಂದ ಎಂಬ ಪ್ರವಾಸ ಕಥನದಿಂದ ಆರಿಸಲಾಗಿದೆ

## ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು ?

ಉ: ಲಂಡನ್ನಿನ ರಸ್ತೆಗಳಲ್ಲಿ ನಿಲ್ಲುವುದನ್ನು ತಪ್ಪಿಸುವುದಕ್ಕಾಗಿ ಭೂಗರ್ಭದಲ್ಲಿ ಗಾಡಿಯನ್ನು ಒಯ್ದಿದ್ದಾರೆ.

೨. ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರೇನು ?

ಉ: ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರು ಟ್ರಾಫಲ್ಗಾರ್ ಸ್ಕ್ವೇರ್ .

೩. ವೆಸ್ಟ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ ?

ಉ: ವೆಸ್ಟ್ ಮಿನಿಸ್ಟರ್ ಅಬೆ ಸಂತ ,ಸಾರ್ವಭೌಮರ,ಕವಿಪುಂಗವರ ಸ್ಮಾರಕವಾಗಿದೆ.

೪. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ?

ಉ: 'ಚೇರಿಂಗ್ ಕ್ರಾಸ್ ' ಎನ್ನುವುದು ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ .

## ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು ?

ಉ: 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿಯಲ್ಲಿ ಎಲ್ಲ ತರದ ಸಾಮಾನುಗಳನ್ನು ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು,ಕಾಲುಚೀಲ, ಚಣ್ಣ , ಸಾಬೂನು, ಔಷಧ,ಪುಸ್ತಕ ,ಅಡಿಗೆಯ ಪಾತ್ರೆ ,ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ ,ಅಡವಿಯ ಹೂವು, ಯುದ್ಧಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತವೆ.

೨. ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?

ಉ: ಲಂಡನ್ನಿನಲ್ಲಿ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಗೃಹಗಳಲ್ಲಿ ಅಮ್ಮಣ್ಣಿಗಳಿರುತ್ತಾರೆ (ಸ್ತ್ರೀಯರು ).ಯಾವುದಾದರೊಂದು ದೊಡ್ಡ ಅಂಗಡಿಗೆ ಹೋದರೆ ಅಲ್ಲಿಯ ಟೈಪಿಸ್ಟ್ ಕಾರಕೂನ ,ಒಬ್ಬ ಹೆಣ್ಣು ಮಗಳು , ಸಿನಿಮಾ ಗೃಹದಲ್ಲಿ ಬಂದವರಿಗೆ ಜಾಗ ಹುಡುಕಿಕೊಡುವವರೂ ಹೆಣ್ಣು .ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಸಿಪಾಯಿಣಿಯರನ್ನು ಇಟ್ಟಿದ್ದಾರೆ.

೩. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ ?

ಉ: ಲಂಡನ್ನಿನ ಹೆಣ್ಣುಮಕ್ಕಳ ಟೊಪ್ಪಿಗೆಯನ್ನು ಲೇಖಕರು ಕುತೂಹಲದಿಂದ ನೋಡಿದರು. ಒಂದು ಟೊಪ್ಪಿಗೆಯಂತೆ ಇನ್ನೊಂದಿರುವುದಿಲ್ಲ. ಸಿಕ್ಕಿಸಿದ ಪುಚ್ಚವಾದರೂ ಕನಿಷ್ಠಪಕ್ಷಕ್ಕೆ ಬೇರೆಯಾಗಿರುತ್ತದೆ. ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಇದನ್ನು ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ ?ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂದು ಲೇಖಕರು ಟೊಪ್ಪಿಗೆಯ ವಿಶೇಷತೆಯ ಕುರಿತು ಹೇಳಿದ್ದಾರೆ.

೪. ಪೊಯೆಟ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ ?

ಉ:ಲೇಖಕರು ಪೊಯೆಟ್ ಕಾರ್ನರ್ ಕವಿಗಳ ಮೂಲೆಗೆ ಹೋಗಿದ್ದರು. ಅಲ್ಲಿ ಕಿಪ್ಲಿಂಗ್ ಕವಿಯ ಮೇಲೆ ಹಾಕಿದ್ದ ಕಲ್ಲು ಅವರ ಕಣ್ಣಿಗೆ ಬಿತ್ತು. ಮ್ಯಾಕಾಲೆ, ಜಾನ್ಸನ್ , ಗೋಲ್ಡ್ ಸ್ಮಿತ್ ,ಡ್ರಾಯ್ ಡನ್ ಎಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ಕೊಡುವಂತೆ ಒಂದೊಂದು ಕಲ್ಲನ್ನು ಕೊಟ್ಟಿದ್ದರು. ಒಂದು ಸಣ್ಣಕಲ್ಲಿನ ಮೇಲೆ ಓ ಅಪರೂಪದ ಬೆಬ್ ಜಾನ್ಸನ್ ಎಂದೂ ಸಹ ಇತ್ತು. ಅದೊಂದು ಪ್ರಖ್ಯಾತ ನಾಟಕಕಾರನಿಗೆ ಮೀಸಲಿಟ್ಟ ಕಲ್ಲಾಗಿತ್ತು. ಯಾರ ಕಣ್ಣಿಗೂ ಸಹಜವಾಗಿ ಬೀಳದೆ
ವರ್ಡ್ಸ್ ವರ್ತನೂ ತಪಶ್ಚರ್ಯಕ್ಕೆ ಕುಳಿತಂತಹ ಶಿಲಾಮೂರ್ತಿಯೂ ಅಲ್ಲಿತ್ತು.

೫. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ?

ಉ: ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲು ಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್ ಮಿನಿಸ್ಟರ್ ಮಂದಿರದಲ್ಲಿಯೆ ಒಂದು ಭಾಗದಲ್ಲಿದೆ. ೩ ನೇ ಎಡ್ವರ್ಡ್ ನು ಸ್ಕಾಟಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. ಅದರಲ್ಲಿ ಯಾವ ಸಿದ್ಧಿಯಿದೆಯೋ ,ಯಾವ ಮಂತ್ರವಿದೆಯೋ .ಇಂಗ್ಲೆಂಡಿನ ಅತುಲ ವೈಭವವನ್ನು ನೋಡಿದರೆ ಇಂಥದೊಂದು ವಿಶೇಷವೇನಾದರೂ ಅದರಲ್ಲಿ ಇರಬಹುದು ಎನಿಸುತ್ತದೆ.

## ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ವಿಚಾರಿಸಿರುವ ವಿಶೇಷತೆಗಳೇನು ?

ಉ: ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು .ಅಲ್ಲಿನ ರಸ್ತೆಗಳಲ್ಲಿ ವ್ಯಾಪಾರವು ತುಂಬಿ ಟ್ರಾಮ್ ಬಸ್ಸುಗಳಿಗೆ ಸಕಾಲಕ್ಕೆ ಹೋಗಲು ಸಾಧ್ಯವಿಲ್ಲದ ಕಾರಣ ಅದನ್ನು ತಪ್ಪಿಸಲು ಭೂಗರ್ಭದಲ್ಲಿ ಗಾಡಿಯನ್ನು ಒಯ್ದಿದ್ದಾರೆ. ವೂಲವರ್ಥ ಎಂಬ ಸ್ಟೇಷನರಿ ಅಂಗಡಿಯು ನೋಡುವ ಹಾಗಿದೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾದ ಇಲ್ಲಿ ಸಣ್ಣ ಸಣ್ಣ ವಸ್ತುಗಳಿಂದ ಹಿಡಿದು ಯುದ್ಧ ಸಾಮಗ್ರಿಯವರೆಗೆ ಎಲ್ಲವೂ ದೊರೆಯುತ್ತವೆ.

ಲಂಡನ್ ನಗರದಲ್ಲಿ ಗಂಡಿಗಿಂತ ಹೆಣ್ಣು ಹೆಚ್ಚಿದ್ದ ಹಾಗೆ ಕಾಣುತ್ತದೆ. ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಇಲ್ಲಿಯ ಇಂಡಿಯಾ ಆಫೀಸು ನೋಡುವ ಹಾಗಿದೆ. ವಾಚನಾಲಯದಲ್ಲಿ ಅನೇಕ ಮಹತ್ವದ ಪುಸ್ತಕಗಳಿದ್ದು ಕರ್ನಾಟಕದ ವಿಷಯವಾಗಿ ಎಷ್ಟೋ ಹೊಸ ಮಾತುಗಳು ಇಲ್ಲಿ ಗೊತ್ತಾಗಬಹುದು ಎಂದು ಕಾಣುತ್ತದೆ. ಚೇರಿಂಗ್ ಕ್ರಾಸ್ ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡುಬರುವುದು. ಇಂಡಿಯಾ ಆಫೀಸಿನ ಹತ್ತಿರ ಆಫ್ರಿಕನ್ ಕಚೇರಿ ,ಇನ್ನೊಂದು ವಸಾಹತಿನ ಕಚೇರಿ ,ನೂರೆಂಟು ಬ್ಯಾಂಕ್ ಗಳು ದೊಡ್ಡ ಕಂಪನಿಗಳ ಕಚೇರಿಗಳು ,ಎಲ್ಲವೂ ದಂಗು ಬಡಿಸುವಂತೆ ನೆರೆದಿವೆ. ನಗರದ ಪ್ರತಿಯೊಂದು ಕೂಟಕ್ಕೆ ಒಂದು ಹೆಸರೇನಾದರೂ ಇದ್ದೇ ಇರುತ್ತದೆ. ಬೀದಿ ಬೀದಿಗೆ ಮೂಲೆ ಮೂಲೆಗೆ ಇತಿಹಾಸ

ಪ್ರಸಿದ್ಧ ಮಹಾಪುರುಷರ ಸ್ಮಾರಕಗಳಿವೆ. ಅಲ್ಲಿಯ ಹೆಣ್ಣು ಮಕ್ಕಳ ಟೊಪ್ಪಿಗೆಗಳು ಒಂದು ಇದ್ದಂತೆ ಇನ್ನೊಂದಿರುವುದಿಲ್ಲ.ಲಂಡನ್ ನಗರದಲ್ಲಿ ವೆಸ್ಟ್ ಮಿನಿಸ್ಟರ್ ಅಬೆ ಎಂಬ ಪುರಾತನವಾದ ಪ್ರಾರ್ಥನಾ ಮಂದಿರವಿದೆ. ಸತ್ತವರ ಸ್ಮಾರಕವೆಂದು ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು.ಪೊಯೆಟ್ಸ್ ಕಾರ್ನರ್ , ವಿಜ್ಞಾನಿಗಳ ಮೂಲೆ ,ಅರಸರ ಅರಮನೆ ,ರಾಜವಿಭಾಗ ಪಟ್ಟಾಭಿಷೇಕವಾಗುವಾಗ ರಾಜರು ಕೂರುತ್ತಿದ್ದ ಸ್ಟೋನ್ ಆಫ್ ಸ್ಟೋನ್ ಎಂಬ ಶಿಲೆಯನ್ನು ಒಳಗೊಂಡ ಶಿಲಾ ಶಾಸನ ಇವೆಲ್ಲವೂ ಇಲ್ಲಿನ ವಿಶೇಷಗಳಾಗಿವೆ ಎಂದು ಲೇಖಕರು ವಿವರಿಸಿದ್ದಾರೆ.

೨. ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

ಉ: ವೆಸ್ಟ್ ಮಿನಿಸ್ಟರ್ ಅಬೆ ಎಂಬ ಪ್ರಾರ್ಥನಾ ಮಂದಿರ ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಮಂದಿರ .ಕೆಲವೊಂದು ಭಾಗಗಳ ದುರಸ್ತಿಯನ್ನು ಬಿಟ್ಟರೆ ಇಂದಿಗೂ ಅಚ್ಚಳಿಯದೆ ಉಳಿದಿದೆ. ಇಲ್ಲಿ ಸಂತ , ಸಾರ್ವಭೌಮರು ಮಲಗಿರುವರು. ಕವಿಪುಂಗವರು ಒರಗಿರುವರು. ಸತ್ತವರ ಸ್ಮಾರಕವೆಂದು ಇದಕ್ಕಿಂತ ಘನತರವಾದ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇರಲಾರದು. **"Mortality behold and fear , what a litt'r of tombs is hear"** (ಮರ್ತ್ಯತ್ವವೇ ಎಷ್ಟು ಗೋರಿ ಗುಂಪುಗಳು ಇಲ್ಲಿವೆ ನೋಡಿ ಅಂಜು )ಎಂದು ೩೦೦ ವರ್ಷಗಳ ಹಿಂದೆ ಬ್ಯೂಮಾಂಟ್ ಎಂಬ ಕವಿಯು ಹಾಡಿದನು . ಗೋಲ್ಡ್ ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು **Visit to West Minister Abbey** ಎಂಬ ವಿಷಯದ ಮೇಲೆ ಉತ್ತಮವಾದ ನಿಬಂಧಗಳನ್ನು ಬರೆದಿದ್ದಾರೆ.ಇಂದಿಗೂ ಇದು ಕಬ್ಬಿಗರ ಸ್ಫೂರ್ತಿಯ ತವರುಮನೆಯಾಗಿದೆ. ಹೊರಗಿನಿಂದ ಉತ್ತಮವಾಗಿ ಶೃಂಗರಿಸಿದ ಸಣ್ಣ ಬಾಗಿಲು ಒಳಗೆ ಮಾತ್ರ ಕಟ್ಟಡವು ಸುಂದರವಾಗಿದೆ. ಸಾಗುವ ಹಾದಿಯ ಎಡಬಲಕ್ಕೆ ರಾಜಕಾರಣ ಚತುರರ ಶಿಲಾಮೂರ್ತಿಗಳಿವೆ. ಪಾದ್ರಿಯ ಆಸನದ ಉತ್ತಮವಾದ ಕೆತ್ತನೆಯ ಕೆಲಸದಿಂದ ಕೂಡಿದ್ದ ಬಂಗಾರದ ಬಣ್ಣವನ್ನು ಅದಕ್ಕೆ ಕೊಟ್ಟಿದ್ದರು.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ "

ಉ: ಈ ಮೇಲಿನ ವಾಕ್ಯವನ್ನು ವಿ.ಕೃ.ಗೋಕಾಕರು ಬರೆದಿರುವ ಸಮುದ್ರದಾಚೆಯಿಂದ ಎಂಬ ಪ್ರವಾಸಕಥನದಿಂದ ಆರಿಸಲಾದ 'ಲಂಡನ್ ನಗರ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್ ನಗರದ ಬೀದಿಗಳಲ್ಲಿ ಸಂಚರಿಸುತ್ತಿದ್ದಾಗ ತಮಗಾದ ಅನುಭವವನ್ನು ಕುರಿತು ಹೇಳುವಾಗ ಈ ಮಾತು ಬಂದಿದೆ. ಲಂಡನ್ನಿನ ಬೀದಿ ಬೀದಿಯ ಮೂಲೆಮೂಲೆಗೂ ಇತಿಹಾಸ ಪ್ರಸಿದ್ಧ ಪುರುಷರ ಪ್ರತಿಮೆಗಳನ್ನು ನಿಲ್ಲಿಸಲಾಗಿದೆ. ತಮ್ಮ ದೇಶಕ್ಕಾಗಿ ಜೀವನವನ್ನು ಲೆಕ್ಕಿಸದೆ ದುಡಿದವರು ನಿಂತು ಕೈಯೆತ್ತಿ " ನಿಮ್ಮ ದೇಶದ ಗೌರವವನ್ನು ಕಾಯಿರಿ ! ಇದು ದೊಡ್ಡದಾದ ರಾಷ್ಟ್ರ " ಎಂದು ಹೇಳುತ್ತಿರುವಂತೆ ತೋರುತ್ತದೆ ಎಂದು ಹೇಳಿದ್ದಾರೆ.

ಸ್ವಾರಸ್ಯ : ಲಂಡನ್ನಿನ ನಗರದಲ್ಲಿ ಹೆಜ್ಜೆ ಹೆಜ್ಜೆಗೂ ಇತಿಹಾಸದ ಅಡಿಗಲ್ಲುಗಳು ದೊರೆಯುವುದನ್ನು ತಮ್ಮ ದೇಶದ ಸಾಧಕರ , ಮಹನೀಯರ ಬಗ್ಗೆ ಅಲ್ಲಿನ ಜನತೆ ಹೊಂದಿರುವ ಅಭಿಮಾನವನ್ನು ಮೇಲಿನ ವಾಕ್ಯದ ಮೂಲಕ ಅರಿಯಬಹುದು.

೨. " ಹೊತ್ತು ! ಹೊತ್ತು! ಹೊತ್ತೇ ಹಣ . "

ಉ: ಈ ಮೇಲಿನ ವಾಕ್ಯವನ್ನು ವಿ.ಕೃ.ಗೋಕಾಕರು ಬರೆದಿರುವ ಸಮುದ್ರದಾಚೆಯಿಂದ ಎಂಬ ಪ್ರವಾಸಕಥನದಿಂದ ಆರಿಸಲಾದ 'ಲಂಡನ್ ನಗರ 'ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಲೇಖಕರು ಲಂಡನ್ನಿನ ಬೀದಿಗಳಲ್ಲಿ ಲಕ್ಷಾನುಲಕ್ಷ ಜನರು ತಿರುಗಾಡುವುದನ್ನು ಅವಸರದಿಂದ ಓಡಾಡುವುದನ್ನು ನೋಡಿ **time!time!time is money** ಎಂದು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ವಿಲಾಯತಿಯಲ್ಲಿ ಜನರು ಸಮಯಕ್ಕೆ ಕೊಡುವ ಮಹತ್ವವನ್ನು ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೩. " ಯಾರನ್ನು ತುಳಿದರೇನು ! ಎಲ್ಲಿ ಹೆಜ್ಜೆ ಹಾಕಿದರೇನು ? ಎಲ್ಲವೂ ಅಷ್ಟೆ! ಮಣ್ಣು ! ಮಣ್ಣು!"

ಈ ಮೇಲಿನ ವಾಕ್ಯವನ್ನು ವಿ.ಕೃ.ಗೋಕಾಕರು ಬರೆದಿರುವ ಸಮುದ್ರದಾಚೆಯಿಂದ ಎಂಬ ಪ್ರವಾಸಕಥನದಿಂದ ಆರಿಸಲಾದ 'ಲಂಡನ್ ನಗರ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಲೇಖಕರು ವೆಸ್ಟ್ ಮಿನಿಸ್ಟರ್ ಅಬೆಯಲ್ಲಿರುವ **Poets Corner** (ಪೊಯೆಟ್ಸ್ ಕಾರ್ನರ್ ) ಗೆ ಹೋಗಿದ್ದರು. ಅಲ್ಲಿ ಸತ್ತವರಿಗೆ ನಾವು ಒಂದೊಂದು ಹಿಡಿ ಮಣ್ಣನ್ನು ಕೊಡುವಂತೆ ಒಂದೊಂದು ಕಲ್ಲನ್ನು ಕೊಟ್ಟಿದ್ದರು. ಲೇಖಕರಿಗೆ ಆ ಕವಿಗಳ ಮೂಲೆಯಲ್ಲಿ ನಡೆದಾಗ ಒಂದು ಭವ್ಯತೆಯು ಬಂದು ಕಣ್ಣೆದುರು ನಿಲ್ಲುತ್ತದೆ . ಹೃದಯ ಕಂಪಿಸುತ್ತದೆ. ತಪ್ಪು ಹೆಜ್ಜೆ ಹಾಕಬಹುದೆಂಬ ಹೆದರಿಕೆ ಹಿಡಿದು ನಿಲ್ಲಿಸುತ್ತದೆ ಎಂದು ಲೇಖಕರು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಜೀವನದ ನಶ್ವರತೆಯನ್ನು ಎಲ್ಲರೂ ಒಂದು ದಿನ ಮಣ್ಣು ಸೇರಲೇಬೇಕಾದ ಅನಿವಾರ್ಯತೆಯನ್ನು ಮೇಲಿನ ವಾಕ್ಯವು ಸ್ಪಷ್ಟ ಪಡಿಸುತ್ತದೆ .

೪. " ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ ."

ಈ ಮೇಲಿನ ವಾಕ್ಯವನ್ನು ವಿ.ಕೃ.ಗೋಕಾಕರು ಬರೆದಿರುವ ಸಮುದ್ರದಾಚೆಯಿಂದ ಎಂಬ ಪ್ರವಾಸಕಥನದಿಂದ ಆರಿಸಲಾದ 'ಲಂಡನ್ ನಗರ 'ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಲಂಡನ್ ನಗರಕ್ಕೆ ಪ್ರವಾಸ ಹೋಗಿದ್ದ ಲೇಖಕರು ಅಷ್ಟೇ ಸ್ವಲ್ಪ ದಿನಗಳಲ್ಲಿ ತನ್ನ ಮನಸ್ಸು ವಿಕಾಸ ಹೊಂದಿತೆಂದೂ ,ವಿಶಾಲ ದೃಷ್ಟಿ ಹೊಂದಿದೆನೆಂದೂ ಹೇಳಿದ್ದಾರೆ. ತನ್ನ ಸಂಸ್ಕೃತಿಯು ಎಂತಹ ಒರೆಗಲ್ಲಿನ ಮೇಲೆ ನಿಂತಿದೆ . ಇದನ್ನೆಲ್ಲ ನೆನೆಸಿದಾಗ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ ಎಂದು ಬೇಕನ್ನನು ಹೇಳಿದ ಮಾತು ನೆನಪಾಗುತ್ತದೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಜೀವನದ ವಿಕಾಸದಲ್ಲಿ ಪ್ರವಾಸದ ಮಹತ್ವವನ್ನು , ಪ್ರವಾಸವು ನಮ್ಮ ಅನುಭವವನ್ನು ಹೆಚ್ಚಿಸುವುದು ಎಂಬುದನ್ನು ಮೇಲಿನ ವಾಕ್ಯವು ಸ್ಪಷ್ಟ ಪಡಿಸುತ್ತದೆ.

## ಬಿಟ್ಟಿರುವ ಪದಗಳನ್ನು ಸರಿಯಾದ ಪದಗಳಿಂದ ತುಂಬಿರಿ.

೧. ಲಂಡನ್ ಪಟ್ಟಣವೆಂದರೆ ಒಂದು ---ಜಗತ್ತು. (ಸ್ವತಂತ್ರ )

೨. ವೂಲವರ್ಥ ಎಂಬುದು --- ಅಂಗಡಿ . (ಸ್ಟೇಷನರಿ)

೩. ಮನೆ ಹಿಡಿದು ಇರುವ --ಬುದ್ಧಿ ಮನೆಯ ಮಟ್ಟದ್ದೇ . (ತರುಣನ)

೪. ಅಬೆಯಲ್ಲಿರುವ ಸಿಂಹಾಸನಕ್ಕೆ--- ಎಂದು ಹೆಸರು.(ಸ್ಟೋನ್ ಆಫ್ ಸ್ಕೋನ್ )

೫. ವೆಸ್ಟ್ ಮಿನಿಸ್ಟರ್ ಅಬೆ ಎಂಬುದು -- (ಪ್ರಾರ್ಥನಾ ಮಂದಿರ)

## ಪದಗಳನ್ನು ಬಿಡಿಸಿ ಸಂಧಿಯ ಹೆಸರು ಬರೆಯಿರಿ.

ಒಮ್ಮೊಮ್ಮೆ ,ಜಾಗವನ್ನು , ಅತ್ಯಾದರ , ವಾಚನಾಲಯ , ಸಂಗ್ರಹಾಲಯ , ಓಣಿಯಲ್ಲಿ .

ಒಮ್ಮೆ+ಒಮ್ಮೆ= ಲೋಪಸಂಧಿ ಅತಿ+ಆದರ = ಯಣ್ ಸಂಧಿ

ಜಾಗ +ಅನ್ನು =ಆಗಮಸಂಧಿ ವಾಚನ +ಆಲಯ =ಸವರ್ಣದೀರ್ಘಸಂಧಿ

ಸಂಗ್ರಹ+ಆಲಯ =ಸವರ್ಣದೀರ್ಘ ಸಂಧಿ ಓಣಿ+ಅಲ್ಲಿ =ಆಗಮಸಂಧಿ

## ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

೧. ವೆಸ್ಟ್ ಮಿನಿಸ್ಟರ್ ಅಬೆ ನೋಡಿಕೊಂಡು ಬಂದೆವು (ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ )

ಉ: ವೆಸ್ಟ್ ಮಿನಿಸ್ಟರ್ ಅಬೆ ನೋಡಿಕೊಂಡು ಬರುವೆವು .

೨. ಶೈಕ್ಷಣಿಕ ಅಧ್ಯಯನ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸ ಮಾಡುವರು. (ವರ್ತಮಾನಕಾಲಕ್ಕೆ ಪರಿವರ್ತಿಸಿ)

ಉ: ಶೈಕ್ಷಣಿಕ ಅಧ್ಯಯನ ದೃಷ್ಟಿಯಿಂದ ಶೈಕ್ಷಣಿಕ ಪ್ರವಾಸ ಮಾಡುತ್ತಾರೆ.

೩. ಹೆಜ್ಜೆಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆಯುತ್ತವೆ. (ಭೂತಕಾಲಕ್ಕೆ ಪರಿವರ್ತಿಸಿ)

ಉ: ಹೆಜ್ಜೆಹೆಜ್ಜೆಗೆ ಇತಿಹಾಸದ ಅಡಿಗಲ್ಲುಗಳು ದೊರೆತವು. (ದೊರೆತಿವೆ)

| | |
|---|---|
| ಘಟಕ ಪರೀಕ್ಷೆ -೧ ೨೦ ಅಂಕಗಳು<br>ವಿ.ಕೃ.ಗೋಕಾಕರ ಸಂಕ್ಷಿಪ್ತ ಪರಿಚಯಬ ಬರೆಯಿರಿ. ೩ ಅಂಕಗಳು<br>ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೩*೧=೩<br>೧. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು ?೨. ವೆಸ್ಟ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ ?<br>ಸಂದರ್ಭ ಸಹಿತ ವಿವರಿಸಿ ೩*೨=೬<br>೧. “ ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ " ೨. “ ಹೊತ್ತು ! ಹೊತ್ತು! ಹೊತ್ತೇ ಹಣ . ”<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೨*೪=೮<br>೧. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ವಿಚಾರಿಸಿರುವ ವಿಶೇಷತೆಗಳೇನು ?<br>೨. ವೆಸ್ಟ್ ಮಿನಿಸ್ಟರ್ ಅಬೆ ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ. | ಘಟಕ ಪರೀಕ್ಷೆ-೨ ೧೮ ಅಂಕಗಳು<br>ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ ೨*೧=೨<br>೧.ನೆಲ್ಸನ್ ರವರ ಮೂರ್ತಿಯಿರುವ ಸ್ಥಳದ ಹೆಸರೇನು ?<br>೨.ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು ?ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ .೫*೨=೧೦<br>೧ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳು ಯಾವುವು ?೨. ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ ?<br>೩. ಲಂಡನ್ನಿನ ಹೆಣ್ಣುಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?<br>೪. ಪೊಯೆಟ್ ಕಾರ್ನರ್ ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ ?<br>೫. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು ?<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ ೨*೩=೬<br>೧. “ ಯಾರನ್ನು ತುಳಿದರೇನು ! ಎಲ್ಲಿ ಹೆಜ್ಜೆ ಹಾಕಿದರೇನು ? ಎಲ್ಲವೂ ಅಷ್ಟೆ ! ಮಣ್ಣು ! ಮಣ್ಣು!”<br>೨ . “ ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ .” |

# ಗದ್ಯಪಾಠ ೪. ಭಾಗ್ಯಶಿಲ್ಪಿಗಳು ೧. ನಾಲ್ವಡಿ ಕೃಷ್ಣರಾಜ ಒಡೆಯರು ,೨. ಸರ್ ಎಂ.ವಿಶ್ವೇಶ್ವರಯ್ಯ

## ಕೃತಿಕಾರರ ಪರಿಚಯ



ಡಿ.ಎಸ್.ಜಯಪ್ಪಗೌಡ ಅವರ ಕಾಲ ೧೯೪೭ .ಇವರು ಚಿಕ್ಕಮಗಳೂರು ಜಿಲ್ಲೆಯ ದಾರದ ಹಳ್ಳಿಯವರು.ಇವರು ಕರ್ನಾಟಕ ಗ್ರಾಮೀಣ ಸಂಸ್ಥೆಗಳು, ಮೈಸೂರು ಒಡೆಯರು ,ಜನಪದ ಆಟಗಳು ,ದಿವಾನ್ ಸರ್. ಎಂ.ವಿಶ್ವೇಶ್ವರಯ್ಯನವರ ಕಾರ್ಯ ಸಾಧನೆಗಳು,ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆಕರ್ನಾಟಕದ ಕಡಲಾಚೆಯ ಸಂಪರ್ಕಗಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ ಧಾರವಾಡ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಕ್ಕೆ ಇವರು ಭಾಜನರಾಗಿದ್ದಾರೆ.

ಪ್ರಸ್ತುತ ಗದ್ಯಭಾಗದ ಸರ್.ಎಂ.ವಿಶ್ವೇಶ್ವರಯ್ಯ ಲೇಖನವನ್ನು ಡಿ.ಎಸ್.ಜಯಪ್ಪಗೌಡರ ದಿವಾನ್ .ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ .**

೧. ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು?
ಉ: ನಾಲ್ವಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೮೯೫(1895) ರಲ್ಲಿ ತಮ್ಮ ೧೦ ನೆಯ ವಯಸ್ಸಿನಲ್ಲಿ ಪಟ್ಟಾಭಿಷಿಕ್ತರಾದರು.

೨. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
ಉ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಕಂಕಣಬದ್ಧರಾದರು.

೩. ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು ?
ಉ: ೧೯೦೦ ರಲ್ಲಿ ಶಿವನಸಮುದ್ರದ ಕಾವೇರಿ ನದಿಯ ಬಳಿ ಸ್ಥಾಪಿಸಿದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ.

೪. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?
ಉ: ಬ್ರಿಟಿಷ್ ಸರಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್'ಪದವಿಯನ್ನು ನೀಡಿ ಗೌರವಿಸಿತು.

೫. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?
ಉ: ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು.

೬. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?
ಉ: ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜನಿಯರ್ಸ ದಿನಾಚರಣೆ'ಯನ್ನು ಆಚರಿಸಲಾಗುತ್ತದೆ ?

**ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

೧. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?

ಉ: ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ನಗರಪಾಲಿಕೆಗಳು ಹಾಗೂ ಗ್ರಾಮಪಂಚಾಯತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ ೧. ಗ್ರಾಮ ನಿರ್ಮಲೀಕರಣ ೨. ವೈದ್ಯಸಹಾಯ ೩. ವಿದ್ಯಾಪ್ರಚಾರ ೪.ನೀರಿನ ಸೌಕರ್ಯ ೫. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರ ಗಳು ಸ್ವಯಂ ಆಡಳಿತ ಕ್ಷೇತ್ರ ಗಳಾದವು.

೨. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು ?
ಉ: ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಶಿವನಸಮುದ್ರದ ಬಳಿ ಕಾವೇರಿ ನದಿಯಿಂದ ಜಲವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭವಾಯಿತು. ಇದು ಭಾರತ ಮಾತ್ರವಲ್ಲ ,ಏಷ್ಯಾ ಖಂಡದಲ್ಲಿಯೇ ಮೊದಲ ಜಲವಿದ್ಯುತ್ ಉತ್ಪಾದನಾ ಯೋಜನೆ . ೧೯೦೭ ರಲ್ಲಿ ವಾಣಿವಿಲಾಸ ಸಾಗರ (ಮಾರಿಕಣಿವೆ ) ಕಟ್ಟಲ್ಪಟ್ಟಿತು . ೧೯೧೧ ರಲ್ಲಿ ಕೃಷ್ಣರಾಜ ಸಾಗರ ಇವರ ಬೃಹತ್ ಮುಂಗಾಣ್ಕೆಯ ಕೊಡುಗೆ .

೩. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?
ಉ: ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು .ಶಿಕ್ಷಣವು ಸಂಜೀವಿನಿ ಎಂದರಿತಿದ್ದ ಅವರುಶಿಕ್ಷಣದ ಹಲವು ಯೋಜನೆಗಳನ್ನು ರೂಪಿಸಿದರು."ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇಜನರ ಸೊತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂಬುದನ್ನು ಮನಗಂಡಿದ್ದರು.

೪.ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಏನೆಂದು ಹೇಳಿದ್ದಾರೆ?
ಉ: "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ.ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ.ತಾವು ಕಡಿಮೆ ಮಾತನಾಡಿದ್ದೀರಿ;ಹೆಚ್ಚು ಕೆಲಸ ಮಾಡಿದ್ದೀರಿ.ಅದನ್ನು ನಾವು ತಮ್ಮಿಂದ ಕಲಿಯೋಣ".ಎಂದು ಪಂಡಿತ್ ಜವಾಹರಲಾಲ್ ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರ ಕುರಿತು ಹೇಳಿದರು.

೫. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು ?
ಉ: ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದ ವಿಶ್ವೇಶ್ವರಯ್ಯನವರು ೧೯೧೩ ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿದರು.ಉಳಿತಾಯ ಬ್ಯಾಂಕ್ ಗಳು,ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳ ರಚನೆ ಮಾಡಿದರು. ಸಾರ್ವಜನಿಕ ಜೀವ ವಿಮಾ ಯೋಜನೆ ಜಾರಿಗೆ ತಂದರು.ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರವನ್ನು ಬಲವರ್ಧನೆಗೊಳಿಸಿದರು.ಪ್ರಾಂತೀಯ ಸಹಕಾರಿ ಬ್ಯಾಂಕ್ ಗಳನ್ನು ಸ್ಥಾಪಿಸಿದರು.ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವಗಳನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

## ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ' ಮಾದರಿ ಮೈಸೂರು ರಾಜ್ಯ ' ಹೇಗಾಯಿತು ?
ಉ: ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದರು. ಇವರ ಕಾಲದಲ್ಲಿ ಪ್ರಜಾಪ್ರತಿನಿಧಿ ಸಭೆಯು ನೂತನ ರೂಪವನ್ನು ಪಡೆದು ನಿಜವಾದ ಜನಪ್ರತಿನಿಧಿ ಸಭೆಯಾಗಿ ಪರಿವರ್ತನೆಯಾಯಿತು. ೧೯೨೩

ರಲ್ಲಿ ಇವರು ಪ್ರಜಾಪ್ರತಿನಿಧಿ ಸಭೆಯನ್ನು ಶಾಸನಬದ್ಧ ಸಂಸ್ಥೆಯಾಗಿ ಮಾರ್ಪಡಿಸಿ ಪ್ರಜಾತಂತ್ರದ ದೃಷ್ಟಿಯಿಂದ ಭಾರತದಲ್ಲಿಯೇ ಮಾದರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವಂತೆ ಮಾಡಿದರು. ೧೯೦೭ರಲ್ಲಿ ಇವರು ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದರು. ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ಸಾಹಿತ್ಯ ,ಸಂಗೀತ ,ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. ಇವರ ಆಡಳಿತಾವಧಿಯಲ್ಲಿ ಏಷ್ಯಾದ ಮೊದಲ ಜಲವಿದ್ಯುತ್ ಯೋಜನೆ ಶಿವನಸಮುದ್ರದ ಕಾವೇರಿ ನದಿಯ ಬಳಿ ಪ್ರಾರಂಭವಾಯಿತು. ನಾಡಿನ ಮೊದಲ ವಿಶ್ವವಿದ್ಯಾಲಯ ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಇವರು ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದಿದ್ದರು.

ಹಲವಾರು ಸಾಮಾಜಿಕ ಸುಧಾರಣೆಗಳ ಮೂಲಕ ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾಗಿದ್ದ ಇವರು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿದರು.

೨.ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನುಕುರಿತು ಬರೆಯಿರಿ.

ಉ: ನಾಲ್ವಡಿ ಕೃಷ್ಣ ರಾಜ ಒಡೆಯರಿಂದ ದಿವಾನರಾಗಿ ನೇಮಕವಾದ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಳಿಸಿದರು.ರಾಜ್ಯ ಪ್ರವಾಸ ಮಾಡಿ ಅಜಮಾಯಿಸಿ ಕಾರ್ಯ ನಡೆಸಿದರು.ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆಗೆ ಪ್ರಾಶಸ್ತ್ಯ ನೀಡಿದರು.ನೇಮಕಾತಿಯಲ್ಲಿ ಸ್ಥಳಿಯರಿಗೆ ಆದ್ಯತೆ ನೀಡಿದರು..ಮೈಸೂರು ಮಾದರಿ ಎಂಬ ಹೊಸ ಆಡಳಿತ ಜನ್ಮ ತಾಳಲು ಕಾರಣರಾದರು.ಇವರ ಆಡಳಿತಾವಧಿಯಲ್ಲಿ ಮೈಸೂರು ರಾಜಧಾನಿಯಾಗಿ ಮತ್ತು ರಾಜ್ಯದ ಎರಡನೆಯ ದೊಡ್ಡ ನಗರವಾಗಿ ಪ್ರಸಿದ್ಧಿ ಪಡೆಯಿತು. ಮೈಸೂರಿನ ಹೊಸ ಅರಮನೆ , ಸಿ. ರಂಗಾಚಾರ್ಲು ಪುರಭವನ ,ಅರಮನೆ ವಿಸ್ತರಣೆ, ಕೃಷ್ಣರಾಜೇಂದ್ರ ಆಸ್ಪತ್ರೆ , ಲಲಿತಮಹಲ್ ಅರಮನೆಯ ತಳಹದಿ, ಮತ್ತು ಪ್ರಧಾನ ಅರಮನೆಯ ಕಚೇರಿ ಸಮುಚ್ಚಯಗಳು ಇವರ ಕಾಲದಲ್ಲಿಯೇನಿರ್ಮಾಣಗೊಂಡವು. ಶಿವನಸಮುದ್ರ ಜಲವಿದ್ಯುತ್ ಉತ್ಪಾದನೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಿದರು. ಜನಾರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಹಲವಾರು ಆಸ್ಪತ್ರೆಗಳನ್ನು ಪ್ರಾರಂಭಿಸಿದರು. ಸಾಂಕ್ರಾಮಿಕ ರೋಗಗಳ ನಿವಾರಣೆಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಹೀಗೆ ವಿಶ್ವೇಶ್ವರಯ್ಯ ಅವರು ಹೊಸಯುಗದ ಹರಿಕಾರರಾಗಿ ಮೈಸೂರು ಸಂಸ್ಥಾನಕ್ಕೆ ನವಚೈತನ್ಯವನ್ನು ತುಂಬಿದರು.

೩.ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯಅವರು ಸಲ್ಲಿಸಿದ ಕೊಡುಗೆಗಳನ್ನು ತಿಳಿಸಿ

ಉ: ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ಯೋಜನೆಗಳನ್ನು ರೂಪಿಸಿದರು.೧೯೧೩ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಬೇರ್ಪಡಿಸಿ ಸಂಸ್ಥಾನವೇ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು.ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಫಲಶೃತಿ.ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜನಿಯರಿಂಗ್ ಶಾಲೆ ,ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕಸಂಸ್ಥೆಗಳನ್ನು ಪ್ರಾರಂಭಿಸಿದರು.ಮಹಿಳೆಯರಿಗಾಗಿ ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವುದರ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.ಗ್ರಂಥಾಲಯಗಳ ವ್ಯವಸ್ಥೆಗೆ ಅಸ್ಥಿಭಾರ ಹಾಕಿದರು.ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

## ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ಸಾಮಾಜಿಕ ಕಾನೂನುಗಳ ಹರಿಕಾರ ."

ಉ: ಈ ಮೇಲಿನ ವಾಕ್ಯವನ್ನು ಭಾಗ್ಯಶಿಲ್ಪಿಗಳು ಗದ್ಯಭಾಗದ 'ನಾಲ್ವಡಿ ಕೃಷ್ಣರಾಜ ಒಡೆಯರ್' ಎಂಬ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಸ್ಥಾನವು ಮಾದರಿ ಮೈಸೂರು ಎಂದು ಹೆಸರಾಗಿತ್ತು. ಇವರು ಮೈಸೂರಿನ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದರು. ಇವರು ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಹೆಸರಾಗಿದ್ದರು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಮೈಸೂರು ಸಂಸ್ಥಾನದ ಅಭಿವೃದ್ಧಿಗಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಹಲವಾರು ಕ್ರಮಗಳನ್ನು ಕೈಗೊಂಡಿದ್ದರಿಂದ ಅವರು ಮೇಲಿನಂತೆ ಹೆಸರಾಗಿದ್ದರು .

೨.''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ''

ಉ: ಈ ಮೇಲಿನ ವಾಕ್ಯವನ್ನು ಡಿ.ಎಸ್ .ಜಯಪ್ಪಗೌಡರು ಬರೆದ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಕೃತಿಯಿಂದ ಆರಿಸಲಾದ ಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ವಿಶ್ವೇಶ್ವರಯ್ಯನವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಖಾನ್ ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ವಿಯಾದರು.ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು.ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂ ಚಾಲಿತ ಬಾಗಿಲುಗಳನ್ನು ಅಳವಡಿಸಿದರು ಎನ್ನುವಾಗ ಲೇಖಕರು ಮೇಲಿನಂತೆ ಹೇಳಿದ್ದಾರೆ..

ಸ್ವಾರಸ್ಯ : ವಿಶ್ವೇಶ್ವರಯ್ಯನವರು ವೈಜ್ಞಾನಿಕ ವಿಮರ್ಶಾ ಶಕ್ತಿಯನ್ನು ಹೊಂದಿದ್ದರು. ದೂರದರ್ಶಿತ್ವ ಶಕ್ತಿ ಅವರಲ್ಲಿತ್ತು. ಸದಾ ಹೊಸತನ್ನು ಅನ್ವೇಷಿಸುವ ಮೂಲಕ ಸಮಾಜಕ್ಕೆ ಒಳಿತು ಮಾಡುವ ಮನೋಭಾವ ಅವರದಾಗಿತ್ತು. ಅವರ ಸಾಧನೆಗಳು ಅವರ ವ್ಯಕ್ತಿತ್ವಕ್ಕೆ ಒಂದು ಕಿರೀಟದ ಹಾಗೆ ಎನ್ನುವುದನ್ನು ಮೇಲಿನ ವಾಕ್ಯ ಸ್ಪಷ್ಟಪಡಿಸುವುದು.

೩.''ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ''.

ಈ ಮೇಲಿನ ವಾಕ್ಯವನ್ನು ಡಿ.ಎಸ್ .ಜಯಪ್ಪಗೌಡರು ಬರೆದ ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಕೃತಿಯಿಂದ ಆರಿಸಲಾದ ಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ನಾಲ್ವಡಿ ಕೃಷ್ಣರಾಜ ಒಡೆಯರಿಂದ ದಿವಾನರಾಗಿ ನೇಮಕವಾದ ಸರ್ ಎಂ ವಿಶ್ವೇಶರಯ್ಯ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು.ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಮರ್ಥಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆಗೆ ಪ್ರಾಶಸ್ತ್ಯ ನೀಡಿದರು.ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು.ವಿಶ್ವೇಶ್ವರಯ್ಯನವರ ಕುರಿತು ಅಭಿಮಾನ ಹೊಂದಿದ ಜನರು ಮೇಲಿನಂತೆ ಅವರ ಕುರಿತು ಹೇಳಿದರು ಎಂದು ಲೇಖಕರು ವಿವರಿಸಿದ್ದಾರೆ.

ಸ್ವಾರಸ್ಯ : ಸ್ಥಳೀಯರಿಗೆ ಆದ್ಯತೆ ನೀಡುವ ಮೂಲಕ ಅಲ್ಲಿನ ನಿವಾಸಿಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ನೀಡಿದ್ದರು. ಆದ್ದರಿಂದ ಅಲ್ಲಿನ ನಿವಾಸಿಗಳಲ್ಲಿ ಇಂತಹ ದಿವಾನರು ಸಿಕ್ಕಿದ್ದು ನಮ್ಮ ಭಾಗ್ಯ ಎಂಬ ಭಾವನೆ ಮನೆಮಾಡಿತ್ತು ಎಂದು ಮೇಲಿನ ವಾಕ್ಯವು ಸೂಚಿಸುವುದು.

೪. " ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು ."

ಉ: ಈ ಮೇಲಿನ ವಾಕ್ಯವನ್ನು ಭಾಗ್ಯಶಿಲ್ಪಿಗಳು ಗದ್ಯಭಾಗದ 'ನಾಲ್ವಡಿ ಕೃಷ್ಣರಾಜ ಒಡೆಯರ್' ಎಂಬ ಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದರು. ಅವರ ಆಡಳಿತಾವಧಿಯಲ್ಲಿ ಹಲವಾರು ಸಾಮಾಜಿಕ ಕಾನೂನುಗಳನ್ನು ಜಾರಿಗೆ ತಂದಿದ್ದರು. ಅದರಲ್ಲಿ ಅವರು ಕ್ರಿ.ಶ. ೧೯೨೭ರಲ್ಲಿ ಜಾರಿಗೆ ತಂದ ಸ್ತ್ರೀಯರಿಗೆ ಮತದಾನದ ಹಕ್ಕೂ ಕೂಡ ಒಂದಾಗಿತ್ತು.
ಸ್ವಾರಸ್ಯ : ನಾಲ್ವಡಿ ಕೃಷ್ಣರಾಜ ಒಡೆಯರು ಜನತೆಯ ಬಗ್ಗೆ ಅದರಲ್ಲೂ ವಿಶೇಷವಾಗಿ ಸ್ತ್ರೀಯರ ಪರವಾಗಿ ಹೊಂದಿದ್ದ ಸಾಮಾಜಿಕ ಕಳಕಳಿಯನ್ನು ಮೇಲಿನ ವಾಕ್ಯವು ಸೂಚಿಸುವುದು.

## ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿರಿ.

೧. ನಾಲ್ವಡಿ ಕೃಷ್ಣರಾಜ ಒಡೆಯರ್ ರವರಿಗೆ ರೀಜೆಂಟರಾಗಿ ಕಾರ್ಯ ನಿರ್ವಹಿಸಿದವರು. ___ಉ: ಅವರ ತಾಯಿ ಮಹಾರಾಣಿ ವಾಣಿವಿಲಾಸರವರು .
೨. ೧೯೧೪ ರಲ್ಲಿ ಶಾಲಾ ಪ್ರವೇಶಕ್ಕೆ ___ ನಿಷೇಧವಾಯಿತು. ಉ: ಜಾತಿಪರಿಗಣನೆಯ ನಿಷೇಧ
೩. ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದಲ್ಲಿ ___ ಆಗಿ ಸೇವೆ ಪ್ರಾರಂಭಿಸಿದರು. ಉ: ಸಹಾಯಕ ಎಂಜನಿಯರ್
೪. ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ___ ಅವರು ವಿಶ್ವೇಶ್ವರಯ್ಯ ಅವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಉ: ಲಾರ್ಡ್ ಸಂಡ್ ಹರ್ಸ್ಟ್
೫. ಭಾರತ ಸರ್ಕಾರವು ವಿಶ್ವೇಶ್ವರಯ್ಯನವರಿಗೆ --- ಎಂಬ ಪ್ರಶಸ್ತಿ ನೀಡಿ ಗೌರವಿಸಿತು. ಉ: ಭಾರತ ರತ್ನ

ಭಾಷಾ ಚಟುವಟಿಕೆ

೧. ತತ್ಸಮ ತದ್ಭವ ಬರೆಯಿರಿ

ವಂಶ– ಬಂಚ ಸ್ಥಾನ –ತಾಣ ಯಶ–ಜಸ ಪಟ್ಟಣ –ಪತ್ತನ ಕಾರ್ಯ –ಕಜ್ಜ

| | |
|---|---|
| ಘಟಕ ಪರೀಕ್ಷೆ –೧ ೨೦ ಅಂಕಗಳು<br>ಡಿ.ಎಸ್.ಜಯಪ್ಪಗೌಡರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು<br>ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೩*೧=೩<br>೧.ನಾಲ್ವಡಿ ಕೃಷ್ಣರಾಜ ಒಡೆಯರು ಯಾವಾಗ ಪಟ್ಟಾಭಿಷಿಕ್ತರಾದರು? ೨.ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿಕಂಕಣಬದ್ಧರಾದರು? ೩.ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲವಿದ್ಯುತ್ ಯೋಜನೆ ಯಾವುದು ?ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨ ಅಂಕಗಳು<br>೧.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?<br>.ಸಂದರ್ಭಸಹಿತವಿವರಿಸಿ.೨*೩=.೧"ಸಾಮಾಜಿಕ ಕಾನೂನುಗಳ ಹರಿಕಾರ ."೨.''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ''<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ .<br>ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ' ಮಾದರಿ ಮೈಸೂರು ರಾಜ್ಯ ' ಹೇಗಾಯಿತು ? | ಘಟಕ ಪರೀಕ್ಷೆ–೨<br>ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ ೨*೧=೨<br>೧.ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?೨. ವಿಶ್ವೇಶ್ವರಯ್ಯ ಅವರಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ ೨*೩=೬<br>೧.'ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ''.<br>೨. ಮೊಟ್ಟಮೊದಲ ಬಾರಿಗೆ ಸ್ತ್ರೀಯರಿಗೆ ಮತದಾನದ ಹಕ್ಕು<br>ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೪*೨=೮<br>೧.ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಏನೆಂದು ಹೇಳಿದ್ದಾರೆ?೨.ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು ?೩.ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ ?೪.ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬಂದವು ?<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>೨.ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿಸಲ್ಲಿಸಿದ ಸೇವೆಯನ್ನುಕುರಿತು ಬರೆಯಿರಿ. |

## ಗದ್ಯಪಾಠ ೫ ಎದೆಗೆ ಬಿದ್ದ ಅಕ್ಷರ. _ _ ದೇವನೂರು ಮಹದೇವ

### ಕೃತಿಕಾರರ ಪರಿಚಯ



ದೇವನೂರು ಮಹಾದೇವ ಅವರು ಕ್ರಿ..ಶ. ೧೯೪೯ ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವನೂರಿನಲ್ಲಿ ಜನಿಸಿದರು. ಇವರು ದ್ಯಾವನೂರು, ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನೆಂಟ, ನೋಡು ಮತ್ತು ಕೂಡು ,ಎದೆಗೆ ಬಿದ್ದ ಅಕ್ಷರ ಮೊದಲಾದ ಕೃತಿಗಳನ್ನು ಬರೆದಿದ್ದಾಇವರಿಗೆ ಕುಸುಮಬಾಲೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಒಡಲಾಳ ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ಗದ್ಯಭಾಗವನ್ನು ಇವರ **ಎದೆಗೆ ಬಿದ್ದ ಅಕ್ಷರ** ಕೃತಿಯಿಂದ ಆರಿಸಲಾಗಿದೆ.

### ಒಂದೊಂದು ವಾಕ್ಯದಲ್ಲಿ ಉತ್ತರಿಸಿ .

೧. ಇಂದಲ್ಲ ನಾಳೆ ಫಲ ಕೊಡುವ ಅಂಶಗಳು ಯಾವುವು ?

ಉ: ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ ಇವು ಇಂದಲ್ಲ ನಾಳೆ ಫಲ ಕೊಡುವ ಅಂಶಗಳು .

೨ .ಮನೆ ಮಂಚಮ್ಮ ಯಾರು ?

ಉ: ಮನೆ ಮಂಚಮ್ಮ ಊರಿನ ಗ್ರಾಮ ದೇವತೆ.

೩. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?

ಉ: ಮನೆ ಮಂಚಮ್ಮ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ

೪. 'ಶಿವಾನುಭವ ಶಬ್ದಕೋಶ ' 'ಪುಸ್ತಕ ಬರೆದವರು ಯಾರು ?

ಉ: ಶಿವಾನುಭವ ಶಬ್ದಕೋಶ ಪುಸ್ತಕ ಬರೆದವರು ಹಳಕಟ್ಟಿಯವರು. (ಫ.ಗು.ಹಳಕಟ್ಟಿ)

೫. ವಚನಕಾರರಿಗೆ ಯಾವುದು ದೇವರಾಗಿತ್ತು ?

ಉ: ವಚನಕಾರರಿಗೆ ಅವರವರ ಇಷ್ಟದೈವ ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು.

೬ . ಅಶೋಕ ಪೈ ಅವರ ವೃತ್ತಿ ಯಾವುದು ?

ಉ: ಅಶೋಕ ಪೈ ಅವರು ವೃತ್ತಿಯಿಂದ ಒಬ್ಬ ಮನೋವೈದ್ಯರು .

೭.. ದೇವನೂರರ 'ನನ್ನ ದೇವರು ' ಯಾರೆಂಬುದನ್ನು ಸ್ಪಷ್ಟೀಕರಿಸಿ .

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ದೇವನೂರರಿಗೆ ಅವನೇ ಅವರ ದೇವರು.

## ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

ಉ: ಅಶೋಕ ಪೈಯವರು ಹೇಳಿದ ಮನಸ್ಸಿನ ಬಗ್ಗೆ ನಡೆದಿರುವ ಸಂಶೋಧನಾ ಸತ್ಯವೆಂದರೆ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವವರು ಅನುಭವಿಸುತ್ತಿರುವ ದುಃಖ ಅಥವಾ ಸಂತೋಷದ ಭಾವವು ಪಕ್ಕದ ಕೊಠಡಿಯಲ್ಲಿಟೆಲಿವಿಷನ್ ನೋಡದೆ ಕುಳಿತಿರುವವರ ಮೇಲೂ ಸ್ವಲ್ಪ ಮಟ್ಟಿಗೆ ಅದೇ ರೀತಿಯಾದ ಪ್ರಭಾವವನ್ನು ಬೀರುತ್ತದೆ.ಅಂದರೆ ಈ ಉದಾಹರಣೆ ವಿವರಿಸುವ ನಿಜವೆಂದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ.ಯಾವುದೇ ಒಂದುಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೋ.ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ.

೨. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ವಿವರಿಸಿ .

ಉ: ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳುವಳಿಕೆ ,ಜ್ಞಾನ ಮಾತ್ರ ಅಲ್ಲ ; ಅದು ಕ್ರಿಯೆಯ ಅನುಭವದಿಂದ ಒಡಮೂಡುವುದು .ಅದು ಕೇಳಿ ತಿಳಿದಿದ್ದಲ್ಲ.ಕ್ರಿಯೆಯಲ್ಲಿ ಮೂಡಿದ ತಿಳುವಳಿಕೆ ,ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ

೧. . ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

ಉ: ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯಲ್ಲಿ ಒಂದು ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ ಗುಡಿ ಕಟ್ಟಲು ಆರಂಭಿಸುತ್ತಾರೆ.ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು ''ನಿಲ್ಸಿ ನನ್ನ ಮಕ್ಕಳಾ'' ಎಂದು ಅಬ್ಬರಿಸಿದಾಗ ಕೆಲಸ ನಿಲ್ಲಿಸಿದ ಜನ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಮತ್ತು ಜನರ ನಡುವೆ ಮಾತುಕತೆ ನಡೆಯುತ್ತದೆ.ಏನು ಮಾಡುತ್ತಿದ್ದೀರಿ ಎಂಬ ದೇವತೆಯ ಪ್ರಶ್ನೆಗೆ ಜನರೆಲ್ಲ ನಿನಗೊಂದು ಗುಡಿ ಕಟ್ಟುತ್ತಿದ್ದೀವಿ ಎಂದು ಉತ್ತರಿಸುತ್ತಾರೆ.ಆಗ ದೇವತೆಯು ನನಗೆ ನೀವು ಮನೆಕಟ್ಟುತ್ತಿರುವಿರಾದರೆ ನನ್ನ ಮಕ್ಕಳಾದ ನಿಮಗೆಲ್ಲ ಮನೆ ಇದೆಯೋ ಎಂದು ಪ್ರಶ್ನಿಸುತ್ತಾಳೆ.ಆ ಜನರಲ್ಲಿ ಒಬ್ಬ ನನಗಿಲ್ಲ ಎಂದು ಉತ್ತರಿಸಿದಾಗ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು ಆದೇಶಿಸಿದ ಮಂಚಮ್ಮ ಮನೆ ಮಂಚಮ್ಮನಾಗುತ್ತಾಳೆ. ಹೀಗೆ ಚಾವಣಿಯಿಲ್ಲದ ಗುಡಿಯಲ್ಲಿ ತಾಯಿ ಮನೆಂಚಮ್ಮ ಇಂದಿಗೂ ಪೂಜಿತಳಾಗುತ್ತಿದ್ದಾಳೆ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ .

೧. . ''ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೆ ಮನೆ ಬೇಡ .''

ಉ: ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎನ್ನುವ ವೈಚಾರಿಕ ಲೇಖನದಿಂದ ಆಯ್ದು ಕೊಳ್ಳಲಾಗಿದೆ.ಈ ಮಾತನ್ನು ಮಂಚಮ್ಮ ದೇವತೆ ಜನರಿಗೆ ಹೇಳಿದ್ದಾಳೆ.

ಸಂದರ್ಭ : ಕವಿ ಸಿದ್ಧಲಿಂಗಯ್ಯನವರು ಲೇಖಕರಿಗೆಒಮ್ಮೆ ಹೇಳಿದ ಕತೆಯಲ್ಲಿ ಬರುವ ಪ್ರಸಂಗ ಇದಾಗಿದ್ದು ಅದರಲ್ಲಿ ಬರುವ ಹಾಗೆ ಒಂದು ಗ್ರಾಮದ ಜನರು ತಮ್ಮ ಗ್ರಾಮ ದೇವತೆಗೋಸ್ಕರ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ.ಗುಡಿ ಚಾವಣಿಯ ಮಟ್ಟವನ್ನು ತಲುಪಿದಾಗ ಇದ್ದಕ್ಕಿದ್ದಂತೆ ಜನರಿಗೆ ಪ್ರತ್ಯಕ್ಷಳಾದ ಮಂಚಮ್ಮ ದೇವತೆ ಅವರು ಮಾಡುತ್ತಿರುವ ಕಾರ್ಯದ ಕುರಿತು ವಿಚಾರಿಸುತ್ತಾಳೆ. ಜನರು ಅವಳಿಗಾಗಿಯೇ ಗುಡಿ ಕಟ್ಟುತ್ತಿರುವುದಾಗಿ ಹೇಳಿದಾಗ ಅವಳು ನಿಮಗೆಲ್ಲರಿಗೂ ಮನೆ ಇದೆಯೋ ಎಂದು ಪ್ರಶ್ನಿಸುತ್ತಾಳೆ.ಅವರಲ್ಲೊಬ್ಬ ತನಗಿಲ್ಲವೆಂದು ಹೇಳಿದಾಗ ಮಂಚಮ್ಮ ದೇವತೆ ಎಲ್ಲರಿಗೂ ಮನೆ ಆಗುವವರೆಗೆ ತನಗೆ ಮನೆ ಬೇಡವೆಂದು ಹೇಳುತ್ತಾಳೆ.

ಸ್ವಾರಸ್ಯ : ಬದುಕಲು ನೆಲೆ ಇಲ್ಲದೇ ಎಷ್ಟೋ ಜನರು ಕಣ್ಣೆದುರಿಗೆ ಕಷ್ಟ ಪಡುತ್ತಿರುವ ಸಂದರ್ಭದಲ್ಲಿ ಕಣ್ಣಿಗೆ ಕಾಣದ ದೇವತೆಗೆ ಮನೆ ಕಟ್ಟುವ ಪ್ರಯತ್ನ , ಅದನ್ನು ನೊಡಿದ ದೇವತೆಯೇ ಪ್ರತ್ಯಕ್ಷಳಾಗಿ ಸಮಾಜದಲ್ಲಿ ನಿಜವಾಗಿ ಯಾರಿಗೆ ಮನೆಯ ಅಥವಾ ಆಶ್ರಯದ ಅವಶ್ಯಕತೆ ಇದೆಯೋ ಅಂತವರಿಗೆ ನೆಲೆ ಒದಗಿಸಬೇಕಾದ ಅವಶ್ಯಕತೆಯನ್ನು ನೆರೆದ ಜನರಿಗೆ ಹೇಳುವ ಮೂಲಕ ಬದುಕಿಗೆ ಅಗತ್ಯವಾದ ಮಾನವೀಯ ಮೌಲ್ಯವನ್ನು ಬೆಳೆಸಿಕೊಳ್ಳಬೇಕಾದ ಅಗತ್ಯವನ್ನು ಪ್ರಸ್ತುತ ವಾಕ್ಯವು ಸೂಚಿಸುವುದು.

೨.."ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. "

ಉ: ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎನ್ನುವ ವೈಚಾರಿಕ ಲೇಖನದಿಂದ ಆಯ್ದು ಕೊಳ್ಳಲಾಗಿದೆ. ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ: ಮನೋವೈದ್ಯರಾದ ಅಶೋಕ ಪೈ ಯವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯದ ಕುರಿತು ಹೇಳುತ್ತಾ ಒಂದು ಕೊಠಡಿಯಲ್ಲಿ ಒಂದಷ್ಟು ಜನರು ಟೆಲಿವಿಷನ್ ವೀಕ್ಷಿಸುತ್ತಿರುವಾಗ ಅವರು ನೋಡುವ ಸನ್ನಿವೇಷಗಳಿಗೆ ತಕ್ಕಂತೆ ದುಃಖ ಅಥವಾ ಸಂತೋಷದ ಭಾವವನ್ನು ಅನುಭವಿಸುತ್ತಿರುವಾಗ ಅವರ ಭಾವವು ಅವರ ಪಕ್ಕದ ಕೊಠಡಿಯಲ್ಲಿ ಟೆಲಿವಿಷನ್ ನೋಡದೆ ಇರುವವರನ್ನು ಸ್ವಲ್ಪ ಮಟ್ಟಿಗಾದರೂ ತಲುಪಿ ಅವರು ಕೂಡ ದುಃಖ ಅಥವಾ ಸಂತೋಷದ ಭಾವವನ್ನು ಅಲ್ಪ ಮಟ್ಟಿಗೆ ತಾಳುತ್ತಾರೆಎಂದು ವಿವರಿಸಿದ್ದಾರೆ.ಇದನ್ನು ಗಮನಿಸಿದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಅರ್ಥವಾಗುತ್ತದೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಎಲ್ಲ ರೀತಿಯ ಭಾವನೆಗಳು ಪ್ರತಿಯೊಬ್ಬರಿಗೂ ಉಂಟಾಗುವಂತವೇ . ಇನ್ನೊಬ್ಬರಿಗೆ ಉಂಟಾದ ಭಾವನೆಗಳು ನಮನ್ನೂ ತಟ್ಟಬಹುದು. ಯಾವುದೇ ಜೀವಿಗೆ ಉಂಟಾಗುವ ಅನುಭವಗಳು ಅಥವಾ ಸಂತೋಷ ದುಗುಡದ ಮನೋಭಾವನೆಗಳು ಪರಿಸರದಲ್ಲಿ ಉಸಿರಾಡುವ ಎಲ್ಲ ಜೀವಿಗಳನ್ನೂ ತಲುಪುತ್ತವೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು "

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎನ್ನುವ ವೈಚಾರಿಕ ಲೇಖನದಿಂದ ಆಯ್ದು ಕೊಳ್ಳಲಾಗಿದೆ. ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ : ವಚನಕಾರರ ದೃಷ್ಟಿಯಲ್ಲಿ ನಡೆಯಿಂದ ನುಡಿ ಹುಟ್ಟಿದ್ದರೆ ಅದು ಅರಿವು . ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟ ದೈವ . ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ತಮ್ಮ ಪ್ರಜ್ಞೆಯನ್ನೇ ದೇವರು ಅಂದುಕೊಂಡಾಗ ಸುಳ್ಳು ಹೇಳಲು ಸಾಧ್ಯವಾಗುವುದಿಲ್ಲ. ಬೇರೆ ಯಾವುದೇ ದೇವರ ಮುಂದೆ ಸುಳ್ಳು ಹೇಳಿ ತಪ್ಪಿಸಿಕೊಳ್ಳಬಹುದು . ಆದರೆ ತಮ್ಮ ಪ್ರಜ್ಞೆಯ ಮುಂದೆ ಸುಳ್ಳು ಹೇಳಲು ಸಾಧ್ಯವಾಗದು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

.

೪ " ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ "

ಉ: ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ 'ಎದೆಗೆ ಬಿದ್ದ ಅಕ್ಷರ' ಎನ್ನುವ ವೈಚಾರಿಕ ಲೇಖನದಿಂದ ಆಯ್ದು ಕೊಳ್ಳಲಾಗಿದೆ. ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ:ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೋ.ಈ ಅನುಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ.ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು.ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು –ಅದು

ಘಾಸಿಗೊಳಿಸುವುದು –ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೇ.ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಮನುಷ್ಯನು ತನ್ನಲ್ಲಿರುವ ಕ್ರೌರ್ಯದ ಮನೋಭಾವನೆಗಳನ್ನು ಕಿತ್ತೊಗೆದು ಸರ್ವರನ್ನು ಮಾನವೀಯತೆಯಿಂದ ನೋಡಬೇಕಾದುದು ಅತೀ ಅಗತ್ಯವೆಂಬ ಲೇಖಕರ ಅಭಿಪ್ರಾಯ ಇಲ್ಲಿ ವ್ಯಕ್ತವಾಗಿದೆ.

## ಭಾಷಾ ಚಟುವಟಿಕೆ

ಕೊಟ್ಟಿರುವ ಪದಗಳ ವಿರುದ್ಧಾರ್ಥಕ ಪದ ಬರೆಯಿರಿ.

ಒಳಿತು **X** ಕೆಡುಕು , ಸಮಷ್ಟಿ **X** ವ್ಯಷ್ಟಿ, ಪುಣ್ಯ **X** ಪಾಪ , ಬೆಳಕು **X** ಕತ್ತಲು , ಧರ್ಮ **X** ಅಧರ್ಮ

| | |
|---|---|
| ಘಟಕ ಪರೀಕ್ಷೆ –೧ ೧೫ ಅಂಕಗಳು<br>ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ. ೪*೧=೪<br>೧.ಇಂದಲ್ಲ ನಾಳೆ ಫಲ ಕೊಡುವ ಅಂಶಗಳು ಯಾವುವು ?<br>೨.ಮನೆ ಮಂಚಮ್ಮ ಯಾರು ?೩.ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?೪.ಶಿವಾನುಭವ ಶಬ್ದಕೋಶ ' 'ಪುಸ್ತಕ ಬರೆದವರು ಯಾರು ?<br>ದೇವನೂರು ಮಹಾದೇವ ಅವರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು<br>ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ? ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು ವಿವರಿಸಿ .<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.<br>ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.೪ ಅಂಕಗಳು | ಘಟಕ ಪರೀಕ್ಷೆ –೨ ೧೫ ಅಂಕಗಳು<br>ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ ೩*೧=೩<br>೧. ವಚನಕಾರರಿಗೆ ಯಾವುದು ದೇವರಾಗಿತ್ತು ?<br>೨.ಅಶೋಕ ಪೈಯವರ ವೃತ್ತಿ ಯಾವುದು ?<br>೩. ದೇವನೂರರ ನನ್ನ ದೇವರು ಯಾರು ಎಂಬುದನ್ನು ಸ್ಪಷ್ಟೀಕರಿಸಿ.<br>ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. ೪*೩=೧೨<br>೧. ''ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೆ ಮನೆ ಬೇಡ .''<br>೨.''ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ. ''<br>೩. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು "<br>೪.'' ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ '' |

## ಗದ್ಯ ಪಾಠ ೬ ವ್ಯಾಘ್ರಗೀತೆ.- ಎ.ಎನ್ ಮೂರ್ತಿ ರಾವ್

### ಕೃತಿಕಾರರ ಪರಿಚಯ



ಎ.ಎನ್ ಮೂರ್ತಿರಾವ್ ಅವರು ಕ್ರಿ.ಶ.೧೯೦೦ ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು. ಇವರು ಹಗಲುಗನಸುಗಳು ಅಪರವಯಸ್ಕನ ಅಮೆರಿಕಾಯಾತ್ರೆ ,ಚಂಡಮಾರುತ ,ಮಿನುಗುಮಿಂಚು ,ಪೂರ್ವಸೂರಿಗಳೊಡನೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ.ಇವರ ಚಿತ್ರಗಳು -ಪತ್ರಗಳು ಕೃತಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ.

ಪ್ರಸ್ತುತ ವ್ಯಾಘ್ರಗೀತೆ ಗದ್ಯಭಾಗವನ್ನು ಇವರ ಸಮಗ್ರ ಲಲಿತ ಪ್ರಬಂಧಗಳಿಂದ ಆಯ್ದುಕೊಳ್ಳಲಾಗಿದೆ.

### ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಭಗವದ್ಗೀತೆಯನ್ನು ರಚಿಸಿದವರು ಯಾರು ?

ಉ: ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು

೨. ಹುಲಿಗೆ ಪರಮಾನಂದವಾಗಲು ಕಾರಣವೇನು?

ಉ: ಶಾನುಭೋಗರ ದುಂಡು ದುಂಡಾದ ಶರೀರವನ್ನು ಕಂಡು ಹುಲಿಗೆ ಪರಮಾನಂದವಾಯಿತು.

೩. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಉ:ಹಿಂದಿನಿಂದ ಹುಲಿ ಮೈಮೇಲೆ ಎರಗುವುದಿಲ್ಲ ಎಂದರಿತಿದ್ದಶಾನುಭೋಗರು ಅದಕ್ಕೆ ಬೆನ್ನು ತಿರುಗಿಸಿ ನಡೆಯುವುದು ಹುಲಿಯು ಅವರ ಮುಂಭಾಗಕ್ಕೆ ಬಂದು ಮೇಲೆರಗಬೇಕೆಂದು ಮಾಡುವ ಪ್ರಯತ್ನದ ಪುನರಾವರ್ತನೆ ಐದಾರು ಬಾರಿ ನಡೆದು ದಣಿವಾದ ಶಾನುಭೋಗರಿಗೆ ತಲೆಸುತ್ತಲಾರಂಭಿಸಿತು.

೪. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

ಉ:ಶಾನುಭೋಗರ ಬ್ರಹ್ಮಾಸ್ತ್ರ ಅವರ ಬಳಿಯಲ್ಲಿದ್ದ ಖಿರ್ದಿ ಪುಸ್ತಕ.

೫. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?

ಉ:ವಿಧಿ ತನ್ನ ಆಹಾರಕ್ಕೆ ಏನನ್ನು ಒದಗಿಸುದೋ ಎಂದು ಹಸಿದು ಮಲಗಿದ್ದ ಹುಲಿಯು ಯೋಚಿಸಿತು.

### ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

ಉ: ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಚಿಕ್ಕನಾಯಕನ ಹಳ್ಳಿಯಲ್ಲಿರುವ ಖಜಾನೆಗೆ ಕಟ್ಟಿ ಅಲ್ಲಿದ್ದ ಸ್ನೇಹಿತರನ್ನು ನೋಡಿಕೊಂಡು ಶಾನುಭೋಗರು ವಾಪಸ್ಸು ಹೊರಡಬೇಕೆನ್ನುವಷ್ಟರಲ್ಲಿ ಸಂಜೆ ಆರುಗಂಟೆಯಾಗಿತ್ತು.ಅವರು ಮರಳಿ ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು.ಕಾಡು ದಾರಿ,ಆದರೂ ಬೆಳುದಿಂಗಳು ದಿನ ;ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಶಾನು ಭೋಗರು ಯೋಚಿಸಿದರು.

೨. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

ಉ: ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ,ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂದು ಹುಲಿಯ ಅಭಿಪ್ರಾಯ.

೩.ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ

ಉ: ಚಿಕ್ಕನಾಯಕನಹಳ್ಳಿಗೆ ತೆಂಗಿನ ಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು.ಶಾನುಭೋಗರು ಬಿದ್ದ ಸ್ಥಳಕ್ಕೆ ಸ್ವಲ್ಪ ದೂರ ಇದ್ದಾಗ ಎತ್ತುಗಳು ಮುಂದೆ ಹೋಗದೆ ಅಲ್ಲೆ ನಿಂತುಬಿಟ್ಟವು.ಅಷ್ಟರಲ್ಲಿ ಹುಲಿಯ ಗರ್ಜನೆ ಕೇಳಿಸಿತು.ಎತ್ತುಗಳ ಘಂಟೆಯ ಧ್ವನಿ ಕೇಳಿ ಹುಲಿ ಕೆಲವು ನಿಮಿಷ ತಡೆಯಿತು.ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದಲೂ , ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು.ಗರ್ಜನೆ ನಿಂತು ಸ್ವಲ್ಪ ಹೊತ್ತು ಕಳೆದ ಮೇಲೆ ರೈತರು ತಮ್ಮ ಬಳಿಯಿದ್ದ ಕೋವಿಯಿಂದ ಗುಂಡು ಹಾರಿಸಿ ಕೈಲಾದಷ್ಟು ಗಲಭೆ ಮಾಡುತ್ತ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಮುಂದೆ ಬಂದು ನೋಡಿದಾಗ ಶಾನುಭೋಗರು ಮೂರ್ಛೆಯಲ್ಲಿ ಬಿದ್ದಿದ್ದರು. ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದರು.

## ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

ಉ: ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು.ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಲ್ಲಿ ನೋಡಿದರೆ ಅದರಲ್ಲಿ ತಪ್ಪೇನಿದೆ ?ಶಾಕಾಹಾರವನ್ನು ತಿಂದು ಬದುಕಬೇಕಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಹುಲಿಯಲ್ಲಿ ಅದು ದೊಡ್ಡ ಅಪರಾದವಲ್ಲ.ಆದರೆ ಕೊಲ್ಲುವಾಗ ಧರ್ಮಾಧರ್ಮಗಳನ್ನು ಅನುಸರಿಸುತ್ತವೆಯೋ ಇಲ್ಲವೋ ? ಶ್ರೀರಾಮನಂತ ದೊರೆಗಳು ಆಳಿದ ,ಭಗವದ್ಗೀತೆಯಂತ ಗ್ರಂಥ ಉದ್ಭವಿಸಿದ ಭರತ ಭೂಮಿಯಲ್ಲಿ ಹುಲಿಗಳು ಅಧರ್ಮಕ್ಕೆಡೆ ಮಾಡಿಕೊಡಲಾರವು.ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ ,ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುವುದು ಧರ್ಮವಲ್ಲ ಎಂದಿರಬಹುದು.ನಿಶ್ಯಬ್ದವಾಗಿ ಪ್ರಾಣಿಯ ಹಿಂದಕ್ಕೆ ನಡೆದು ,ಅನಂತರ ಅವರ ಮುಂಭಾಗಕ್ಕೆ ನೆಗೆದು ಕೂಡಲೇ ತಿರುಗಿ ಪ್ರಾಣಿಯ ಮೇಲೆ ಬೀಳುತ್ತವೆ. ಖಂಡವಿದೆಕೊ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ ಎಂದು ಹಸುವು ಹೇಳಿದರೂ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನದೆ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನಲೊಲ್ಲದ ಹುಲಿರಾಯನ ಆ ಪವಿತ್ರ ಕಥೆ ಇಂದಿನ ಹುಲಿಗಳಿಗೆ ಆದರ್ಶ.ಆದ್ದರಿಂದ ಅವು ಅಧರ್ಮಕ್ಕೆ ಎಂದೂ ಕೈ ಹಾಕುವುದಿಲ್ಲ ಎಂದು ಮೂರ್ತಿರಾಯರು ಹುಲಿಯ ಬೇಟೆಯಾಡುವ ಬಗೆಯನ್ನು ವಿವರಿಸಿದ್ದಾರೆ.

೨.ಶಾನುಭೋಗರನ್ನು ರಕ್ಷಿಸಿದುದು ಖಿರ್ದಿಪುಸ್ತಕವೇ?ಹುಲಿಯ ಧರ್ಮವೇ?ಸಮರ್ಥನೆಯೊಂದಿಗೆ ವಿವರಿಸಿ.

ಉ: ಶಾನುಭೋಗರಿಗೆ ಖಿರ್ದಿ ಪುಸ್ತಕ ಕೇವಲ ಜೀವನಾಧಾರವಲ್ಲ.ಅದು ಅವರ ರಾಜಭಕ್ತಿಯ ಲಾಂಛನ .ಖಜಾನೆಗೆ ರೈತರ ಕಂದಾಯದ ಹಣವನ್ನು ಕಟ್ಟಿ ಶಾನುಭೋಗರು ತಮ್ಮ ಹಳ್ಳಿಗೆ ಮರಳುತ್ತಿದ್ದ ಸಮಯದಲ್ಲಿ ಕಾಡಿನಲ್ಲಿ ಅವರು ಬರುತ್ತಿದ್ದಾಗ ಹುಲಿಯೊಂದು ಅವರನ್ನು ಬೇಟೆಯಾಡಲು ಹೊಂಚು ಹಾಕಿತು.ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲ ವೆಂದು ಅರಿತಿದ್ದ ಶಾನುಭೋಗರು ಉಪಾಯವಾಗಿ ಹುಲಿಗೆ ಬೆನ್ನು ತಿರುಗಿಸಿ ನಡೆದು ನಡೆದು ದಣಿದರು.ಆ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಅವರ ಬಳಿಯಿದ್ದ ಖಿರ್ದಿ ಪುಸ್ತಕ.ಅದು ಸಧ್ಯಕ್ಕೆ ಅವರ ಬಳಿಯಿದ್ದ ಬ್ರಹ್ಮಾಸ್ತ್ರ.ಅದರಿಂದ ಹುಲಿಯ ಮುಖಕ್ಕೆ ಬಡಿದಾಗ ಏನಾಯಿತೆಂದು ಅರಿಯಲು ಅದಕ್ಕೆ ಅರೆ ನಿಮಿಷ ಹಿಡಿಯಿತು.ಅದನ್ನೇ ಉಪಯೋಗಿಸಿಕೊಂಡು ಓಡಿದ ಅವರು ಕಲ್ಲು ಎಡವಿ ಬಿದ್ದು ಮೂರ್ಛೆ ಹೋದಾಗ ಅಷ್ಟರಲ್ಲಿ ಅಲ್ಲಿಗೆ ಬರುತ್ತಿದ್ದ ರೈತರಿಂದಾಗಿ ಹುಲಿಯಿಂದ ಬಚಾವಾದರು.ಅವರಿಗೆ ಆ ಅರೆ ನಿಮಿಷದ ಅವಕಾಶವನ್ನು ಒದಗಿಸಿ ಕೊಟ್ಟು ಪ್ರಾಣವನ್ನು ಕಾಪಾಡಿದ ಪುಸ್ತಕದ ಮೇಲೆ ಅವರಿಗೆ ಕೃತಜ್ಞತಾ ಭಾವ.ಖಿರ್ದಿ

ಪುಸ್ತಕವೇ ತಮ್ಮ ಜೀವಉಳಿಸಿತು ಎಂಬುದು ಅವರ ನಂಬಿಕೆ.ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ.ಹುಲಿಯ ಧರ್ಮಶ್ರದ್ಧೆಯಿಂದ.ಭರತ ಖಂಡದ ಹುಲಿಗಳ ಧರ್ಮಶ್ರದ್ಧೆ ,ಹಿಂದಿನಿಂದ ದಾಳಿ ಮಾಡಿ ಕೊಲ್ಲದಿರುವ ಅವರ ಉದಾರ ಗುಣವೇ ಶಾನುಭೋಗರು ಹುಲಿಯಿಂದ ಪಾರಾಗಲು ಕಾರಣವಾಗಿದೆ.

## ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ.

೧. ''ಖಂಡವಿದೆಕೋ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ''.

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :ಶಾನುಭೋಗರನ್ನು ಬೇಟೆಯಾಡಬೇಕೆಂದು ಹುಲಿ ಅವರನ್ನು ಹಿಂಬಾಲಿಸಿತು. ಆದರೆ ಹುಲಿಯ ಧರ್ಮಶ್ರದ್ಧೆಯ ಪ್ರಕಾರ ಅದು ಹಿಂದಿನಿಂದ ದಾಳಿ ಮಾಡುವ ಹಾಗಿರಲಿಲ್ಲ. ಇದನ್ನೆ ಅರಿತಿದ್ದ ಶಾನುಭೋಗರು ಆದಷ್ಟು ಅದಕ್ಕೆ ಬೆನ್ನು ಹಾಕಿ ನಡೆಯುತ್ತ ಅದರ ದಾಳಿಯಿಂದ ತಪ್ಪಿಸಿಕೊಳ್ಳುತ್ತಿದ್ದರು.ಮೇಲೆ ಬಿದ್ದೆ ಬಿಡಲೆ ಎಂದು ಯೋಚಿಸಿದ ಹುಲಿಗೆ ತಾನು ಸದ್ವಂಶದಲ್ಲಿ ಜನಿಸಿದವನು ಎಂಬುದು ನೆನಪಾಯಿತು.''ಖಂಡವಿದೆಕೋ,ಮಾಂಸವಿದಕೋ, ಗುಂಡಿಗೆಯ ಬಿಸಿರಕ್ತವಿದೆಕೋ'' ಎಂದು ಎದುರಿಗೇ ಬಂದು ಹಸು ಆಹ್ವಾನಿಸಿದರೂ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ತನ್ನ ಪ್ರಾಣವನ್ನೆ ತೊರೆದ ತನ್ನ ಅಜ್ಜನನ್ನು ಹುಲಿಯು ನೆನಪಿಸಿಕೊಂಡಿತು

ಎಂದು ಲೇಖಕರು ವಿವರಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಹುಲಿಯು ತನ್ನನ್ನು ತಿನ್ನುವುದೆಂಬ ಅರಿವಿದ್ದರೂ ಕೊಟ್ಟ ಮಾತಿನಂತೆ ಹುಲಿಗೆ ಆಹಾರವಾಗಲು ಬಂದ ಪುಣ್ಯಕೋಟಿ ಹಸುವಿನ ಪ್ರಾಮಾಣಿಕತೆ ಸತ್ಯ ಇಲ್ಲಿ ವ್ಯಕ್ತವಾಗಿದೆ.

೨. ''ಸ್ವಧರ್ಮೇ ನಿಧನಂ ಶ್ರೇಯಃ''

ಉ: ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಶಾನುಭೋಗರ ಮೇಲೆ ಹಿಂದಿನಿಂದ ಮೇಲೆ ಬಿದ್ದಾದರೂ ಅವರನ್ನು ಕೊಲ್ಲಬೇಕೆಂದು ಹುಲಿಯು ಒಂದು ಕ್ಷಣ ಆಲೋಚಿಸಿತು.ಆ ಸಂದರ್ಭದಲ್ಲಿ ಅದಕ್ಕೆ ಪುಣ್ಯಕೋಟಿಯ ಸತ್ಯತೆಯನ್ನು ಮೆಚ್ಚಿ ತನ್ನ ಪ್ರಾಣವನ್ನು ಬಿಟ್ಟ ತನ್ನ ವಂಶದ ಹಿರಿಯ ಹುಲಿಯ ನೆನಪಾಯಿತು.ಅಂತಹ ಹುಲಿಯ ಮೊಮ್ಮಗನಾಗಿ ಹುಟ್ಟಿ ತಾನು ಆದರ್ಮಕ್ಕೆ ಕೈ ಹಾಕುವುದೆ ?ಎಂದು ಆಲೋಚಿಸಿದ ಹುಲಿಗೆ ಭಗವದ್ಗೀತೆಯಲ್ಲಿ ಬಂದಿರುವ ಮೇಲಿನ ವಾಕ್ಯ ನೆನಪಾಯಿತುಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ಪಾಲಿಸಿದರೆ ಯಶಸ್ಸು ಸಿಗುವುದು. ಕುಲಧರ್ಮಕ್ಕೆ ಅಪಚಾರವೆಸಗಬಾರದು ಎಂಬ ತತ್ವ ಇಲ್ಲಿ ವ್ಯಕ್ತವಾಗಿದೆ.

೩. ''ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು''

ಉ: ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಶಾನುಭೋಗರು ಹುಲಿಗೆ ಬೆನ್ನು ಹಾಕಿ ಅದರ ಆಕ್ರಮಣವನ್ನು ತಪ್ಪಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸಿ ನಡೆದು ನಡೆದು ಸುಸ್ತಾದರು. ಕೊನೆಗೆ ಅವರಿಗೆ ನೆನಪಾಗಿದ್ದು ಅವರ ಬಳಿಯಲ್ಲಿದ್ದ ಖಿರ್ದಿ ಪುಸ್ತಕ.ಅದನ್ನು ಪ್ರಯೋಗಿಸಿ ಅದರಿಂದ ಹುಲಿಯ ಗಮನ ಸ್ವಲ್ಪವಾದರೂ ಚಲಿಸಿದರೆ ,ಅಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರಬಹುದೆಂದು ಯೋಚಿಸಿ

ಪುಸ್ತಕವನ್ನು ಹುಲಿಯ ಮುಖಕ್ಕೆ ಬೀಸಿದರು.ಬಳಲಿಕೆಯಿಂದ ಜಡವಾಗಿದ್ದ ಮನಸ್ಥಿತಿಯಲ್ಲಿದ್ದ ಹುಲಿಗೆ ಏನಾಯಿತೆಂದು ಅರಿಯಲು ಅರೆನಿಮಿಷ ಬೇಕಾಯಿತು.ಆಗ ಶಾನುಭೋಗರು ಮೇಲಿನಂತೆ ಯೋಚಿಸುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆ ಧಾವಿಸಿದರು.

ಸ್ವಾರಸ್ಯ : ಜೀವ ಉಳಿಸಿಕೊಳ್ಳಲು ಒಂದು ಅವಕಾಶ ಸಿಕ್ಕರೆ ಸಾಕು ಬದುಕಿದೆನಾದರೆ ಮುಂದೇನಾದರೂ ಸಾಧಿಸಬಹುದು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. ''ನಾನು ಮುಖ ಮೇಲಾಗಿ ಬಿದ್ದಿದ್ದೇನೆ?''

ಉ: ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ 'ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಹುಲಿಯಿಂದ ತಪ್ಪಿಸಿಕೊಳ್ಳಬೇಕೆಂದು ಶಾನುಭೋಗರು ತಮ್ಮ ಬಳಿಯಿದ್ದ ಖಿರ್ದಿ ಪುಸ್ತಕವನ್ನು ಅದರ ಮುಖಕ್ಕೆ ಬೀಸಿದರು. ಅದು ಗಾಬರಿಯಾಗಿದ್ದ ಸಂದರ್ಭ ಬಳಸಿ ಓಡಿ ಹೋಗುತ್ತಿದ್ದಾಗ ಕಲ್ಲು ಎಡವಿ ಬಿದ್ದು ಮೂರ್ಛೆಹೋದರು.ಅಷ್ಟರಲ್ಲಿ ಅಲ್ಲಿಗೆ ರೈತರು ಬಂದಿದ್ದರಿಂದ ಹುಲಿ ಅಲ್ಲಿಂದ ಪಲಾಯನ ಮಾಡಿತು.ಆದರೂ ಶಾನುಭೋಗರ ಮನಸ್ಸಿನಲ್ಲಿ ಸಂಶಯವೊಂದು ಕಾಡುತ್ತಿತ್ತು.ನಿಸ್ಸಹಾಯಕರಾಗಿ ಪ್ರಜ್ಞೆಯಿಲ್ಲದೆ ಬಿದ್ದಾಗಲೂ ಹುಲಿ ಇವರನ್ನು ಏಕೆ ಎಳದೊಯ್ಯಲಿಲ್ಲ ಎಂದು ಯೋಚಿಸಿದ ಅವರು ಗಾಡಿಯವರನ್ನು ಮೇಲಿನಂತೆ ಕೇಳಿದರು.ಆದರೆ ಶಾನುಭೋಗರು ಬೆನ್ನು ಮೇಲಾಗಿ ಬಿದ್ದುದರಿಂದ ಹುಲಿಯು ತನ್ನ ಕುಲಧರ್ಮ ಪಾಲಿಸಿದ್ದರಿಂದ ಶಾನುಭೋಗರು ಹುಲಿಯಿಂದ ಪಾರಾಗಿದ್ದರು.

ಸ್ವಾರಸ್ಯ : ಹುಲಿಯು ಅವಕಾಶ ಸಿಕ್ಕಿದ್ದರೂ ತನ್ನನ್ನು ಏಕೆ ತಿನ್ನಲಿಲ್ಲ ಎಂದು ಯೋಚಿಸಿದ ಶಾನುಭೋಗರು ಹುಲಿಯು ತನ್ನ ಧರ್ಮವನ್ನು ಪಾಲಿಸಿರಬಹುದೆಂಬ ಅನುಮಾನದಿಂದ ಮೇಲಿನಂತೆ ಕೇಳಿದ್ದಾರೆ.

೫. ''ಹುಲಿ ಈಗ ಎಷ್ಟು ಹಸಿದಿರಬೇಕು''

ಉ: ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತ ಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :ಬೇಟೆಯಾಡುವ ಉದ್ದೇಶದಿಂದ ತಮ್ಮನ್ನು ಹಿಂಬಾಲಿಸಿದ ಹುಲಿಯಿಂದ ತಪ್ಪಿಸಿಕೊಂಡ ಶಾನುಭೋಗರು ''ಕುಡಿದ ನೀರು ಅಲುಗದ ಹಾಗೆ '' ಅಲ್ಲದಿದ್ದರೂ ಜೀವ ಸಹಿತ ಮನೆ ಸೇರಿಕೊಂಡರು.ರಸದೂಟವನ್ನು ಮಾಡಿದರು.ಆ ಸಂದರ್ಭದಲ್ಲಿ ಅವರು ಹುಲಿಯನ್ನು ಮೇಲಿನಂತೆ ನೆನಪಿಸಿಕೊಂಡರು.

ಸ್ವಾರಸ್ಯ : ಶಾನುಭೋಗರನ್ನು ತಿನ್ನಲು ಹುಲಿ ನಡೆಸಿದ ಹರಸಾಹಸ ವ್ಯರ್ಥವಾಗಿ ಕೊನೆಗೂ ಶಾನುಭೋಗರು ಮನೆ ಸೇರಿಕೊಂಡರು .ಅವರು ಊಟ ಮಾಡುವಾಗ ಸಹಜವಾಗಿ ತನ್ನಂತೆಯೇ ಹಸಿದ ಇನ್ನೊಂದು ಜೀವ ನೆನಪಾದುದು ಅವರೊಳಗೆ ಇದ್ದ ಮಾನವೀಯತೆಯ ಜೊತೆ ತಾನು ಹುಲಿಯಿಂದ ಬಚಾವಾಗಿ ಬಂದುದರ ಬಗ್ಗೆ ಅವರಿಗಿದ್ದ ಅಭಿಮಾನವನ್ನು ಸೂಚಿಸುವುದು.

## ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ.

೧. ಮಂತ್ರಿತ್ವ ಹೋಗಿ ಕೇವಲ --------ಮಾತ್ರ ಉಳಿದಿತ್ತು.(ಶಾನುಭೋಗಿಕೆ)

೨. ಖಿರ್ದಿ ಪುಸ್ತಕ ------ ಬ್ರಹ್ಮಾಸ್ತ್ರ.(ಶಾನುಭೋಗರ)

೩. ನೆಲದಿಂದ ಮೇಲೆದ್ದುಕೊಂಡಿದ್ದ -------ಎಡವಿ ಶಾನುಭೋಗರು ಬಿದ್ದರು.(ಕಲ್ಲನ್ನು)

೪. ರೈತರು ತಿಂಗಳ ಬೆಳಕಿನಲ್ಲಿ -------ಹೊಡೆಯುತ್ತಿದ್ದರು.(ಗಾಡಿ)

೫. ಶಾನುಭೋಗರು ಉಳಿದಿದ್ದು --------ಪುಸ್ತಕದಿಂದಲ್ಲ.(ಖಿರ್ದಿ)

## ಭಾಷಾ ಚಟುವಟಿಕೆ

ತದ್ಧಿತಾಂತಗಳೆಂದರೇನು ?

ತದ್ಧಿತಾಂತ ಭಾವನಾಮಗಳೆಂದರೇನು ? ಉದಾ ಕೊಡಿ .

ನಾಮಪದಗಳ ಮೇಲೆ ಬೇರೆ ಬೇರೆ ಅರ್ಥಗಳಲ್ಲಿ ಗಾರ,ಕಾರ,ಇಗ,ಅಡಿಗ,ವಂತ,ಇಕ ಮುಂತಾದ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತಗಳಾಗುತ್ತವೆ.

ಷಷ್ಠೀ ವಿಭಕ್ತ್ಯಂತ ನಾಮಪದಗಳ ಮುಂದೆ ಭಾವಾರ್ಥದಲ್ಲಿ –ತನ,ಇಕೆ,ಪು,ಮೆ ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ತದ್ಧಿತಾಂತ ಭಾವನಾಮಗಳೆನಿಸುವವು.

ಉದಾ : ಜಾಣನ ಭಾವ –ಜಾಣತನ

ಚೆಲುವಿನ ಭಾವ –ಚೆಲುವಿಕೆ

ಕರಿದರ ಭಾವ –ಕಪ್ಪು

| | |
|---|---|
| ಘಟಕ ಪರೀಕ್ಷೆ –೧ ೨೦ ಅಂಕಗಳು<br>ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೩*೧=೩<br>೧.ಭಗವದ್ಗೀತೆಯನ್ನು ರಚಿಸಿದವರು ಯಾರು ?<br>೨.ಹುಲಿಗೆ ಪರಮಾನಂದವಾಗಲು ಕಾರಣವೇನು?೩. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?<br><br>ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.೨*೨=೪<br>೧. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?<br>೨. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>೧.ಶಾನುಭೋಗರನ್ನು ರಕ್ಷಿಸಿದುದು ಖಿರ್ದಿಪುಸ್ತಕವೇ? ಹುಲಿಯ ಧರ್ಮವೇ?ಸಮರ್ಥನೆಯೊಂದಿಗೆ ವಿವರಿಸಿ.<br><br>ಎ.ಎನ್ . ಮೂರ್ತಿರಾವ್ ಅವರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ. ೨*೩=೬<br>೧. ''ಖಂಡವಿದೆಕೋ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ''.<br>೨. ''ಸ್ವಧರ್ಮೇ ನಿಧನಂ ಶ್ರೇಯಃ'' | ಘಟಕ ಪರೀಕ್ಷೆ –೨ ೨೦ ಅಂಕಗಳು<br>ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೨*೧=೨<br>೧. ಹಸಿದು ಮಲಗಿದ್ದ ಹುಲಿಯ ಏನೆಂದು ಯೋಚಿಸಿತು ?<br>೨. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು<br>.<br>ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.೨<br>೧.ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>೧.ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.<br>ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. ೩*೩=೯<br>೧. ''ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು''<br>೨''ನಾನು ಮುಖ ಮೇಲಾಗಿ ಬಿದ್ದಿದ್ದೇನೆ?''<br>೩''ಹುಲಿ ಈಗ ಎಷ್ಟು ಹಸಿದಿರಬೇಕು''<br><br>ಗಾದೆ ಮಾತನ್ನು ವಿಸ್ತರಿಸಿ . ೩ ಅಂಕಗಳು<br>ಹೆತ್ತತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು |

# ಗದ್ಯಪಾಠ ೭. –ವೃಕ್ಷಸಾಕ್ಷಿ –ದುರ್ಗಸಿಂಹ

## ಕೃತಿಕಾರರ ಪರಿಚಯ

ದುರ್ಗಸಿಂಹನ ಕಾಲ ಸುಮಾರು ಕ್ರಿ.ಶ. ೧೦೩೧ .ಇವನು ಗದಗ ಜಿಲ್ಲೆಯ ರೋಣ ತಾಲೂಕಿನ ಕಿಸುಕಾಡುನಾಡಿನ ಸಯ್ಯಡಿಯವನು .ಇವನು ಕರ್ನಾಟಕ ಪಂಚತಂತ್ರಂ ಎಂಬ ಕೃತಿಯನ್ನು ರಚಿಸಿದ್ದಾನೆ .

ಪ್ರಸ್ತುತ ಗದ್ಯಭಾಗವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಗುಂಡ್ಮಿ ಚಂದ್ರಶೇಖರ ಐತಾಳರು ಸಂಪಾದಿಸಿರುವ ಕರ್ನಾಟಕ ಪಂಚತಂತ್ರ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

## ಹೊಸಗನ್ನಡ ರೂಪ

ಮಧುರಾನಗರದಲ್ಲಿದ್ದ ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಎಂಬ ಇಬ್ಬರು ವ್ಯಾಪಾರಿಗಳ ಮಕ್ಕಳು ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಬಹಳಷ್ಟು ಸಂಪತ್ತು (ಹೊನ್ನು) ಪಡೆದು ಹಿಂದಿರುಗಿ ಪುನಃ ತಮ್ಮ ಹುಟ್ಟೂರಾದ ಮಧುರಾಪುರದ ಹೊರವಲಯದ ಹೂದೋಟದಲ್ಲಿ ಬೀಡು ಬಿಟ್ಟರು.ಅರ್ಧರಾತ್ರಿಯಾದಾಗ ಧರ್ಮಬುದ್ಧಿಯು ದುರ್ಬುದ್ಧಿಯವನಾದ ದುಷ್ಟಬುದ್ಧಿಯನ್ನು ಕರೆದು ಗಳಿಸಿರುವ ಹೊನ್ನನ್ನು ಪಾಲು ಮಾಡಿಕೊಳ್ಳೋಣ ಎನ್ನಲು ದುಷ್ಟಬುದ್ಧಿಯು ಪಾಪಬುದ್ಧಿಯನ್ನು ಹೊಂದಿದವನಾಗಿ ಹೀಗೆಂದನು. ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರು ಅಲ್ಲ.ಮತ್ತೆ ವ್ಯಾಪಾರಕ್ಕೆ ಹೋಗಬೇಕು.ಆದ ಕಾರಣದಿಂದ ನಿನಗೂ ನನಗೂ ವೆಚ್ಚಕ್ಕೆ ಬೇಕಾಗುವಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನೆಲ್ಲವನ್ನು ಇಲ್ಲಿಯೇ ಇಡೋಣ ಎಂದನು.ಧರ್ಮಬುದ್ಧಿಯು ಆ ಪಾಪಕರ್ಮನನ್ನು ತನ್ನ ಗೆಳೆಯನೇ (ತನ್ನ ಹಾಗೆ) ಎಂದು ಬಗೆದು ಅವನ ಮಾತಿಗೆ ಒಪ್ಪಿಕೊಂಡು ಒಂದು ದೊಡ್ಡ ಆಲದ ಮರದ ಬಳಿಯಲ್ಲಿ ಹೊನ್ನನ್ನು ಹೂಳಿ ಮರುದಿನ ಇಬ್ಬರೂ ನಗರಕ್ಕೆ ಹೋಗಿ ಇಷ್ಟ ವಿಷಯ ಸುಖಗಳನ್ನು ಅನುಭವಿಸುತಿದ್ದರು.ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ವಂಚಿಸಿ( ಅವನಿಗೆ ಗೊತ್ತಾಗದಂತೆ ) ಹೊನ್ನನ್ನು ಹೂತಿಟ್ಟ ಆಲದಮರದ ಬಳಿ ಹೋಗಿ ಅಲ್ಲಿದ್ದ ಹೊನ್ನೆಲ್ಲವನ್ನೂ ತೆಗೆದುಕೊಂಡು ಹೊಂಡವನ್ನು ಮೊದಲಿನಂತೆ ಮುಚ್ಚಿ ಕೆಲವು ದಿನಗಳು ಕಳೆದ ಮೇಲೆ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ತನ್ನ ಬಳಿ ವೆಚ್ಚಕ್ಕೆ ಹೊನ್ನಿಲ್ಲ ಆದ್ದರಿಂದ ಮತ್ತಷ್ಟು ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಬರೋಣವೆಂದು ಅವನನ್ನೂ ಕರೆದುಕೊಂಡು ಹೋಗಿ ಹೊನ್ನನ್ನು ಹೂತಿಟ್ಟ ಸ್ಥಳವನ್ನು ಅಗೆದಾಗ ಅಲ್ಲಿ ಹೊನ್ನನ್ನು ಕಾಣದೆ ಇನ್ನು ಹೇಳದಿದ್ದರೆ ಸುಳ್ಳು ತನ್ನ ಮೇಲೆ ಬರುವುದೆಂದು ಹೊನ್ನನೆಲ್ಲವನ್ನೂ ನೀನೆ ತೆಗೆದುಕೊಂಡೆಯೆಂದು

ಅತಿ ಕುಟಿಲ ಮನಸ್ಸಿನವನಾದ ದುಷ್ಟಬುದ್ಧಿಯು ಧನದ ಮೇಲಿನ ವ್ಯಾಮೋಹ (ಲೋಭ)ತನದಿಂದ ಮತಿಗೆಟ್ಟವನಾಗಿ ಕಳ್ಳನಿಗೆ ಸುಳ್ಳೇ ತನ್ನ ಶಕ್ತಿ (ತಸ್ಕರಸ್ಯಾನೃತಂ ಬಲಂ) ಎಂಬ ವಾಕ್ಯವನ್ನು ನೆನೆಯುತ್ತ ಸುಳ್ಳನ್ನು ಹೇಳಿದನು(ಕಳ್ಳನಿಗೆ ಸುಳ್ಳೇ ಪ್ರಧಾನ)

ಹಾಗೆ ದುಷ್ಟಬುದ್ಧಿಯು ಮೊದಲೇ ಹಾ!ಹಾ! ಎಂದು ಕೆಟ್ಟೆನೆಂದು ಬಾಯನ್ನೂ ಹೊಟ್ಟೆಯನ್ನೂ ಹೊಡೆದುಕೊಳ್ಳುತ್ತ ಕೂಗುತ್ತ (ಬೊಬ್ಬೆ ಹಾಕುತ್ತ) ಕಳವಳಗೊಂಡವನಂತೆ ರಕ್ಷಣೆಯಿಲ್ಲವೆಂದು ನುಡಿಯಲು ,ಸ್ನೇಹ ನಾಶವಾಯಿತಲ್ಲಾ ಎಂದು ಜರಿಯುತ್ತ ನೀನೆ ಕದ್ದವನೆಂದು ಆರೋಪಿಸುತ್ತ ,

ವಿಚಾರ ಮಾಡೋಣವೆಂದು ಧರ್ಮಾಧಿಕರಣರಲ್ಲಿಗೆ ಬಂದುಇಬ್ಬರೂ ಆ ವಿಚಾರವನ್ನೆಲ್ಲ ಸವಿಸ್ತಾರವಾಗಿ ಹೇಳಲು ಕೊನೆಯಲ್ಲಿ ದುಷ್ಟಬುದ್ಧಿಯು ಹೀಗೆ ಹೇಳಿದನು.ಹೊನ್ನೆಲ್ಲವನ್ನೂ ಈತನೆ ತೆಗೆದುಕೊಂಡನೆಂಬುದಕ್ಕೆ ಸಾಕ್ಷಿಯಿದೆ ಎನ್ನಲು ಸಭಾಸದರು ಸಾಕ್ಷಿಯನ್ನು ಹೇಳು ಎಂದಾಗ ದುಷ್ಟಬುದ್ಧಿಯು ಹೊನ್ನನ್ನು ಇಡುವಾಗ ಇವನು ಮತ್ತು ತಾನಲ್ಲದೆ ಅಲ್ಲಿ ಇನ್ನು ಯಾರೂ ಮನುಷ್ಯರಿರಲಿಲ್ಲ.ಆದರೆ ಆ ಸಂದರ್ಭದಲ್ಲಿ ಅಲ್ಲಿದ್ದ ವಟವೃಕ್ಷವೇ ಸಾಕ್ಷಿ ಎಂದನು.ಅದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯಗೊಂಡರು.ಇವನ ಮಾತು ಹಿಂದೆಂದೂ ಕೇಳದ ವಿಚಾರ.ಈ ಆಶ್ಚರ್ಯವನ್ನು ನೋಡೋಣವೆಂದು ಧರ್ಮಬುದ್ಧಿಯನ್ನು ಕರೆದು ನೀನು ಈ ಸಾಕ್ಷಿಯನ್ನು ಒಪ್ಪಿಕೊಳ್ಳುವುದು ಎಂದಾಗ ಅವನು ವೃಕ್ಷಸಾಕ್ಷಿಯೆಂದು ಈ ಮೊದಲು ಹೇಳಿದವರಾಗಲೀ ಕೇಳಿದವರಾಗಲೀ ಇಲ್ಲ ಎಂದಾಗ

ವಚನ || ಮನುಷ್ಯರ ಸುಕೃತ್ಯ ಮತ್ತು ದುಷ್ಕೃತ್ಯಗಳನ್ನು ದೈವಗಳು ತಿಳಿಯುವವು.ಆದುದರಿಂದ ಈ ಸಾಕ್ಷಿಯು ಉಚಿತವಾದುದು.ಮರವನ್ನು ಮಾತಾಡಿಸುವುದು ಪರಮಗಹನವಾದ ವಿಚಾರ.ಆದ್ದರಿಂದ ಈ ಸಾಕ್ಷಿಯನ್ನು ಅಂಗೀಕರಿಸುವುದು.

ಎಂದು ಧರ್ಮಾಧಿಕರಣರು ಹೇಳಲು ಧರ್ಮಬುದ್ಧಿಯು ತುಂಬಾ ಆಲೋಚಿಸಿ ಒಪ್ಪಿಕೊಂಡನು.ಆಗ ಧರ್ಮಾಧಿಕರಣರು ಇಂದು ಹೊತ್ತು ಹೋಯಿತು (ಸಂಜೆಯಾಯಿತು)ನಾಳೆ ಹೋಗಿ ಕೇಳೋಣ ವೆಂದು ಹೇಳಲು ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಅಷ್ಟರಲ್ಲಿ ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಯಾರೂ ಇಲ್ಲದಂತಹ ಸ್ಥಳಕ್ಕೆ ಕರೆತಂದು ನಡೆದ ವೃತ್ತಾಂತವೆಲ್ಲವನ್ನೂ ವಿವರಿಸಿ ಹೇಳಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು .ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದನು ಆತನು ಹೀಗೆಂದನು.

ಪರಧನಹರಣವೂ,ವಿಶ್ವಾಸಘಾತಕವೂ, ಸ್ವಾಮಿದ್ರೋಹವೂ ಇವೆಲ್ಲವೂ ಹೇಗೆಂದರೂ ಕೆಡುಕನ್ನು ಉಂಟು ಮಾಡುವುವು.ಇವೆಲ್ಲವನ್ನೂ ನೀನು ತಿಳಿದೂ ಕೂಡ ನನ್ನನ್ನು ಸಾಕ್ಷಿ ಮಾಡಿ, ನುಡಿಸಿ ಕೆಡಿಸಲು ಆಲೋಚಿಸಿದೆ.ನಿನ್ನ ಕ್ಷುಲ್ಲಕ (ಕೀಳು) ಆಲೋಚನೆಯು ನಮ್ಮ ಕುಲವನ್ನೇ ನಾಶ ಮಾಡುವ ರೀತಿಯದು.ಎನ್ನಲು ದುಷ್ಟಬುದ್ಧಿಯು ಅದನ್ನು ಕೇಳಿ ನಮ್ಮ ಕಾರ್ಯವನ್ನು ಕೆಡಿಸದೆ ನಾನು ಹೇಳಿದಂತೆ ಮಾಡು ಎಂದು ತನ್ನ ತಂದೆಯನ್ನು ಒಪ್ಪಿಸುವಷ್ಟರಲ್ಲಿಯೇ ಸಂಜೆಯಾಯಿತು.

ಆಕಾಶವನ್ನು ಆವರಿಸಿ ದಿಕ್ಕುಗಳನ್ನು ಮುಚ್ಚಿ ದೃಷ್ಟಿಯನ್ನು ತಡೆದು ಹೊಗೆ ತುಂಬಿ, ಮಳೆಗಾಲದ ಮೋಡ ,ಕಾಡಿಗೆಯ ರಾಶಿ ,ಕೋಗಿಲೆ ,ವಿಷ್ಣುವಿನ ಕಾಯ ಕಾಂತಿ,ಶಿವನ ಕುತ್ತಿಗೆಯ ಬಣ್ಣದ ಕತ್ತಲೆ ಕ್ರಮೇಣ ಹಬ್ಬಿತು.

ಆ ರೀತಿಯಾಗಿ ಕವಿದ ಕತ್ತಲೆಯಲ್ಲಿ ಕೊಲ್ಲದೆ ಬಿಡೆನೆಂದು ಕರೆದುಕೊಂಡು ಹೋಗುವಂತೆ ಕರೆದೊಯ್ದು ಮಾರಿಯ ಮನೆಗೆ ಹರಕೆಯ ಕುರಿಯನ್ನು ಕರೆದೊಯ್ಯುವಂತೆ ಆಲದ ಮರದ ಪೊಟರೆಯಲ್ಲಿ ತನ್ನ ತಂದೆಯನ್ನು ಹೊಗಿಸಿ ವ್ಯಾಜ್ಯವನ್ನು ಗೆದ್ದೆನೆಂದು ಖುಷಿಪಟ್ಟು ಮನೆಗೆ ಬಂದು ನಿದ್ರೆ ಮಾಡಿದನು.

ಬೆಳಗಾಗಲು ಧರ್ಮಬುದ್ಧಿಯು ದೇವ, ಗುರು,ದ್ವಿಜ ಪೂಜೆಗಳನ್ನು ಮಾಡುತ್ತ ಕಳೆಯುತ್ತಿರಲು, ದುಷ್ಟಬುದ್ಧಿಯು ಮುಖವನ್ನು ತೊಳೆಯದೆ ಬಂದು ಧರ್ಮಾ ಧಿಕರಣರಿಗೆ ಹೀಗೆ ಹೇಳಿದನು.

ಪ್ರತ್ಯರ್ಥಿ ಬಂದಿಲ್ಲ, ಬಹಳ ಹೊತ್ತಾಯಿತು.ನಾನೇನು ಮಾಡಬೇಕು ಎಂದು ಕೇಳುತ್ತಿರಲು ಅಷ್ಟರಲ್ಲಿ ಧರ್ಮಬುದ್ಧಿಯು ಬರುತ್ತಿರುವುದನ್ನು ಕಂಡು ಆ ಕೂಡಲೇ ನಡೆಯಿರಿ ನಿಮ್ಮಿಬ್ಬರ ಜಗಳವನ್ನು ತೀರಮಾನಿಸುವೆವು ಎಂದು ಆಲದ ಮರದ ಸಮೀಪಕ್ಕೆ ಬಂದು ಅಷ್ಟವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಅನಂತರ ಅವರಿಬ್ಬರನ್ನೂವಿಚಾರಿಸಿ ಆ ಮರವನ್ನು ಕುರಿತು ಹೀಗೆಂದರು.ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಆದ ವೃಕ್ಷವಾಗಿರುವೆ.

ಅದರಿಂದ ನಿನ್ನ ಸಾಕ್ಷಿ ಮಾಡಿ ಕೇಳುವೆವು.ನೀನು ನಿಜವನ್ನೇ ನುಡಿಯೆಂದು ಧರ್ಮಾಧಿಕರಣರು ಧರ್ಮದ ವಿಚಾರಗಳನ್ನು ಕುರಿತು ಹೇಳಿದಾಗ ಮರದ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿ ಮತಿಗೆಟ್ಟು ಧರ್ಮಗತಿಯನ್ನು ಬಿಟ್ಟು 'ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯ ಕು ಕುಂದುವುದು. ಎಂದು ಹೇಳುವಂತೆ ಧರ್ಮಬುದ್ಧಿಯೇ ಧನವನ್ನು ತೆಗೆದುಕೊಂಡಿರುವನು ಎಂದು ಹೇಳಿದನು.ನೆರೆದವರೂ ಧರ್ಮಾಧಿಕರಣರೂ ಇದನ್ನು ಕೇಳಿ ಆಶ್ಚರ್ಯಪಟ್ಟರು.ಧರ್ಮಬುದ್ಧಿಯೂ ಕೂಡ ಆಶ್ಚರ್ಯಚಕಿತನಾಗಿ ಇದು ದೈವವಲ್ಲ. ಆಗಿದ್ದರೆ ಸತ್ಯವನ್ನೇಕೆ ನುಡಿಯದು ?ಇದೇನಾದರೊಂದು ಕೃತ್ರಿಮವಾಗಿರಬೇಕು. ಎಂದು ಆ ಮರವನ್ನು ಒಂದು ಸುತ್ತು ಹಾಕಿ ನೋಡಿ ಅಲ್ಲೊಂದು ದೊಡ್ಡ ಪೊಟರೆಯೂ ಹಾಗೂ ಅಲ್ಲಿ ಮನುಷ್ಯ ಸಂಚಾರವಾದ ಕುರುಹು ಇದ್ದುದ್ದನ್ನು ನೋಡಿ ಧರ್ಮಾಧಿಕರಣರಿಗೆ ಹೀಗೆ ಹೇಳಿದನು.ಸುಳ್ಳು ಹೇಳದ (ಹುಸಿಯದ )ವ್ಯಾಪಾರಿಯೇ ಇಲ್ಲ.ನಾನು ವ್ಯಾಪಾರಿಯಾದುದರಿಂದ ನನ್ನ ವೃತ್ತಿಧರ್ಮಕ್ಕನುಗುಣವಾಗಿ ಧರ್ಮಬುದ್ಧಿ ಅಧರ್ಮಬುದ್ಧಿಯಾಗಿ ಧನವನ್ನು ವಂಚಿಸಿ ನನ್ನ ಮನೆಗೆ ತೆಗೆದುಕೊಂಡು ಹೋಗಬೇಕೆನ್ನುವಷ್ಟರಲ್ಲಿ ಸೂರ್ಯನು ಮೂಡಿ ಬೆಳಗಾಯಿತು.ಆದ್ದರಿಂದ ತೆಗೆದುಕೊಂಡು ಹೋಗಲು ಸಾಧ್ಯವಾಗದೆ ಮರದ ಪೊಟರೆಯಲ್ಲಿಟ್ಟು ಬಂದೆನು.ಮರುದಿವಸವಹೋಗಿ ನೋಡುವಷ್ಟರಲ್ಲಿ ಆ ಹೊನ್ನನ್ನು ಒಂದು ಸರ್ಪವು ಸುತ್ತಿಕೊಂಡು ಮಲಗಿತ್ತು ಆದ್ದರಿಂದ ಹೊನ್ನನ್ನು ತೆಗೆದುಕೊಂಡು ಹೋಗಲು ಅಂಜಿದೆನು.ನೀವೆಲ್ಲ ಇಲ್ಲಿಯೇ ಇದ್ದು ನೋಡುತ್ತಿರಿ.ಪೊಟರೆಯೊಳಗೆ ಹೊಗೆಯನ್ನು ಹಾಕಿ ಹಾವನ್ನು ಹೊರಹೋಗುವಂತೆ ಮಾಡಿ ಕದ್ದ ಒಡವೆಯನ್ನು ಕೊಡುವೆನು. ಎಂದು ಧರ್ಮಬುದ್ಧಿಯು ಹುಲ್ಲು ಕಟ್ಟಿಗೆಯನ್ನು ತರಿಸಿ ಅದನ್ನು ಪೊಟರೆಯಲ್ಲಿ ತುಂಬಿ ದುಷ್ಟಬುದ್ಧಿಯ ಮನೆಗೆ ಬೆಂಕಿ ಹಾಕುವಂತೆ ಬೆಂಕಿ ಹಾಕಲು ಹೊಗೆ ಸುತ್ತಿ ಬೆಂಕಿ ಉರಿಯತೊಡಗಲು ಒಳಗಿದ್ದ ಪ್ರೇಮಮತಿ (ದುಷ್ಟಬುದ್ಧಿಯ ತಂದೆ)ಧೈರ್ಯಗೆಟ್ಟು ,ಕೂಗುತ್ತ (ಬೊಬ್ಬೆ ಹಾಕುತ್ತ)ಪೊಟರೆಯೊಳಗಿನಿಂದ ಹೊರಳಿ ಉರುಳಿ ಕಂಠಗತಪ್ರಾಣನಾದನು.ಅದನ್ನು ನೋಡಿದ ಧರ್ಮಾಧಿಕರಣರು

ಇವನು ದುಷ್ಟಬುದ್ಧಿಯ ತಂದೆಯೆಂಬುದರಲ್ಲಿ ಸಂಶಯವಿಲ್ಲ.ಎಂದು ಅರಿತು ಈ ಪಾಪಕರ್ಮನಾಗಿರುವ ದುಷ್ಟಪುತ್ರನಿಂದ ನಿನಗೆ ಇಂತ ದುರ್ಮರಣ ಸಂಭವಿಸಿತು ಎಂದರು.

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.'ವೃಕ್ಷಸಾಕ್ಷಿ ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?

ಉ: ವೃಕ್ಷಸಾಕ್ಷಿ ಕತೆಯನ್ನು ದುರ್ಗಸಿಂಹ ಕವಿ ಯು ರಚಿಸಿದ ಕರ್ನಾಟಕ ಪಂಚತಂತ್ರಂ ಎಂಬ ಕೃತಿಯಿಂದ ಆರಿಸಲಾಗಿದೆ

೨.ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

ಉ:ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಸಂಪತ್ತಿನ ಕಳ್ಳತನದ ಆರೋಪವನ್ನು ಹೊರಿಸಿದನು.

೩.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

ಉ: ಹೊನ್ನನ್ನು ಹೂತಿಟ್ಟ ಸ್ಥಳದಲ್ಲಿ ಮತ್ತು ಆ ಸಂದರ್ಭದಲ್ಲಿ ಧರ್ಮಬುದ್ಧಿ ಮತ್ತು ತನ್ನನ್ನು ಹೊರತುಪಡಿಸಿ ಮನುಷ್ಯರಾರೂ ಇರಲಿಲ್ಲ.ಆದ್ದರಿಂದ ಕದ್ದವರಾರು ಎಂದು ಅಲ್ಲಿದ್ದ ಆಲದ ಮರವೊಂದೇ ಹೇಳಲು ಸಾಧ್ಯ ಎಂದು ದುಷ್ಟಬುದ್ಧಿಯು ಹೇಳಿದಾಗ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

೪.ಧರ್ಮ ಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

ಉ: ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವ,ಗುರು , ಬ್ರಾಹ್ಮಣರ ಪೂಜೆಗಳನ್ನು ಮಾಡುತ್ತ ಕಳೆದನು.

೫.ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

ಉ: ಹೊನ್ನನ್ನು ಕದ್ದವರಾರು ಎಂದು ಸಾಕ್ಷ್ಯಕೇಳಲು ಧರ್ಮಾಧಿಕರಣರು ವಟ ವೃಕ್ಷದ ಸಮೀಪಕ್ಕೆ ಬಂದರು.

## ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಧರ್ಮ ಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನಿತ್ತನು ?

ಉ: ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಗಳಿಬ್ಬರೂ ವ್ಯಾಪಾರಕ್ಕೆ ಹೋಗಿ ಸಾಕಷ್ಟು ಹಣ ಸಂಪತ್ತು ಸಂಪಾದಿಸಿಕೊಂಡು ತಮ್ಮ ಜನ್ಮಭೂಮಿಗೆ ಮರಳಿ ಹೊರಉದ್ಯಾನವನದಲ್ಲಿದ್ದ ಸಂದರ್ಭದಲ್ಲಿ ಅದನ್ನು ಇಬ್ಬರೂ ಸಮ ಪಾಲು ಮಾಡಿಕೊಳ್ಳೋಣ ಎಂದು ಧರ್ಮಬುದ್ಧಿಯು ಹೇಳಿದಾಗ ಪಾಪಬುದ್ಧಿಯಿಂದ ಕೂಡಿದವನಾದ ದುಷ್ಟಬುದ್ಧಿಯು ನಾವು ಇಷ್ಟು ಹೊನ್ನನ್ನು ಮನೆಯಲ್ಲಿಟ್ಟು ಸ್ವೇಚ್ಛೆಯಿಂದ ಬಾಳಲು ಸಾಧ್ಯವಿಲ್ಲ ಮತ್ತೆ ವ್ಯಾಪಾರಕ್ಕೆ ಬೇರೆ ಊರಿಗೆ ಹೋಗಬೇಕಾದ್ದರಿಂದ ನಮ್ಮಿಬ್ಬರಿಗೂ ವೆಚ್ಚಮಾಡಲು ಎಷ್ಟು ಬೇಕೋ ಅಷ್ಟು ಹೊನ್ನನ್ನು ತೆಗೆದುಕೊಂಡು ಉಳಿದದ್ದನ್ನು ಇಲ್ಲಿಯೇ ಇಡೋಣ ಎಂದು ಸಲಹೆ ನೀಡಿದನು.

೨. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ? ಹೊನ್ನು ಹೇಗೆ ನಾಪತ್ತೆ ಯಾಯಿತು ಎಂಬುದನ್ನು ಅಲ್ಲಿದ್ದ ಉ: ವಟವೃಕ್ಷವೊಂದೇ ಹೇಳಲು ಸಾಧ್ಯ ಎಂದು ಧರ್ಮಾಧಿಕರಣರು ವೃಕ್ಷ ಸಾಕ್ಷಿಯನ್ನು ಕೇಳುವಂತೆ ಅವರನ್ನು ಒಪ್ಪಿಸುವಲ್ಲಿ ಯಶಸ್ವಿಯಾದ ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಯಾರೂ ಇಲ್ಲದಂತಹ ಸ್ಥಳಕ್ಕೆ ಕರೆತಂದು ನಡೆದ ವೃತ್ತಾಂತವೆಲ್ಲವನ್ನೂ ವಿವರಿಸಿ ಹೇಳಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು .ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದನು.

೩. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

ಉ: ಕಳೆದು ಹೋಗಿರುವ ಸಂಪತ್ತು ಕದ್ದವರಾರು ಎಂದು ತಿಳಿಯಲು ಧರ್ಮಾಧಿಕರಣರು ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯರೊಡಗೂಡಿ ಹೊನ್ನನ್ನು ಹೂತಿಟ್ಟ ಆಲದ ಮರದ ಸಮೀಪಕ್ಕೆ ಬಂದು ಅಷ್ಟವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಅನಂತರ ಅವರಿಬ್ಬರನ್ನೂವಿಚಾರಿಸಿ ಆ ಮರವನ್ನು ಕುರಿತು ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಆದ ವೃಕ್ಷವಾಗಿರುವೆ. ಅದರಿಂದ ನಿನ್ನ ಸಾಕ್ಷಿ ಮಾಡಿ ಕೇಳುವೆವು.ನೀನು ನಿಜವನ್ನೇ ನುಡಿಯೆಂದು ಹೇಳಿದರು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ?(ವಿದ್ಯಾರ್ಥಿಗಳ ವಿವೇಚನೆಗೆ ಬಿಡಲಾಗಿದೆ.)

೨. ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾದ ಬಗೆಯನ್ನು ತಿಳಿಸಿ.

ಉ: ಅತಿ ಕುಟಿಲ ಮನಸ್ಸುಳ್ಳವನಾದ ದುಷ್ಟಬುದ್ಧಿಯು ದರ್ಮಬುದ್ಧಿ ಮತ್ತು ತಾನು ಇಬ್ಬರೂ ಸೇರಿಯೇ ಸಂಪಾದಿಸಿದ ಸಂಪತ್ತನ್ನು ಮನೆಗೆ ತೆಗೆದುಕೊಂಡು ಹೋಗಲು ಬಿಡದೇ ಅದನ್ನು ಮರದ ಕೆಳಗೆ ಹೂತಿಡಲು ಧರ್ಮಬುದ್ಧಿಯನ್ನು ಒಪ್ಪಿಸುವಲ್ಲಿ ಯಶಸ್ವಿಯಾಗುತ್ತಾನೆ .ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೂತಿಟ್ಟಿದ್ದ ಹೊನ್ನನ್ನು ತಾನೇ ತೆಗೆದು ಅದರ ಕಳುವಿನ ಆರೋಪಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ .ಕೊನೆಗೆ ಇಬ್ಬರೂ ಧರ್ಮಾದಿಕರಣರಲ್ಲಿಗೆ ಬಂದು ವ್ಯಾಜ್ಯ ತೀರ್ಮಾನಿಸುವಂತೆ ಕೇಳಿಕೊಳ್ಳುತ್ತಾರೆ .ನಡೆದುದೆಲ್ಲವನ್ನು ವಿವರಿಸಿ ಧರ್ಮಬುದ್ಧಿಯೆ ಹೊನ್ನನ್ನು ಕದ್ದಿದ್ದಾನೆಂದು ಹೇಳುವ ದುಷ್ಟಬುಧ್ಧಿಯು ಅದಕ್ಕೆ ಅಲ್ಲಿದ್ದ ಮರವೇ ಸಾಕ್ಷಿ ಎನ್ನುವನು.ಮರುದಿನ ಮರದ ಬಳಿ ಸಾಕ್ಷಿ ಕೇಳಲು ಹೋಗುವುದೆಂದು ತೀರ್ಮಾನವಾದಾಗ ಮನೆಗೆ ಬಂದ ದುಷ್ಟಬುದ್ಧಿಯು ತನ್ನ ತಂದೆಯ ಬಳಿ ಮರದ ಪೊಟರೆಯಲ್ಲಿ ಅವಿತು ಸಾಕ್ಷಿ ನುಡಿಯುವಂತೆ ಒತ್ತಾಯಿಸುತ್ತಾನೆ.ಒಲ್ಲದ ಮನಸ್ಸಿನಿಂದ ಅವನ ತಂದೆಯು ಮಗನ ಮೇಲಿನ ವ್ಯಾಮೋಹಕ್ಕೆ ಕಟ್ಟುಬಿದ್ದು ಮರುದಿನ ಎಲ್ಲರೂ ಬರುವುದಕ್ಕೆ ಮುಂಚೆಯೇ ಮರದ ಪೊಟರೆಯಲ್ಲಿ ಅವಿತು ಕುಳಿತು ಕೊಳ್ಳುವನು .ಧರ್ಮಾಧಿಕರಣರು ಧರ್ಮಬುದ್ಧಿ ಮತ್ತು ಧರ್ಮಬುದ್ಧಿಯರ ನ್ನು ನಿಲ್ಲಿಸಿ ವೃಕ್ಷದ ಸಾಕ್ಷಿ ಕೇಳಿದಾಗ ಪೊಟರೆಯಲ್ಲಿ ಅವಿತಿದ್ದ ದುಷ್ಟಬುದ್ಧಿಯ ತಂದೆಯು ಧರ್ಮಬುದ್ಧಿಯೇ ಹೊನ್ನನ್ನು ಕದ್ದಿರುವನೆಂದಾಗ ಮರವು ಸಾಕ್ಷಿ ನುಡಿಯುವುದೇ ಆದಲ್ಲಿ ಅದು ಸತ್ಯವನ್ನು ಹೇಳದೇ ಏಕೆ ಸುಳ್ಳು ನುಡಿಯುವುದು ಎಂದು ಆಲೋಚಿಸಿದ ಧರ್ಮಬುದ್ಧಿಯು ಮರವನ್ನು ಪ್ರದಕ್ಷಿಣೆ ಹಾಕಿದಾಗ ಅಲ್ಲಿ ಮನಷ್ಯಸಂಚಾರದ ಕುರುಹು ದೊರೆಯುತ್ತದೆ.ಆಗ ಧರ್ಮಬುದ್ಧಿಯು ಉಪಾಯವಾಗಿ ಎಲ್ಲ ವ್ಯಾಪಾರಿಗಳಿಗಿರುವಂತೆ ತನಗೂ ಕೂಡ ಹಣದ ಮೋಹವಿದ್ದುದಾಗಿ ಹೂತಿಟ್ಟ ಹಣವನ್ನು ತೆಗೆಯಲು ಬಂದು ಅದನ್ನು ಮನೆಗೆ ತೆಗೆದುಕೊಂಡು ಹೋಗುವಷ್ಟರಲ್ಲಿ ಬೆಳಗಾಗಿದ್ದರಿಂದ ಪೊಟರೆಯಲ್ಲಿ ಅಡಗಿಸಿಟ್ಟುದಾಗಿಯೂ ಮರುದಿನ ತೆಗೆದುಕೊಂಡು ಹೋಗಲು ಬಂದಾಗ ಅಲ್ಲಿ ದೊಡ್ಡದಾದ ಹಾವು ಇತ್ತೆಂದೂ ಅದನ್ನು ಹಾಗೆ ಅಲ್ಲಿಯೇ ಬಿಟ್ಟು ಹೋಗಿದ್ದುದಾಗಿ ತಿಳಿಸಿ ಕಟ್ಟಿಗೆಯನ್ನು ತರಿಸಿ ಪೊಟರೆಗೆ ಹೊಗೆ ಹಾಕಿಸಿ ಹಾವನ್ನು ಓಡಿಸಿ ಅಡಗಿಸಿಟ್ಟ ಹೊನ್ನನ್ನು ಮರಳಿಸುವಂತೆ ಮಾಡಿದಾಗ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟಬುದ್ಧಿಯು ಬೆಂಕಿಗೆ ಆಹುತಿಯಾಗುತ್ತಾನೆ.ಹೀಗೆ ಅತಿ ಆಸೆಗೆ ಒಳಗಾದ ದುಷ್ಟಬುದ್ದಿಯು ತಾನು ಬೀಸಿದ ಬಲೆಯಲ್ಲಿ ತಾನೇ ಸಿಕ್ಕು ಹೊನ್ನಿನ ಜೊತೆ ತನ್ನ ತಂದೆಯನ್ನೂ ಕಳೆದುಕೊಳ್ಳುತ್ತಾನೆ.

## ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.

೧.''ಪೊನ್ನನೆಲ್ಲಮಂ ನೀನೆ ಕೊಂಡೆ''

ಉ: ಈ ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರದಿಂದ ಆರಿಸಲಾದ 'ವೃಕ್ಷ ಸಾಕ್ಷಿ' ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳಿದನು.

ಸಂದರ್ಭ: ವ್ಯಾಪಾರದಿಂದ ಬಂದ ಸಂಪತ್ತನ್ನು ಹಂಚಿಕೊಳ್ಳೋಣ ಎಂಬ ಧರ್ಮಬುದ್ಧಿಯ ಸಲಹೆಗೆ ದುಷ್ಟಬುದ್ಧಿಯು ಇಷ್ಟೊಂದು ಹಣವನ್ನು ತೆಗೆದುಕೊಂಡು ಮನೆಯಲ್ಲಿಟ್ಟರೆ ನಮಗೆ ತೊಂದರೆಯಾಗುವುದು.ಆದ್ದರಿಂದ ಖರ್ಚಿಗೆ (ವೆಚ್ಚಕ್ಕೆ ) ಬೇಕಾಗುವಷ್ಟು ಮಾತ್ರ ನಮ್ಮ ಬಳಿ ಇಟ್ಟುಕೊಂಡು ಉಳಿದದ್ದನ್ನು ಇಲ್ಲಿಯೇ ಇಡೋಣ ಎಂದನು.ಅದಕ್ಕೆ ಧರ್ಮಬುದ್ಧಿಯೂ ಒಪ್ಪಿಕೊಳ್ಳಲು ಇಬ್ಬರೂ ಸೇರಿ ಅದನ್ನು ಅಲ್ಲಿಯೇ ಇದ್ದ ಆಲದ ಮರದಕೆಳಗೆ ಹೂತಿಟ್ಟರು.ಕೆಲವು ದಿನಗಳು ಕಳೆದ ಮೇಲೆ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಸಂಪತ್ತನ್ನು ಬಚ್ಚಿಟ್ಟ ಸ್ಥಳಕ್ಕೆ ಹೋಗಿ ಸಂಪತ್ತೆಲ್ಲವನ್ನೂ ತೆಗೆದುಕೊಂಡು ಗುಂಡಿಯನ್ನು ಮೊದಲಿನಂತೆಯೇ ಮುಚ್ಚಿಟ್ಟನು. ಮತ್ತೆ ಕೆಲವು ದಿನಗಳು ಕಳೆದ ಮೇಲೆ ತಾನೇ ಧರ್ಮಬುದ್ಧಿಯನ್ನು ಕರೆದು ತನಗೆ ವ್ಯಯಕ್ಕಾಗಿ ಹಣವು ಬೇಕಿತ್ತೆಂದು ಸಂಪತ್ತನ್ನು ಹೂತಿಟ್ಟ ಕಡೆ ಹೋಗಿ ತರೋಣವೆಂದು ಅವನನ್ನು ಕರೆದುಕೊಂಡು ಹೋಗಿ ಅಲ್ಲಿ ಅದು ಇರದಿದ್ದರಿಂದ ನೀನೆ ಎಲ್ಲವನ್ನು ತೆಗೆದುಕೊಂಡೆ ಎಂದು ಮತ್ತೆ ಧರ್ಮಬುದ್ಧಿಯ ಮೇಲೆ ಆರೋಪವನ್ನು ಮಾಡುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಹಣವನ್ನು ತಾನೇ ದೋಚಿ ಅದನ್ನು ಮರೆಮಾಚುವ ಉದ್ದೇಶದಿಂದದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಆರೋಪ ಹೊರಿಸಲು ಯತ್ನಿಸುತ್ತಿರುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨. ''ಈತನ ಮಾತು ಅಶ್ರುತಪೂರ್ವಮ್''

ಉ: ಈ ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರದಿಂದ ಆರಿಸಲಾದ 'ವೃಕ್ಷ ಸಾಕ್ಷಿ' ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.ಈ ಮಾತನ್ನು ಧರ್ಮಾಧಿಕರಣರು ಹೇಳಿದರು.

ಸಂದರ್ಭ : ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಗಳಿಬ್ಬರೂ ವ್ಯಾಪಾರದಿಂದ ತಾವು ಸಂಪಾದಿಸಿದ ಹಣವನ್ನು ದುಷ್ಟಬುದ್ಧಿಯ ಸಲಹೆಯಂತೆ ಖರ್ಚಿಗೆ ಬೇಕಾದಷ್ಟು ಹಣವನ್ನು ಮಾತ್ರ ತಮ್ಮ ಬಳಿ ಇರಿಸಿಕೊಂಡು ಉಳಿದದ್ದನ್ನು ಒಂದು ಆಲದ ವೃಕ್ಷದ ಬಳಿ ಹೂತಿಟ್ಟರು.ಪಾಪಬುದ್ಧಿಯಿಂದ ಕೂಡಿದ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಆ ಸಂಪತ್ತನ್ನು ತೆಗೆದುಕೊಂಡು ಕಳ್ಳತನದ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿದನು.ಸಂಪತ್ತನ್ನು ತೆಗೆದುಕೊಂಡವರಾರೆಂದು ತಮ್ಮ ವ್ಯಾಜ್ಯವನ್ನು ಬಗೆಹರಿಸಲು ಅವರು ಧರ್ಮಾಧಿಕರಣರು ಇರುವಲ್ಲಿಗೆ ಬಂದರು.ನಡೆದುದೆಲ್ಲವನ್ನು ಧರ್ಮಾಧಿಕರಣರಿಗೆ ವಿವರಿಸಿದ ದುಷ್ಟಬುದ್ಧಿಯು ಹೊನ್ನೆಲ್ಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡನೆಂಬುದಕ್ಕೆ ಅಲ್ಲಿದ್ದ ಆಲದ ಮರವೇ ಸಾಕ್ಷಿ ಎಂದಾಗ ಧರ್ಮಾಧಿಕರಣರು ತಮ್ಮ ಮನಸ್ಸಿನಲ್ಲಿ ಮೇಲಿನಂತೆ ಅಂದುಕೊಂಡರು.

ಸ್ವಾರಸ್ಯ : ವೃಕ್ಷವು ಸಾಕ್ಷಿನುಡಿಯುವ ಬಗ್ಗೆ ಧರ್ಮಾಧಿಕರಣರು ಆಶ್ಚರ್ಯ ವ್ಯಕ್ತಪಡಿಸುವ ಸನ್ನಿವೇಶ ಇಲ್ಲಿ ವ್ಯಕ್ತವಾಗಿದೆ.

೩. ''ನಿನ್ನ ಪಳುವಗೆ ನಮ್ಮ ಕುಲವನೆಲ್ಲಮನಳಿವ ಬಗೆ''

ಉ: ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರದಿಂದ ಆರಿಸಲಾದ 'ವೃಕ್ಷ ಸಾಕ್ಷಿ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದುಷ್ಟಬುದ್ಧಿಯ ತಂದೆ (ಪ್ರೇಮಮತಿ)ಯು ದುಷ್ಟಬುದ್ಧಿಗೆ ಹೇಳಿದನು.

ಸಂದರ್ಭ : ಹೊನ್ನನ್ನು ತಾನು ಕದ್ದ ಧರ್ಮಬುದ್ಧಿಯು ಅದರ ಆರೋಪವನ್ನು ಹೊರಿಸಿ ಅದಕ್ಕೆ ವೃಕ್ಷವೇ ಸಾಕ್ಷಿಯೆಂದು ಧರ್ಮಾಧಿಕರಣರಿಗೆ ಹೇಳಿದನು . ಆ ಹೊತ್ತಿಗೆ ಸಂಜೆಯಾದ್ದರಿಂದ ಮರುದಿನ ವೃಕ್ಷನ್ಯಾಯ ಕೇಳುವುದೆಂದು ತೀರ್ಮಾನವಾಯಿತು.ಮನೆಗೆ ಮರಳಿದ ದುಷ್ಟಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿ ದರ್ಮಾಧಿಕರಣರು ಆರೋಪದ ಕುರಿತು ಕೇಳಿದಾಗ ಧರ್ಮಬುದ್ಧಿಯೇ ಹೊನ್ನನ್ನು ಕದ್ದವನೆಂದು ಹೇಳುವಂತೆ ಒತ್ತಾಯಿಸಿದನು.ಆಗ ಮಗನಿಗೆ ಬುದ್ಧಿ ಹೇಳುತ್ತ ಪ್ರೇಮಮತಿ(ತಂದೆ)ಯು ಪರಧನ ,ವಿಶ್ವಾಸಘಾತಕತನ,ಸ್ವಾಮಿದ್ರೋಹ ಇವೆಲ್ಲವೂ ಎಲ್ಲ ಕಾಲದಲ್ಲಿಯೂ ಹಾನಿಯನ್ನುಂಟು ಮಾಡುವಂತವು.ನಿನ್ನ ದುರಾಸೆಯಿಂದಾದ ಕಳ್ಳತನವು ನಮ್ಮ ಕುಲವನ್ನೇ ನಾಶ ಮಾಡುವುದು ಎಂದು ಹೇಳಿದನು. ಸ್ವಾರಸ್ಯ : ಅನೀತಿ, ಅನ್ಯಾಯ ,ಅಕ್ರಮಗಳಿಂದ ಸಂಪಾದಿಸುವುದು ಎಂದಿಗೂ ಒಳ್ಳೆಯದನ್ನು ಮಾಡಲಾರದು ಎಂದು ಮೇಲಿನ ವಾಕ್ಯವು ಸೂಚಿಸುವುದು.

೪. ''ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗಂ''

ಉ: ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ 'ವೃಕ್ಷ ಸಾಕ್ಷಿ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ದುಷ್ಟಬುದ್ಧಿಯ ತಂದೆ (ಪ್ರೇಮಮತಿ)ಯು ಮರದ ಪೊಟರೆಯಲ್ಲಿ ಅಡಗಿದ್ದು ಹೇಳಿದನು.

ಸಂದರ್ಭ : ವ್ಯಾಪಾರದಲ್ಲಿ ದೊರೆತು ಹೂತಿಟ್ಟ ಹಣದ ಕಳುವಿನ ಆರೋಪವನ್ನು ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ .ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿ ಬಂದು ನಡೆದುದೆಲ್ಲವನ್ನು ವಿವರಿಸಿ ಧರ್ಮಬುದ್ಧಿಯೇ ಹೊನ್ನನ್ನು ತೆಗೆದವನು ಎಂಬುದಕ್ಕೆ ಆಲದ ಮರವೇ ಸಾಕ್ಷಿ ಎನ್ನುತ್ತಾನೆ.ಮರುದಿನ ಅವರೆಲ್ಲರೂ ಹೊನ್ನನ್ನು ಅಡಗಿಸಿಟ್ಟಿದ್ದ ಆಲದ ಮರದ ಬಳಿ ಬರುತ್ತಾರೆ.ಮಗನ ಒತ್ತಾಯಕ್ಕೆ ಕಟ್ಟುಬಿದ್ದ ದುಷ್ಟಬುದ್ಧಿಯ ತಂದೆ ಈ ಮೊದಲೇ ಮರದ ಪೊಟರೆಯಲ್ಲಿ ಅಡಗಿಕುಳಿತಿರುತ್ತಾನೆ .ಧರ್ಮಾಧಿಕರಣರು ವೃಕ್ಷದ ಬಳಿ ವಿಚಾರಿಸಿದಾಗ ಅಲ್ಲಿ ಅಡಗಿ ಕುಳಿತಿದ್ದ ಪ್ರೇಮಮತಿ (ದುಷ್ಟಬುದ್ಧಿಯ ತಂದೆ)ಯು ಮತಿಗೆಟ್ಟು ಧರ್ಮದ ದಾರಿಯನ್ನು ಬಿಟ್ಟು 'ಪ್ರಕೃತಿ ವಿಕೃತಿಯಾದರೆ ಮನುಷ್ಯನ ಆಯುಷ್ಯವು ಕುಂದುವುದು ಎಂದು ನುಡಿವಂತೆ ಧರ್ಮಬುದ್ಧಿ ಎಲ್ಲ ಸಂಪತ್ತನ್ನು ತೆಗೆದುಕೊಂಡನೆಂದು ಹೇಳುತ್ತಾನೆ .

ಸ್ವಾರಸ್ಯ : ಪ್ರಕೃತಿ ಮುನಿದರೆ ಯಾರಿಗೂ ಉಳಿಗಾಲವಿಲ್ಲ. ವಟವೃಕ್ಷವು ಪ್ರಕೃತಿಯ ಕೊಡುಗೆ .ಅದಕ್ಕೆ ವಿರುದ್ಧವಾಗಿ ನಡೆಯುವುದು ವಿಕೃತಿ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೫. ''ಹುಸಿಯದ ಬೇಹಾರಿಯೇ ಇಲ್ಲ''

ಉ: ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ 'ವೃಕ್ಷ ಸಾಕ್ಷಿ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನುಧರ್ಮಬುದ್ಧಿಯು ಧರ್ಮಾಧಿಕರಣರಿಗೆ ಹೇಳಿದನು.

ಸಂದರ್ಭ : ನ್ಯಾಯವನ್ನು ತೀರ್ಮಾನಿಸಲು ವೃಕ್ಷದ ಸಾಕ್ಷಿ ಕೇಳಲು ತೀರ್ಮಾನಿಸಿದಾಗ ದುಷ್ಟಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿಸಿಟ್ಟು ಧರ್ಮಾಧಿಕರಣರು ಪ್ರಶ್ನಿಸಿದಾಗ ಧರ್ಮಬುದ್ಧಿಯೇ ಕದ್ದನೆಂದುತಂದೆಯಿಂದ ಹೇಳಿಸುವನು.ವೃಕ್ಷವು ಸಾಕ್ಷ್ಯವನ್ನು ನುಡಿಯುವುದೇ ಆದಲ್ಲಿ ಸತ್ಯವನ್ನೇಕೆ ನುಡಿಯಲಾರದು ಎಂದು ಅನುಮಾನಗೊಂಡ ಧರ್ಮಬುದ್ಧಿಯು ಮರವನ್ನೊಮ್ಮೆ ಸುತ್ತು ಹಾಕಿದಾಗ ಪೊಟರೆಯ ಬಳಿ ಮನುಷ್ಯರ ಕುರುಹನ್ನು ಅರಿತು ಇದರ ಮರ್ಮವನ್ನು ತಿಳಿಯಬೇಕೆಂದು ಮೇಲಿನಂತೆ ಹೇಳುವನು.ವ್ಯಾಪಾರಿಬುದ್ಧಿಯಿಂದ ಹೀಗೆ ಮಾಡಿದ್ದಾಗಿಯೂ , ಪೊಟರೆಯಲ್ಲಿ ಅಡಗಿಸಿಟ್ಟ ಸಂಪತ್ತನ್ನು ಪಡೆಯಲು ಬಂದಾಗ ಅದನ್ನು ಹಾವು ಬಳಸಿ ಮಲಗಿತ್ತೆಂದೂ ,ಈಗ ಹೊಗೆ ಹಾಕಿಸಿ ಹಾವನ್ನು ಓಡಿಸುವೆನು ಮತ್ತು ಅಡಗಿಸಿಟ್ಟ ಹೊನ್ನನ್ನು ಮರಳಿ ಪಡೆಯಬಹುದು ಎಂದು ಪೊಟರೆಗೆ ಬೆಂಕಿ ಹಾಕಿಸಿ ಅಡಗಿಕುಳಿತ ದುಷ್ಟಬುದ್ಧಿಯ ತಂದೆ ಹೊರಗೆ ಬರುವಂತೆ ಮಾಡಿ ನಿಜ ಸಂಗತಿಯನ್ನು ಬಯಲು ಮಾಡುವನು.

ಸ್ವಾರಸ್ಯ : ವ್ಯಾಪಾರ ವೃತ್ತಿಯಲ್ಲಿ ಕೆಲವೊಮ್ಮೆ ಲಾಭಕ್ಕಾಗಿ ಸುಳ್ಳನ್ನು ಹೇಳುವುದು ಅನಿವಾರ್ಯ ಎಂದು ಧರ್ಮಬುದ್ಧಿಯು ಹೇಳುವ ಸಂದರ್ಭ ಇಲ್ಲಿ ವ್ಯಕ್ತವಾಗಿದೆ.

## ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧.ವಡ್ಡಾರಾಧನೆ –ಶಿವಕೋಟ್ಯಾಚಾರ್ಯ: : ಪಂಚತಂತ್ರಂ–––––(ದುರ್ಗಸಿಂಹ)

೨. ಕಬ್ಬ –ಕಾವ್ಯ : : ಬೇಹಾರಿ ––––––(ವ್ಯಾಪಾರಿ)

೩.ಅನೃತ –ಸುಳ್ಳು : : ಕೃತ್ರಿಮ ––––(ಮೋಸ)

೪. ಬಂದಲ್ಲದೆ – ಲೋಪ : : ಧೃತಿಗೆಟ್ಟು ––––(ಆದೇಶ )

೫.ದೈವ ಭಕ್ತಿ –ತತ್ಪುರುಷ : : ಅಬ್ಜೋದರ–––(ಬಹುವ್ರೀಹಿ ಸಮಾಸ)

### ಪದಗಳನ್ನು ವಿಂಗಡಿಸಿ ಸಂಧಿಯ ಹೆಸರು ಬರೆಯಿರಿ.

ಪೋಗಲ್ ವೇಳ್ಕುಂ, ತಕ್ಕನಿತು , ಪೂಳ್ದೆಡೆ.

ಪೋಗಲ್+ಬೇಳ್ಕುಂ=ಪೋಗಲ್ವೇಳ್ಕುಂ =ಆದೇಶ ಸಂಧಿ

ತಕ್ಕ +ಅನಿತು= ತಕ್ಕನಿತು = ಲೋಪ ಸಂಧಿ

ಪೂಳ್ದ +ಎಡೆ =ಪೂಳ್ದೆಡೆ=ಲೋಪಸಂಧಿ

### ನೀಡಿರುವ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ.

ಅತಿಕುಟಿಲ,ಕೈಕೊಳ್ವುದು,ಕಟ್ಟೇಕಾಂತ,ಸ್ವಾಮಿದ್ರೋಹ,ಪರಧನ, ಧನಹರಣ, ಸಾಕ್ಷಿಮಾಡಿ,ಬಲವಂದು,

ಅತಿಯಾದ +ಕುಟಿಲ=ಕರ್ಮಧಾರಯ ಸಮಾಸ.

ಕೈಯಂ +ಕೊಳ್ವುದು = ಕ್ರಿಯಾ ಸಮಾಸ

ಕಡಿದು + ಏಕಾಂತ = ಕರ್ಮಧಾರಯ ಸಮಾಸ

ಸ್ವಾಮಿಗೆ +ದ್ರೋಹ=ತತ್ಪುರುಷ ಸಮಾಸ

ಪರರ +ಧನ =ತತ್ಪುರುಷ ಸಮಾಸ

ಧನದ +ಹರಣ = ತತ್ಪುರುಷ ಸಮಾಸ

ಸಾಕ್ಷಿಯನ್ನು +ಮಾಡಿ = ಕ್ರಿಯಾ ಸಮಾಸ

ಬಲದಿಂದ +ಬಂದು = ಕ್ರಿಯಾ ಸಮಾಸ

### ಕೊಟ್ಟಿರುವ ಪದ್ಯಭಾಗಕ್ಕೆಪ್ರಸ್ತಾರ ಹಾಕಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.

**UUUU| U U– | UU–**

೧. ಅ ತಿ ಕು ಟಿ| ಲ ಮನಂ| ಧನಲು

**UU _ | _ _| U_U| UU_| UU_**

ಭ್ರತೆ ಯಿಂ|ದಂ ದು|ಷ್ಟಬುದ್ಧಿ| ನುಡಿದಂ| ಪುಸಿಯಂ

**ಕಂದ ಪದ್ಯ _ಲಕ್ಷಣ**

ಇದು ನಾಲ್ಕು ಚರಣಗಳುಳ್ಳ ಮಾತ್ರಾವೃತ್ತ ಪದ್ಯ.ಒಂದನೆಯ ಮತ್ತು ಮೂರನೆಯ ಚರಣಗಳಲ್ಲಿ ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳೂ ,ಎರಡನೆಯ ಮತ್ತು ನಾಲ್ಕನೆಯ ಚರಣಗಳಲ್ಲಿ ನಾಲ್ಕು ಮಾತ್ರೆಗಳ ಐದೈದು ಗಣಗಳೂ ಇರುತ್ತವೆ.

ಭ ರ ನ ಭ ಭ ಭ ಲ+ಗು

**– U U| – U – | UUU| – U U |– U U| – U _|U –**

೨. ಮೇದಿನಿ|ಯಂ ಕ್ರಮ|ಕ್ರಮದೆ ಪರ್ವಿದು |ದಾತ್ತನ |ಭೋ ವಿಭಾ| ಗಮಾ.......

**ಉತ್ಪಲ ಮಾಲಾ ವೃತ್ತ –ಲಕ್ಷಣ**

ಇದು ನಾಲ್ಕು ಪಾದಗಳ ಸಮವೃತ್ತ ಪದ್ಯ.ಪ್ರತಿ ಚರಣದಲ್ಲಿ ೨೦ ಅಕ್ಷರಗಳಿರುತ್ತವೆ.ಮತ್ತು ಭ,ರ,ನ,ಭ,ರ ಎಂಬ ಆರು ಗಣಗಳೂ ಮೇಲೆ ಒಂದು ಲಘು ,ಒಂದು ಗುರು ಬರುತ್ತದೆ.ಅಲ್ಲದೆ ಒಂಬತ್ತನೆಯ ಅಕ್ಷರ ಸ್ಥಾನದಲ್ಲಿ ಯತಿಯು ಬರುವುದು.ಹಾಗೂ ಈ ವೃತ್ತದ ಪ್ರತಿಯೊಂದು ಚರಣದ ಆದಿಯಲ್ಲಿ ಒಂದು ಗುರು ಬರುತ್ತದೆ.

| ಘಟಕ ಪರೀಕ್ಷೆ -೧ ೧೫ ಅಂಕಗಳು | ಘಟಕ ಪರೀಕ್ಷೆ -೨ ೧೫ ಅಂಕಗಳು |
|---|---|
| ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೩*೧=೩<br>೧.ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?೨.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?೩. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?<br>ಮೂರು –ನಾಲ್ಕು ವಾಕ್ಯಗಳಲ್ಲಿ ವಿವರಿಸಿ. ೨*೨=೪<br>೧.ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನಿತ್ತನು ?<br>೨.ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನು ಹೇಳಿದನು ?<br>ದುರ್ಗಸಿಂಹನ ಸಂಕ್ಷಿಪ್ತ ಪರಿಚಯ ಬರೆಯಿರಿ. ೩<br>ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ.೩ ಅಂಕಗಳು<br>೧.ಪೊನ್ನನೆಲ್ಲಮಂ ನೀನೆ ಕೊಂಡೆ | ಒಂದೊಂದು ವಾಕ್ಯದಲ್ಲಿ ಉತ್ತರಿಸಿ.<br>೧. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಹೋದರು ?<br>ಮೂರು –ನಾಲ್ಕು ವಾಕ್ಯಗಳಲ್ಲಿ ವಿವರಿಸಿ. ೨ಅಂಕಗಳು ೧. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ. ೪*=೧೨<br>೧.ಈತನ ಮಾತು ಅಶ್ರುತಪೂರ್ವಂ ೨. ನಿನ್ನ ಪಳುವಗೆ ನಮ್ಮ ಕುಲಮನೆಲ್ಲಮಳಿವ ಬಗೆ ೩. ಪ್ರಕೃತಿವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ ೪. ಹುಸಿಯದ ಬೇಹಾರಿಯೀ ಇಲ್ಲ. |

## ಗದ್ಯ ಪಾಠ –೮ ಸುಕುಮಾರಸ್ವಾಮಿಯ ಕಥೆ – ಶಿವಕೋಟ್ಯಾಚಾರ್ಯ

### ಕೃತಿಕಾರರ ಪರಿಚಯ

ಶಿವಕೋಟ್ಯಾಚಾರ್ಯ ನ ಕಾಲ ಕ್ರಿ.ಶ.ಸುಮಾರು ೧೦ ನೆಯ ಶತಮಾನ .ಇವನು ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಕೋಗಳಿ ನಾಡಿನವನು. ಇವನು ಕನ್ನಡದ ಪ್ರಥಮ ಗದ್ಯಕೃತಿ ವಡ್ಡಾರಾಧನೆಯ ಕರ್ತೃ .ಜೈನ ಧಾರ್ಮಿಕ ಕಥೆಗಳ ಸಂಗ್ರಹವಾದ ವಡ್ಡಾರಾಧನೆಯಲ್ಲಿ ೧೯ ಕಥೆಗಳಿವೆ.

ಪ್ರಸ್ತುತ ಗದ್ಯಭಾಗವನ್ನು ವಡ್ಡಾರಾಧನೆ ಕೃತಿಯ 'ಸುಕುಮಾರಸ್ವಾಮಿಯ ಕಥೆ ' ಯಿಂದ ಆರಿಸಲಾಗಿದೆ.

<u>ಅನುವಾದ</u>: ಈ ಜಂಬೂದ್ವೀಪದ ದಕ್ಷಿಣ ಭರತಭೂಮಿಯಲ್ಲಿ ಅವಂತಿಯೆಂಬ ನಾಡಿದೆ. ಅಲ್ಲಿ ಉಜ್ಜಯಿನಿಯೆಂಬ ಪಟ್ಟಣದಲ್ಲಿ ಇಂದ್ರದತ್ತನೆಂಬ ವರ್ತಕನಿದ್ದನು. ಅವನ ಹೆಂಡತಿ ಗುಣಮತಿ ಎಂಬುವಳು ಆ ಇಬ್ಬರಿಗೂ ಸೂರದತ್ತನೆಂಬ ಮಗನಾಗಿ (ಸೋಮಶರ್ಮನಾಗಿದ್ದ ದೇವನು) ಹುಟ್ಟಿದನು. ಅದಲ್ಲದೆ ಆ ಪಟ್ಟಣದಲ್ಲಿ ಮೂವತ್ತೆರಡು ಕೋಟಿ ಹೊನ್ನನ್ನುಳ್ಳ ಸುಭದ್ರನೆಂಬ ಸೆಟ್ಟಿಯಿದ್ದನು. ಅವನ ಹೆಂಡತಿ ಸರ್ವಯಶಿಯೆಂಬವಳು. ಆ ಇಬ್ಬರಿಗೆ ತ್ರಿವೇದಿಯಾಗಿದ್ದ ದೇವನ ಜೀವದಿಂದ ಯಶೋಭದ್ರೆಯೆಂಬ ಮಗಳು ಜನಿಸಿದಳು. ಆ ತ್ರಿವೇದಿ ತನ್ನ ತಪಸ್ಸಿನ ಆಚರಣೆಯ ಫಲದಿಂದ ದೇವತ್ವವನ್ನು ಪಡೆದರೂ ತನ್ನ ಸಂಕಲ್ಪದ ಕಾರಣದಿಂದ ಮಿಥ್ಯತ್ವಕ್ಕೆ ಒಳಗಾಗಿ ಹೆಣ್ಣುತನವನ್ನು ಹೊಂದಿದ್ದಳು. ಆ ಯಶೋಭದ್ರೆಯನ್ನು ಸೂರದತ್ತನಿಗೆ ಕೊಟ್ಟರು. ಆ ಇಬ್ಬರಿಗೂ ನಾಗಶ್ರೀಯಾಗಿದ್ದ ದೇವನು ಬಂದು ಸುಕುಮಾರಸ್ವಾಮಿಯೆಂಬ ಮಗನಾಗಿ ಹುಟ್ಟಿದನು. ಅವನು ಹುಟ್ಟಿದ ದಿನವೇ ವೈರಾಗ್ಯವುಂಟಾಗಿ ಸೂರದತ್ತ ಸೆಟ್ಟಿಯು ಸುಕುಮಾರಸ್ವಾಮಿಗೆ ಸೆಟ್ಟಿಪಟ್ಟವನ್ನು ವಹಿಸಿಕೊಟ್ಟು ತಪಸ್ಸಿಗೆ ತೆರಳಿದನು.

ಸುಕುಮಾರಸ್ವಾಮಿಯು ತಾರುಣ್ಯವನ್ನು ಪಡೆದು ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾದನು. ಅವನಿಗೆ ಮೂವತ್ತೆರಡು ಲತಾಗೃಹಗಳೂ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ ದೇವತಾಸ್ತ್ರೀಯರನ್ನು ಹೋಲುವ ಮೂವತ್ತೆರಡು ಮಂದಿ ದಿವ್ಯರಾದ ಸ್ತ್ರಿಯರೂ ಇದ್ದರು, ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳು ಎಂಬಿವೆಲ್ಲವುಗಳನ್ನು ಹೊಂದಿದ್ದ ಸುಕುಮಾರಸ್ವಾಮಿ ಎಲ್ಲಾ ರೀತಿಯ ಸುಖಗಳನ್ನು ಅನುಭವಿಸುತ್ತಿರಲು...

ಮತ್ತೊಂದು ದಿನ ಒಬ್ಬ ಜೋಯಿಸನು ಈ ರೀತಿಯಾಗಿ ಭವಿಷ್ಯವನ್ನು ಹೇಳಿದನು. "ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಹೀಗೆಂದ ಮಾತನ್ನು ತಾಯಿ ಯಶೋಭದ್ರೆ ಕೇಳಿ ತನ್ನ ಮನೆಗೆ ಋಷಿಗಳನ್ನು ಪ್ರವೇಶಿಸಲು ಬಿಡದ ಹಾಗೆ ಬಾಗಿಲು ಕಾಯುವವರಿಗೆ ಅಜ್ಞೆ ಮಾಡಿದಳು. ಹಾಗೆಯೇ ಕಾಲ ಕಳೆಯಿತು.

ಮತ್ತೊಂದು ದಿವಸ ರತ್ನದ್ವೀಪದಿಂದ ಒಬ್ಬ ವರ್ತಕನು ಲಕ್ಷದೀನಾರ (ಚಿನ್ನದ ನಾಣ್ಯ)ಗಳ ಬೆಲೆ ಬಾಳತಕ್ಕ ಎಲ್ಲಾ ರತ್ನಗಳಿಂದ ಕೂಡಿದ ಕಂಬಳಿಗಳನ್ನು ಮಾರಲು ಉಜ್ಜಯಿನಿಗೆ ತೆಗೆದುಕೊಂಡು ಬಂದನು. ಆ ಪಟ್ಟಣವನ್ನಾಳುವ ವೃಷಭಾಂಕನೆಂಬ ರಾಜನಿಗೂ ಜ್ಯೋತಿರ್ಮಾಲೆಯೆಂಬ ಮಹಾರಾಣಿಗೂ ಹೀಗೆ ಇಬ್ಬರಿಗೂ ರತ್ನ ಕಂಬಳಿಗಳನ್ನು ತೋರಿಸಲು, ಅದರ ಬೆಲೆಯೇನೆಂದು ಕೇಳಿದಾಗ ಲಕ್ಷದೀನಾರಗಳೆಂದು ಹೇಳಿದನು. ರಾಜನು ಅವನ್ನು ಕ್ರಯಕ್ಕೆ ಕೊಳ್ಳಲಾರದೆ ಆ ವರ್ತಕನನ್ನು ಹೋಗಲು ಹೇಳಿದನು.

ಅಂತೂ ಪಟ್ಟಣದಲ್ಲೆಲ್ಲಾ ತೋರಿಸಿದರೂ ಯಾರೂ ಕೊಂಡುಕೊಳ್ಳಲಾರದೆ ಇದ್ದಾಗ ಆ ರತ್ನಕಂಬಳಿಗಳನ್ನು ಕೊಂಡುಹೋಗಿ ಯಶೋಭದ್ರೆಗೆ ತೋರಿಸಿದಾಗ, ಆಕೆ ಲಕ್ಷದೀನಾರಗಳನ್ನು ಕೊಟ್ಟು ಅವನ್ನು ಕೊಂಡಳು. ಆಮೇಲೆ ಅವುಗಳಲ್ಲಿ ಪ್ರತಿಯೊಂದನ್ನೂ ನಾಲ್ಕು ತುಂಡುಗಳಾಗಿ ಮಾಡಿ ಒಟ್ಟು ಮೂವತ್ತೆರಡು ತುಂಡುಗಳನ್ನು ಮಾಡಿ ತನ್ನ ಮೂವತ್ತೆರಡು ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವರು ಆ ತುಂಡುಗಳನ್ನು ತಮತಮ್ಮ ಪಾದುಕೆಗಳಿಗೆ ಸಿಕ್ಕಿಸಿಕೊಂಡರು. ಈ ಸಂಗತಿಯನ್ನು ರಾಜನು ಕೇಳಿ ಆಶ್ಚರ್ಯಪಟ್ಟು

ತಾಯಿಯ ಮಾತನ್ನು ವಿರೋಧಿಸಲಾರದೆ ಬಂದನು. ಅವನನ್ನು ರಾಜನು ಕಂಡು 'ನಾನು ಕಣ್ಣನ್ನು ಪಡೆದದ್ದು ಇಂದು ಸಾರ್ಥಕವಾಯಿತು' ಎಂದುಕೊಂಡು ಪ್ರತ್ಯಕ್ಷವಾಗಿ ಮನ್ಮಥನನ್ನೇ ಅಪ್ಪಿಕೊಳ್ಳುವಂತೆ ಅವನನ್ನು ಅಪ್ಪಿಕೊಂಡು ಶ್ರೇಷ್ಠವಾದ ಆ

ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳ್ಳಿರಿಸಿದನು. ಆಗ ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನೂ ದೀಪ ನೋಡಿದಾಗ ಕಣ್ಣೀರು ಸುರಿವುದನ್ನೂ ಕಂಡು ಈತನಿಗೆ ರೋಗಗಳಿವೆಯೆಂದು ಭಾವಿಸಿಕೊಂಡಿದ್ದನು. ಅಷ್ಟರಲ್ಲಿ 'ಸ್ನಾನಕ್ಕೆ ಏಳಿ, ಬನ್ನಿ' ಎನ್ನಲು 'ಹಾಗೆಯೇ ಮಾಡುವೆವು' ಎಂದು ಸ್ನಾನ ಮಾಡಲು ಉದ್ಯುಕ್ತನಾಗಿ ದೇವಲೋಕಕ್ಕೆ ಸಮಾನವಾದ ರತ್ನಮಯವಾದ ನೆಲಗಟ್ಟುಳ್ಳ ಬಾವಿಗೆ(ಕೆರೆಗೆ) ಹೋಗಿ ಸ್ನಾನ ಮಾಡಿದನು. ಆಗ ತನ್ನ ಬೆರಳಿನಲ್ಲಿದ್ದ ಅಮೂಲ್ಯವಾದ ಉಂಗುರ ಬಿದ್ದು ಹೋಗಲು, ಅದನ್ನು ಹುಡುಕುವುದಕ್ಕಾಗಿ ಆ ಕೆರೆಯ ಎದುರಿನ ತೂಬನ್ನು ತೆಗೆದು ನೀರನ್ನು ಬಿಟ್ಟನು. ಆಗ ಅಲ್ಲಿ ದೇವೇಂದ್ರನ ಖಜಾನೆಯನ್ನೇ ತೆರೆದ ರೀತಿಯಲ್ಲಿ ಶ್ರೇಷ್ಟವಾದ ಬಗೆಬಗೆಯ ರತ್ನಗಳ ವಿಚಿತ್ರವಾದ ಹಲವು ಆಭರಣಗಳನ್ನು ಕಂಡು ಬಹಳ ಆಶ್ಚರ್ಯಪಟ್ಟವನಾಗಿ ನೋಡುತ್ತಿರುವಷ್ಟರಲ್ಲಿ……
ರಾಜನನ್ನೂ ಸುಕುಮಾರನನ್ನೂ 'ಊಟಕ್ಕೆ ಬನ್ನಿರಿ' ಎಂದು ಕರೆಯಲು ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಆಹಾರವನ್ನು ಊಟಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು, ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ಭಾವಿಸಿಕೊಂಡನು. ಊಟವಾದ ನಂತರ ಗಂಧ, ತಾಂಬೂಲ, ಹೂಮಾಲೆ, ಉಡಿಗೆ, ತೊಡಿಗೆಗಳನ್ನು ತಂದು ಕೊಡಲು, ಅವನ್ನು ತೊಟ್ಟು ಉಟ್ಟು ಅಲಂಕಾರ ಮಾಡಿಕೊಂಡು ಸಂತೋಷದ ಮಾತುಗಳನ್ನಾಡುತ್ತಾ ವಿನೋದದಿಂದ ಇದ್ದಾಗ……..
ಅರಸನು ಯಶೋಭದ್ರೆಯನ್ನು ಕುರಿತು ಹೀಗೆ ಪ್ರಶ್ನಿಸಿದನು: "ಅಮ್ಮಾ, ನನ್ನ ತಮ್ಮನಾದ ಸುಕುಮಾರನಿಗೆ ಸೊಂಟದ ರೋಗಕ್ಕೂ ಕಣ್ಣೀರು ಸುರಿಯುವುದಕ್ಕೂ ಊಟ ಸೇರದಿರುವುದಕ್ಕೂ ಏಕೆ ಔಷಧ ಮಾಡಿಸಿಲ್ಲ?" ಎಂದು ಕೇಳಿದಾಗ ಆಕೆ "ಒಡೆಯರೆ, ಅವನಿಗೆ ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸವೆಗಳು ಒತ್ತಿದುದರಿಂದ ಸಹಿಸದಾದನು. ಅಲ್ಲದೆ ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಅವನು ಇರುವುದರಿಂದ ದೀಪದ ಬೆಳಕಿಗೆ ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತದೆ. ಅದೂ ಅಲ್ಲದೆ ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ" ಎಂದು ಹೇಳಿದಳು.
ಅದನ್ನು ಕೇಳಿ ಅರಸನು ಆಶ್ಚರ್ಯಪಟ್ಟನು. "ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ – ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ "ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರನ್ನಿಟ್ಟನು. (ಹೊಸಗನ್ನಡ ಅನುವಾದ ಆಧಾರ -ಕನ್ನಡ ದೀವಿಗೆ ಬ್ಲಾಗ್ )

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಸುಕುಮಾರಸ್ವಾಮಿಯ ತಂದೆತಾಯಿಗಳ ಹೆಸರೇನು ?

ಉ: ಸುಕುಮಾರಸ್ವಾಮಿಯ ತಂದೆತಾಯಿಗಳ ಹೆಸರು ಸೂರದತ್ತ ಮತ್ತು ಯಶೋಭದ್ರೆ

೨. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?

ಉ: ಸುಕುಮಾರಸ್ವಾಮಿಗೆ ಸೆಟ್ಟಿಯ ಪಟ್ಟವನ್ನು ಕಟ್ಟಲಾಯಿತು.

೩. ನೈಮಿತ್ತಿಕನು ಸುಮಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು ?
ಉ:"ಈ ಸುಕುಮಾರಸ್ವಾಮಿ ಯಾವಾಗ ಋಷಿಗಳ ರೂಪವನ್ನು ಕಾಣುವನೋ ಅಂದೇ ತಪಸ್ಸಿಗೆ ತೆರಳುವನು" ಎಂದು ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಹೇಳಿದನು.

೪. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು ?
ಉ: ಯಶೋಭದ್ರೆಯು ರತ್ನಕಂಬಳಿಗಳನ್ನು ಮೂವತ್ತೆರಡು ತುಂಡುಗಳಾಗಿ ಮಾಡಿ ತನ್ನ ಮೂವತ್ತೆರಡು ಸೊಸೆಯಂದಿರಿಗೆ ಕೊಟ್ಟಳು.

೫. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು ?
ಉ: ಅರಸ ವೃಷಭಾಂಕನ ಉಂಗುರವು ಅವನು ಸ್ನಾನ ಮಾಡುವ ಸಮಯದಲ್ಲಿ ಕೆಳಕ್ಕೆ ಬಿದ್ದಿತು.

## ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?
ಉ: ಸುಕುಮಾರಸ್ವಾಮಿಯು ತಾರುಣ್ಯವನ್ನು ಪಡೆದು ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾದನು. ಅವನಿಗೆ ಮೂವತ್ತೆರಡು ಲತಾಗೃಹಗಳೂ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ ದೇವತಾಸ್ತ್ರೀಯರನ್ನು ಹೋಲುವ ಮೂವತ್ತೆರಡು ಮಂದಿ ದಿವ್ಯರಾದ ಸ್ತ್ರಿಯರೂ ಇದ್ದರು, ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳು ಎಂಬಿವೆಲ್ಲವುಗಳನ್ನು ಹೊಂದಿದ್ದ ಸುಕುಮಾರಸ್ವಾಮಿ ಎಲ್ಲಾ ರೀತಿಯ ಸುಖಗಳನ್ನು ಅನುಭವಿಸುತ್ತಿದ್ದನು.

೨. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು ?
ಉ: ರತ್ನದ್ವೀಪದಿಂದ ಬಂದ ವರ್ತಕನೊಬ್ಬನು ಲಕ್ಷದೀನಾರ ಬೆಲೆ ಬಾಳತಕ್ಕ ಎಲ್ಲಾ ರತ್ನಗಳಿಂದ ಕೂಡಿದ ಕಂಬಳಿಗಳನ್ನು ಮಾರಲು ಉಜ್ಜಯಿನಿಗೆ ತಂದಾಗ ಅವುಗಳ ಬೆಲೆಯನ್ನು ಕೇಳಿದ ರಾಜ ವೃಷಭಾಂಕ ಮತ್ತು ರಾಣಿ ಜ್ಯೋತಿರ್ಮಾಲೆಯೂ ಅದನ್ನು ಕೊಳ್ಳದೇ ವರ್ತಕನನ್ನು ಕಳಿಸಿಬಿಟ್ಟರು. ಪಟ್ಟಣದಲ್ಲಿ ಯಾರೂ ಅದನ್ನು ಕೊಳ್ಳದೇ ಇದ್ದಾಗ ವರ್ತಕನು ಯಶೋಭದ್ರೆಯ ಬಳಿ ಬಂದು ತೋರಿಸಲು ಅವಳು ಅದನ್ನು ಕೊಂಡು ಪ್ರತಿಯೊಂದನ್ನು ನಾಲ್ಕು ತುಂಡು ಮಾಡಿ ಒಟ್ಟೂ ಮೂವತ್ತೆರಡು ತುಂಡುಗಳನ್ನು ತನ್ನ ಮೂವತ್ತೆರಡು ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವರು ಆ ತುಂಡುಗಳನ್ನು ತಮತಮ್ಮ ಪಾದುಕೆಗಳಿಗೆ ಸಿಕ್ಕಿಸಿಕೊಂಡರು. ಈ ಸಂಗತಿಯನ್ನು ರಾಜನ ವೃಷಭಾಂಕನು ಕೇಳಿ ಆಶ್ಚರ್ಯಪಟ್ಟನು .

೩. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು ?
ಉ: ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದಾಗ ಅವನನ್ನು ಅಪ್ಪಿಕೊಂಡು ಶ್ರೇಷ್ಠವಾದ ಆ ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳ್ಳಿರಿಸಿದನು. ಆಗ ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸುಕಮಾರಸ್ವಾಮಿಯು ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನೂ ದೀಪ ನೋಡಿದಾಗ ಕಣ್ಣೀರು ಸುರಿವುದನ್ನೂ ಕಂಡು ಈತನಿಗೆ ರೋಗಗಳಿವೆಯೆಂದು ವೃಷಭಾಂಕನು ಭಾವಿಸಿದನು. ರಾಜನು ಸುಕುಮಾರನೊಂದಿಗೆ ಆಹಾರವನ್ನು ಊಟಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು, ಇನ್ನುಳಿದ ಅರ್ಧಾಂಶ ಆಹಾರವನ್ನು

ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ಭಾವಿಸಿಕೊಂಡನು.

೪. ಸುಕುಮಾರಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು ?

ಉ: ಅರಸನು ಯಶೋಭದ್ರೆಯನ್ನು ಅಮ್ಮಾ ನನ್ನ ತಮ್ಮನಾದ ಸುಕುಮಾರನಿಗೆ ಏಕೆ ಔಷಧ ಮಾಡಿಸಿಲ್ಲ?" ಎಂದು ಕೇಳಿದಾಗ ಆಕೆ "ಒಡೆಯರೆ, ಅವನಿಗೆ ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸವೆಗಳು ಒತ್ತಿದುದರಿಂದ ಸಹಿಸದಾದನು. ಅಲ್ಲದೆ ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಅವನು ಇರುವುದರಿಂದ ದೀಪದ ಬೆಳಕಿಗೆ ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತದೆ. ಅದೂ ಅಲ್ಲದೆ ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ" ಎಂದು ಹೇಳಿದಳು.

## ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಸುಕುಮಾರಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಉ: ಉಜ್ಜಯನಿಯ ಯಶೋಭದ್ರೆ ಮತ್ತು ಸೂರದತ್ತ ದಂಪತಿಗಳಿಗೆ ಸುಕುಮಾರ ಸ್ವಾಮಿಯು ಮಗನಾಗಿ ಜನಿಸಿದನು.ಅವನು ಹುಟ್ಟಿದಾಗಲೇ ಅವನ ತಂದೆಯು ವೈರಾಗ್ಯ ಹೊಂದಿ ತನ್ನ ಮಗನಾದ ಸುಕುಮಾರಸ್ವಾಮಿಗೆ ಸೆಟ್ಟಿ ಪಟ್ಟವನ್ನು ಕಟ್ಟಿ ತಪಸ್ಸಿಗೆ ನಡೆದನು. ಸುಕುಮಾರಸ್ವಾಮಿಯು ಯುವಕನಾಗಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿ ಸುಖಭೋಗಗಳನ್ನು ಅನುಭವಿಸುತ್ತ ಸುಖವಾಗಿದ್ದನು. ಒಂದು ದಿನ ಅವರ ಮನೆಗೆ ಬಂದ ಜೋಯಿಸನೊಬ್ಬನು ಸುಕುಮಾರಸ್ವಾಮಿಯನ್ನು ನೋಡಿ ಯಾವ ಸಮಯದಲ್ಲಿ ಇವನು ಋಷಿಗಳನ್ನು ನೋಡುತ್ತಾನೋ (ಋಷಿಗಳ ದರ್ಶನವಾದ ದಿನ) ಇವನು ತಪಸ್ಸಿಗೆ ಹೋಗುತ್ತಾನೆ ಎಂದು ಹೇಳಿದನು. ಆಗ ಯಶೋಭದ್ರೆಯು ಅವರ ಮನೆಗೆ ಋಷಿಗಳು ಬರದಂತೆ ಕಾವಲಿರಿಸಿದಳು .

ರತ್ನದ್ವೀಪದಿಂದ ಬಂದ ವರ್ತಕನೊಬ್ಬನು ತಾನು ತಂದ ಬೆಲೆಬಾಳುವ ರತ್ನಕಂಬಳಿಗಳನ್ನು ಮಾರಲು ಉಜ್ಜಯನಿಯ ರಾಜ ವೃಷಭಾಂಕನ ಬಳಿ ಹೋದಾಗ ಅದರ ಬೆಲೆ ಜಾಸ್ತಿಯಾಯಿತೆಂದು ರಾಜ ರಾಣಿಯರು ಖರೀದಿಸದೇ ಹೋದಾಗ ಅಂತಹ ಬೆಲೆಬಾಳುವ ರತ್ನಕಂಬಳಿಗಳನ್ನು ಯಶೋಭದ್ರೆಯು ಕೊಂಡು ಅದನ್ನು ತನ್ನ ಮೂವತ್ತೆರಡು ಸೊಸೆಯಂದಿರಿಗೆ ಮೂವತ್ತೆರಡು ತುಂಡುಗಳಾಗಿ ಮಾಡಿ ಅವರ ಪಾದುಕೆಗಳಿಗೆ ಸಿಕ್ಕಿಸಿಕೊಳ್ಳಲು ಕೊಟ್ಟಳು . ಅದನ್ನು ಕೇಳಿ ಅವರ ವೈಭವದ ವಿಷಯ ತಿಳಿದ ರಾಜನು ಬೆರಗಾಗಿ ಅವರ ಮನೆಗೆ ಬಂದನು. ಅಲ್ಲಿ ಸುಕುಮಾರಸ್ವಾಮಿಯನ್ನು ನೋಡಿ ಸಂತಸಗೊಂಡ ರಾಜನು ಅವನನ್ನು ಬರಸೆಳೆದು ತಬ್ಬಿಕೊಂಡು ಆಸನದ ಮೇಲೆ ಕೂರಿಸಿಕೊಂಡನು. ಆ ಸಂದರ್ಭದಲ್ಲಿ ಮಂಗಳಕರವೆಂದು ಅವರ ಮೇಲೆ ಬಿಳಿ ಸಾಸುವೆ ಮಂತ್ರಾಕ್ಷತೆಗಳನ್ನು ಹಾಕಿದಾಗ ಆಸನದಲ್ಲಿ ಕುಳಿತಿದ್ದ ಸುಕುಮಾರಸ್ವಾಮಿಗೆ ಸಾಸುವೆಗಳು ಒತ್ತುತ್ತಿದ್ದುದರಿಂದ ಅವನು ಅತ್ತಿತ್ತ ಹೊರಳಾಡುತ್ತಿದ್ದನು. ಅವನು ದೀಪವನ್ನು ನೋಡಿ ಕಣ್ಣೀರು ಸುರಿಸುತ್ತಿದ್ದುದನ್ನೂ ಊಟ ಮಾಡುವಾಗ ಅರ್ಧ ಅಗುಳನ್ನು ಉಗಿಯುತ್ತಿದ್ದುದರಿಂದಲೂ ರಾಜನು ಇವನಿಗೆ ಏನೋ ರೋಗ ಎಂದು ಭಾವಿಸಿ ಯಶೋಭದ್ರೆಯನ್ನು ವಿಚಾರಿಸಿದನು. ಆಗ ಯಶೋಭದ್ರೆಯು ಸಾಸುವೆಗಳು ಒತ್ತುತ್ತಿದ್ದುದರಿಂದ ಅವನು ಹೊರಳಾಡುತ್ತಿದ್ದನೆಂದೂ ,ದೀಪದ ಬೆಳಕನ್ನು ಸಹಿಸದೇ ಕಣ್ಣಿನಲ್ಲಿ ನೀರು ಬಂದಿತೆಂದೂ ಅಷ್ಟೇ ಅಲ್ಲದೇ ಅವನು ತಾವರೆ ನೈದಿಲೆ

ಸುಗಂಧಗಳಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನ ಬಡಿಸಿದ್ದರಿಂದ ಅವನು ಸುಗಂಧದಿಂದ ಕೂಡಿದ ಅನ್ನವನ್ನು ನುಂಗಿ ಉಳಿದುದನ್ನು ಉಗುಳುತ್ತಿದ್ದನು ಎಂದು ವಿವರಿಸಿದಳು.

ಅದನ್ನು ಕೇಳಿ ಅರಸನು ಆಶ್ಚರ್ಯಪಟ್ಟನು. "ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ – ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ "ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರನ್ನಿಟ್ಟನು.

೨. 'ಸುಕುಮಾರ' – ಎಂಬ ಹೆಸರು ಸುಕುಮಾರ ಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ ? ವಿವರಿಸಿ.

ಉ: ಸುಕುಮಾರಸ್ವಾಮಿಯು ತಾರುಣ್ಯವನ್ನು ಪಡೆದು ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದವನಾದನು. ಅವನಿಗೆ ಮೂವತ್ತೆರಡು ಲತಾಗೃಹಗಳೂ ಅತ್ಯಂತ ರೂಪ, ಲಾವಣ್ಯ, ಸೌಭಾಗ್ಯ, ಕಾಂತಿ, ಹಾವ, ಭಾವ, ವಿಲಾಸ, ವಿಭ್ರಮಗಳಿಂದ ಕೂಡಿದ ದೇವತಾಸ್ತ್ರೀಯರನ್ನು ಹೋಲುವ ಮೂವತ್ತೆರಡು ಮಂದಿ ದಿವ್ಯರಾದ ಸ್ತ್ರಿಯರೂ ಇದ್ದರು, ಮೂವತ್ತೆರಡು ಬಗೆಯ ನಾಟ್ಯಗಳು, ಮೂವತ್ತೆರಡು ಕೋಟಿ ಹೊನ್ನು, ಐದು ಬಗೆಯ ರತ್ನಗಳು ಎಂಬಿವೆಲ್ಲವುಗಳನ್ನು ಹೊಂದಿದ್ದ ಸುಕುಮಾರಸ್ವಾಮಿ ಎಲ್ಲಾ ರೀತಿಯ ಸುಖಗಳನ್ನು ಅನುಭವಿಸುತ್ತಿದ್ದನು.

ಇವನ ವೈಭವವನ್ನು ನೋಡಲು ಬಂದ ವೃಷಭಾಂಕನು ಸುಕುಮಾರಸ್ವಾಮಿಯನ್ನು ನೋಡಿ ನಾನು ಕಣ್ಣನ್ನು ಪಡೆದದ್ದು ಇಂದು ಸಾರ್ಥಕವಾಯಿತು' ಎಂದುಕೊಂಡನು. ರಾಜನೂ ಸುಕುಮಾರನೂ ಜೊತೆಯಾಗಿ ಆಸನದಲ್ಲಿ ಕುಳಿತ ಸಮಯದಲ್ಲಿ ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸವೆಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನೂ ದೀಪ ನೋಡಿದಾಗ ಕಣ್ಣೀರು ಸುರಿವುದನ್ನೂ ಕಂಡು ಊಟಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗಿ ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದುದು ಅರಸನು ನೋಡಿ ಇದು ಒಂದು ಬಗೆಯ ರೋಗ, ಎಂದು ಭಾವಿಸಿಕೊಂಡನು.

ಅರಸನು ಯಶೋಭದ್ರೆಯನ್ನು ಈ ಕುರಿತು ಏಕೆ ಔಷಧ ಮಾಡಿಸಿಲ್ಲ?" ಎಂದು ಕೇಳಿದಾಗ ಆಕೆ "ಒಡೆಯರೆ, ಅವನಿಗೆ ಇವು ರೋಗಗಳಲ್ಲ. ಮಂತ್ರಾಕ್ಷತೆಯಾಗಿ ಹಾಕಿದ ಬಿಳಿ ಸಾಸವೆಗಳು ಒತ್ತಿದುದರಿಂದ ಸಹಿಸದಾದನು. ಅಲ್ಲದೆ ಯಾವಾಗಲೂ ಮಾಣಿಕ್ಯ ರತ್ನದ ಬೆಳಕಿನಲ್ಲಿ ಅವನು ಇರುವುದರಿಂದ ದೀಪದ ಬೆಳಕಿಗೆ ಸಹಿಸಲಾರದೆ ಅವನ ಕಣ್ಣಿನಲ್ಲಿ ನೀರು ಬರುತ್ತದೆ. ಅದೂ ಅಲ್ಲದೆ ನೀವು ಬಂದ ಸಂದರ್ಭದಲ್ಲಿ ತಾವರೆ ನೈದಿಲೆ ಹೂಗಳ ಸುವಾಸನೆಯಿಂದ ಕೂಡಿದ ಅಕ್ಕಿಯೊಂದಿಗೆ ಬೇರೆ ಅಕ್ಕಿಯನ್ನು ಮಿಶ್ರಮಾಡಿ ಬೇಯಿಸಿದ ಅನ್ನವನ್ನು ಬಡಿಸಿದ್ದರಿಂದ ಅವನು ಸುವಾಸನೆಯ ಅಕ್ಕಿಯ ಅನ್ನವನ್ನು ನುಂಗುತ್ತಿದ್ದನು, ಉಳಿದ ಅನ್ನವನ್ನು ಉಗುಳುತ್ತಿದ್ದನು. ಆದುದರಿಂದಲೇ ಇವನಿಗೆ ಈ ಅವಸ್ಥೆಗಳಾಗಿವೆ" ಎಂದು ಹೇಳಿದಳು.

ಅದನ್ನು ಕೇಳಿ ಅರಸನು ಆಶ್ಚರ್ಯಪಟ್ಟನು. "ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ – ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ "ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರನ್ನಿಟ್ಟನು.

ಮೇಲಿನ ಸಂದರ್ಭಗಳಲ್ಲಿ ಸುಕುಮಾರ ಎಂಬ ಹೆಸರು ಸುಕುಮಾರಸ್ವಾಮಿಗೆ ಅನ್ವರ್ಥವಾಗುತ್ತದೆ.

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡಗುಂ "

ಉ: ಈ ಮೇಲಿನ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದ ವಡ್ಡಾರಾಧನೆ ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕಥೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಜೋಯಿಸರು ಯಶೋಭದ್ರೆಗೆ ಹೇಳಿದ್ದಾರೆ.

ಸಂ: ಸುಕುಮಾರಸ್ವಾಮಿಯು ಯುವಕನಾಗಿ ಎಲ್ಲ ಸುಖಭೋಗಗಳನ್ನು ಅನುಭವಿಸುತ್ತಿದ್ದ ಸಂದರ್ಭದಲ್ಲಿ ಒಬ್ಬ ಜೋಯಿಸನು ಅವರ ಅರಮನೆಗೆ ಬಂದನು. ಅವನು ಈ ಸುಕುಮಾರಸ್ವಾಮಿಯು ಯಾವಾಗ ಋಷಿಗಳ ರೂಪವನ್ನು ನೋಡುವನೋ ಅಂದೇ ಅವನು ತಪಸ್ಸಿಗೆ ತೆರಳುವನು ಎಂದು ಭವಿಷ್ಯ ನುಡಿದನು.

ಸ್ವಾರಸ್ಯ : ಸುಕುಮಾರಸ್ವಾಮಿಯು ಋಷಿಗಳನ್ನು ನೋಡಿದರೆ ಮುಂದೆ ವೈರಾಗ್ಯ ಹೊಂದಬಹುದು ಎನ್ನುವ ಸೂಚನೆ ಮೇಲಿನ ವಾಕ್ಯದಲ್ಲಿ ಮೂಡಿಬಂದಿದೆ.

೨. " ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು "

ಉ: ಈ ಮೇಲಿನ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದ ವಡ್ಡಾರಾಧನೆ ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕಥೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂ: ಅರಸ ವೃಷಭಾಂಕನು ಸುಕುಮಾರಸ್ವಾಮಿಯ ಮನೆಗೆ ಬಂದು ಇಂದ್ರನ ಅರಮನೆಯನ್ನು ಹೋಲುವ ಉಪ್ಪರಿಗೆ ಮನೆಯನ್ನು ಪ್ರವೇಶಿಸಿದನು.ಅಲ್ಲಿನ ವೈಭವವನ್ನು ನೋಡಿ ಅಚ್ಚರಿಗೊಂಡವನಾಗಿ ಮಹಾವೈಭವದಿಂದ ಹಾಸಿಗೆಯ ಮೇಲೆ ಕುಳಿತು ಸುಕುಮಾರನು ಎಲ್ಲಿದ್ದಾನೆ ?ಎಂದು ಕೇಳಿದಾಗ ,ಅವನಿಗೆ ನೀವು ಬಂದಿರುವುದು ಗೊತ್ತಿಲ್ಲ ಎಂದು ಯಶೋಭದ್ರೆಯು ಹೇಳಿದಾಗ ಅವನನ್ನು ಬರಮಾಡಿ ಎಂದು ರಾಜನು ಹೇಳಿದನು. ಯಶೋಭದ್ರೆಯು ಸುಕುಮಾರನಿದ್ದಲ್ಲಿಗೆ ಬಂದು ರಾಜರು ಬಂದಿದ್ದಾರೆ ಬಾ ಹೋಗೋಣ ಎಂದಳು .ಆಗ ಅವನು ರಾಜರೆಂದರೆ ಯಾರು ಎಂದು ಕೇಳಲು ಅವಳು ನಮ್ಮನ್ನು ಆಳುವವರು ಎನ್ನಲು ಸುಕುಮಾರನು ಮೇಲಿನಂತೆ ಹೇಳಿದನು.

ಸ್ವಾರಸ್ಯ : ಸುಕುಮಾರಸ್ವಾಮಿಯು ತಪಸ್ವಿಯನ್ನು ನೋಡಿದರೆ ಅವನೂ ತಪಸ್ವಿಯಾಗಬಹುದೆನ್ನುವ ಭಯದಲ್ಲಿ ಹೊರಪ್ರಪಂಚದ ಅರಿವೆ ಇಲ್ಲದಂತೆ ಬೆಳೆಸಿದ್ದರಿಂದ ರಾಜನ ಆಳ್ವಿಕೆಯ ಬಗ್ಗೆ ಗೊತ್ತಿರದ ಸುಕುಮಾರಸ್ವಾಮಿಯು ಮೇಲಿನಂತೆ ಕೇಳಿದ್ದಾನೆ.

೩. "ಅರ್ಧಾಹಾರಮಂ ನುಂಗುಗುಮರ್ಧಾಹಾರಮನುಗುಳ್ಗುಮದಂ ನೋಡಿ. "

ಉ: ಈ ಮೇಲಿನ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದ ವಡ್ಡಾರಾಧನೆ ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕಥೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂ : ರಾಜನು ಸುಕುಮಾರಸ್ವಾಮಿಯ ಮನೆಗೆ ಬಂದು ಅವನನ್ನು ಅಪ್ಪಿಕೊಂಡು ಶ್ರೇಷ್ಠವಾದ ಆ ಹಾಸಿಗೆಯ ಮೇಲೆ ತನ್ನ ಜೊತೆಯಲ್ಲಿ ಕುಳ್ಳಿರಿಸಿದನು. ಆಗ ಸ್ವಜನರೂ ಸೇವಕರೂ ಬಿಳಿ ಸಾಸುವೆಗಳನ್ನು ಮಂಗಳಕರವೆಂದು ಇಬ್ಬರಿಗೂ ಮಂತ್ರಾಕ್ಷತೆಯನ್ನು ಹಾಕಿದರು. ಆ ಬಿಳಿ ಸಾಸುವೆಕಾಳುಗಳು ಸುಕುಮಾರಸ್ವಾಮಿಯ ಆಸನದಲ್ಲಿ ಒತ್ತಿದುದರಿಂದ ಸೊಂಟವನ್ನು ಅತ್ತಿತ್ತ ಹೊರಳಾಡಿಸುತ್ತಿದ್ದುದನ್ನೂ ದೀಪ ನೋಡಿದಾಗ ಕಣ್ಣೀರು ಸುರಿವುದನ್ನೂ ಕಂಡು ಈತನಿಗೆ ರೋಗಗಳಿವೆಯೆಂದು ಭಾವಿಸಿಕೊಂಡಿದ್ದನು. ಅಲ್ಲದೆ ರಾಜನು ಸುಕುಮಾರನೊಂದಿಗೆ ಊಟದ ತಟ್ಟೆಯ ಮುಂದೆ ಕುಳಿತುಕೊಂಡು ಹಲವು ವಿಧದ ಸವಿಯಾದ ಆಹಾರವನ್ನು ಊಟಮಾಡುತ್ತಿರಲು, ಸುಕುಮಾರಸ್ವಾಮಿ ಆಹಾರದ ಅರ್ಧಾಂಶವನ್ನು ನುಂಗುತ್ತಿದ್ದನು, ಇನ್ನುಳಿದ ಅರ್ಧಾಂಶ ಆಹಾರವನ್ನು ಉಗುಳುತ್ತಿದ್ದನು. ಅದನ್ನು ಅರಸನು ನೋಡಿ "ಇದು ಒಂದು ಬಗೆಯ ರೋಗ, ಊಟದ ಮೇಲೆ ರುಚಿಯಿಲ್ಲದುದು" ಎಂದು ಭಾವಿಸಿಕೊಂಡನು.

ಸ್ವಾರಸ್ಯ : ಸುಕುಮಾರಸ್ವಾಮಿಯು ಬೆಳೆದ ರೀತಿ ಗೊತ್ತಿರದ ರಾಜನು ಅವನ ನಡೆಯನ್ನು ನೋಡಿ ಅವನಿಗೆ ಒಂದು ಬಗೆಯ ರೋಗ ಇದೆ ಎಂದು ಭಾವಿಸುವ ರೀತಿ ಇಲ್ಲಿ ವ್ಯಕ್ತವಾಗಿದೆ.

೪. " ಅವಂತಿ ಸುಕುಮಾರನೆಂದು ಪೆಸರನಿಟ್ಟಂ "

ಉ: ಈ ಮೇಲಿನ ವಾಕ್ಯವನ್ನು ಶಿವಕೋಟ್ಯಾಚಾರ್ಯರು ಬರೆದ ವಡ್ಡಾರಾಧನೆ ಎಂಬ ಕೃತಿಯಿಂದ ಆರಿಸಲಾದ ಸುಕುಮಾರಸ್ವಾಮಿ ಕಥೆ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಸುಕುಮಾರಸ್ವಾಮಿಯ ಮನೆಗೆ ಬಂದ ರಾಜನು ಸುಕುಮಾರಸ್ವಾಮಿಯ ಕೆಲವು ವರ್ತನೆಗಳನ್ನು ನೋಡಿ ಅವನಿಗೆ ಯಾವುದೋ ರೋಗ ಇದೆ ಎಂದು ಭಾವಿಸಿ ಅವನ ತಾಯಿ ಯಶೋಭದ್ರೆಯನ್ನು ವಿಚಾರಿಸಿದನು.ಆಗ ಅವಳು ಸುಕುಮಾರಸ್ವಾಮಿಯು ಸುಖಭೋಗಗಳಲ್ಲಿ ಬೆಳೆದುದರಿಂದ ಹಾಗೆ ವರ್ತಿಸಿದನು ಎಂದು ವಾಸ್ತವವನ್ನು ವಿವರಿಸಿದಳು. ಆಗ ರಾಜನು "ಈತನ ಒಂದು ಕ್ಷಣದ ಸುಖ-ಭೋಗಗಳಿಗೆ ನನ್ನ ಇಡೀ ಅರಸುತನದ ಕಾಲದಲ್ಲಿ ಅನುಭವಿಸಿದ ಭೋಗ – ಉಪಭೋಗಗಳು ಸಮಾನವಾಗುವುದಿಲ್ಲ. ಆದುದರಿಂದ "ಲೋಕದಲ್ಲಿ ನಿಜವಾಗಿಯೂ ಈತನೇ ಸುಖಿ" ಎಂದು ಪ್ರೀತಿಗೊಂಡವನಾಗಿ ಅರಸನು ಅವನಿಗೆ 'ಅವಂತಿ ಸುಕುಮಾರ' ಎಂದು ಹೆಸರನ್ನಿಟ್ಟನು ಎನ್ನುವಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ: ರಾಜನು ಸುಕುಮಾರಸ್ವಾಮಿಯ ವೈಭವವನ್ನು ನೋಡಿ ಅವನ ವೈಭವದ ಮುಂದೆ ತನ್ನ ವೈಭವ ಏನೂ ಅಲ್ಲ ಎಂದು ನಿರ್ಧರಿಸುವುದು ಇಲ್ಲಿನ ಸ್ವಾರಸ್ಯವಾಗಿದೆ.

## ಭಾಷಾ ಚಟುವಟಿಕೆ

## ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ನಾಮಪದ ಎಂದರೇನು ? ಉದಾಹರಿಸಿರಿ.

ಉ: ನಾಮ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರಿ ಆಗುವ ಪದವೇ ನಾಮಪದ. ಉದಾ ಭೀಮ ಎನ್ನುವುದು ನಾಮಪ್ರಕೃತಿ, ಅನ್ನು ಎನ್ನುವುದು ವಿಭಕ್ತಿ ಪ್ರತ್ಯಯ . ಭೀಮನನ್ನು ಎನ್ನುವುದು ನಾಮಪದ .

೨. ನಾಮವಾಚಕಗಳ ವಿಧಗಳನ್ನು ಪಟ್ಟಿಮಾಡಿರಿ.

ಉ: ನಾಮವಾಚಕಗಳನ್ನು ವಸ್ತುವಾಚಕ,ಗುಣವಾಚಕ,ಸಂಖ್ಯಾವಾಚಕ ,ಸಂಖ್ಯೇಯವಾಚಕ ,ಭಾವನಾಮ, ಪರಿಮಾಣವಾಚಕ ,ದಿಗ್ವಾಚಕ ,ಸರ್ವನಾಮ ಎಂಬ ಗುಂಪುಗಳಾಗಿ ವಿಂಗಡಿಸಬಹುದು.

೩. ಕೃದಂತ ಎಂದರೇನು ? ಉದಾಹರಣೆಗಳನ್ನು ಬರೆಯಿರಿ.

ಉ:ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುತ್ತವೆ. ಇವುಗಳಲ್ಲಿ ಮೂರು ವಿಧ .

ಕೃದಂತನಾಮ : ಮಾಡಿದ ,ತಿನ್ನುವ

ಕೃದಂತ ಭಾವನಾಮ : ಮಾಟ ,ತಿನ್ನುವಿಕೆ

ಕೃದಂತಾವ್ಯಯ: ಮಾಡಿ ,ತಿಂದು

೪. ಕೊಟ್ಟಿರುವ ಪದಗಳನ್ನು ಕೃದಂತನಾಮ, ಕೃದಂತಭಾವನಾಮ, ಕೃದಂತಾವ್ಯಯಗಳಾಗಿ ವಿಂಗಡಿಸಿ ಬರೆಯಿರಿ.

ಉ: ಮಾಟ,ಓಡಿದ ,ತಿಂದ,ನೋಡಿ ,ಆಟ,ನೋಡಿದ .

## ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.

೧. ವರ್ತಮಾನ ಕೃದಂತನಾಮಕ್ಕೆ ಈ ಪದವು ಉದಾಹರಣೆಯಾಗಿದೆ.

ಅ)ಬರೆಯುವ ಆ)ಬರೆದ ಇ)ಬರೆಯದ ಈ )ಬರೆಹ

ಉ: ಅ ) ಬರೆಯುವ

೨. ' ನೋಟ ' ಎಂಬುದು ಈ ವ್ಯಾಕರಣಾಂಶವಾಗಿದೆ.

ಅ)ಕೃದಂತನಾಮ ಆ) ಕೃದಂತಭಾವನಾಮ ಇ)ಕೃದಂತಾವ್ಯಯ ಈ) ತದ್ಧಿತಾಂತ

ಉ: ಆ) ಕೃದಂತಭಾವನಾಮ

೩. ಇವುಗಳಲ್ಲಿ ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದ .

ಅ) ತೊಡುಗೆ ಆ)ತಿನ್ನುವಿಕೆ ಇ)ನಡೆಯುವ ಈ )ಮಾಡಲಿಕ್ಕೆ

ಉ: ಈ) ಮಾಡಲಿಕ್ಕೆ

೪. 'ಲೋಕದೊಳ್ ' ಎಂಬುದು ಈ ವಿಭಕ್ತಿಯಲ್ಲಿದೆ.
ಅ)ಪ್ರಥಮಾ ಆ)ತೃತೀಯಾ ಇ)ಪಂಚಮೀ ಈ) ಸಪ್ತಮೀ
ಉ: ಈ )ಸಪ್ತಮೀ

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೆಯ ಪದ ಬರೆಯಿರಿ.**

೧. ನದಿ, ಪರ್ವತ : ರೂಢನಾಮ : : ವ್ಯಾಪಾರಿ ,ವಿಜ್ಞಾನಿ : __ (ಅನ್ವರ್ಥನಾಮ)
೨.ನಾನು ,ನೀನು :ಪುರುಷಾರ್ಥಕ ಸರ್ವನಾಮ : : ಯಾರು ?ಏನು ?: __(ಪ್ರಶ್ನಾರ್ಥಕ ಸರ್ವನಾಮ)_
೩. ಅಷ್ಟು :ಪರಿಮಾಣವಾಚಕ : : ಹನ್ನೆರಡು : _ (ಸಂಖ್ಯಾವಾಚಕ)
೪. ಪೊಳಲ್ : ಪಟ್ಟಣ : : ಕಸವರ : ___ (ಬಂಗಾರ )

| | |
|---|---|
| **ಘಟಕ ಪರೀಕ್ಷೆ –೧** ೧೫ ಅಂಕಗಳು<br>ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೪*೧=೪<br>೧. ಸುಕುಮಾರಸ್ವಾಮಿಯ ತಂದೆತಾಯಿಗಳ ಹೆಸರೇನು ?<br>೨. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು ?೩. ನೈಮಿತ್ತಿಕನು ಸುಮಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು ?<br>ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು ?<br>ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.೨*೨=೪<br>೧. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು ?<br>೨.ಸುಕುಮಾರಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು ?<br>ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>'ಸುಕುಮಾರ' – ಎಂಬ ಹೆಸರು ಸುಕುಮಾರ ಸ್ವಾಮಿಗೆ ಹೇಗೆ ಅನ್ವರ್ಥವಾಗುತ್ತದೆ ?ವಿವರಿಸಿ.<br>**ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ ೩ ಅಂಕಗಳು**<br>೧. " ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡಗುಂ " | **ಘಟಕ ಪರೀಕ್ಷೆ –೨** **೨೦ ಅಂಕಗಳು**<br>ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೧ ಅಂಕ<br>೧. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು ?<br>ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>೧. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು ?<br>೨. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು ?ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ .<br>೧. ಸುಕುಮಾರಸ್ವಾಮಿಯ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ ೪*೩ ೧೨ ಅಂಕಗಳು<br>೧." ಅವಂತಿ ಸುಕುಮಾರನೆಂದು ಪೆಸರನಿಟ್ಟಂ "<br>೨."ಅರ್ಧಾಹಾರಮಂನುಂಗುಗುಮರ್ಧಾಹಾರಮನುಗುಳ್ಗು ಮದಂ ನೋಡಿ. "<br>೩." ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು "<br>ಶಿವಕೋಟ್ಯಾಚಾರ್ಯನ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು |

# ಪದ್ಯಪಾಠ -೧ ಸಂಕಲ್ಪಗೀತೆ -ಜಿ.ಎಸ್. ಶಿವರುದ್ರಪ್ಪ



## ಕೃತಿಕಾರರ ಪರಿಚಯ

ಜಿ. ಎಸ್. ಶಿವರುದ್ರಪ್ಪ ಎಂದು ಪ್ರಸಿದ್ಧರಾಗಿರುವ ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ನವರ ಕಾಲ ೭-೨-೧೯೨೬ ರಿಂದ ೨೩-೧೨-೨೦೧೩. ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ದವರು ಇವರು ಸಾಮಗಾನ,ಚೆಲುವು ಒಲವು ,ದೇವ ಶಿಲ್ಪಿ,ದೀಪದ ಹೆಜ್ಜೆ ,ಅನಾವರಣ,ವಿಮರ್ಶೆಯ ಪೂರ್ವಪಶ್ಚಿಮ , ಮಾಸ್ಕೋದಲ್ಲಿ ಇಪ್ಪತ್ತೆರಡುದಿನಗಳು,ಸೌಂದರ್ಯಸಮೀಕ್ಷೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ .ಇವರ ಕಾವ್ಯಾರ್ಥ ಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಇವರು ನಾಡೋಜ , ರಾಷ್ಟ್ರಕವಿ ಮತ್ತು ಪಂಪ ಪ್ರಶಸ್ತಿಗಳನ್ನು ಪಡೆದಿದ್ದಾರೆ.

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?

ಉ: ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲಿ ಮುನ್ನಡೆಸಬೇಕು.

೨.ನದೀಜಲಗಳು ಏನಾಗಿವೆ ?

ಉ: ನದೀಜಲಗಳು ಕಲುಷಿತವಾಗಿವೆ.

೩.ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

ಉ: ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

೪.ಕಾಡುಮೇಡುಗಳ ಸ್ಥಿತಿ ಹೇಗಿದೆ?

ಉ: ಕಾಡುಮೇಡುಗಳು ಬರಡಾದ ಸ್ಥಿತಿ ತಲುಪಿವೆ.

೫.ಯಾವ ಎಚ್ಚರದೊಳು ಬದುಕಬೇಕಿದೆ?

ಉ: ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

## ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

ಉ: ಅಂಧಕಾರವನ್ನು ಹೋಗಲಾಡಿಸಲು ದೀಪದ ಅವಶ್ಯಕತೆ ಇರುವಂತೆ ಬದುಕಿನಲ್ಲಿ ಅಥವ ಮನಸ್ಸಿನಲ್ಲಿ ಕವಿದ ನಿರಾಶೆಯ ,ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಮತ್ತು ಪ್ರೀತಿಯ ಹಣತೆಯನ್ನು ಹಚ್ಚಬೇಕು.ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು.ಅಸ್ಪಷ್ಟತೆಯಿಂದ ಸ್ಪಷ್ಟತೆಯೆಡೆಗೆ ದೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಬೇಕು.ಅಜ್ಞಾನ,ನಿರಾಶೆಗಳ ದಾರಿಯಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ,ಪ್ರೀತಿಯ ಹಣತೆಯ ಹಚ್ಚಿ,ಸಮಸ್ಯೆಗಳಿಂದ ಬದುಕಿನ ಹಡಗು ಮುಳುಗಿ ಹೋಗದಂತೆ ಎಚ್ಚರದಿಂದ ಜೀವನವನ್ನು ನಡೆಸೋಣ.

೨.ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ ?

ಉ: ಕಲುಷಿತವಾದ ನದಿ ನೀರನ್ನುಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ ಭಾವ ,ಅಸಹನೆ ,ದ್ವೇಷ ,ಅಸೂಯೆ ,ಹಿಂಸೆ ,ಭಯ ಸಂಶಯ ಮೊದಲಾದವುಗಳನ್ನು ಪ್ರೀತಿ ,ವಿಶ್ವಾಸ ,ಭರವಸೆಗಳೆನ್ನುವ ಮುಂಗಾರಿನ ಮಳೆ ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನಿಸಬೇಕಿದೆ.ಒಣಗಿ ಹೋಗಿರುವ ಗಿಡಮರಗ ಳು ವಸಂತ ಕಾಲದಿಂದ ಚಿಗುರುವ ಹಾಗೆ ಮನುಷ್ಯನ ಮನಸ್ಸಿನಲ್ಲಿ ಕವಿದ ಅಥವಾ ಸಮಾಜದಲ್ಲಿ ತುಂಬಿದ ನಿರಾಶೆಯೆನ್ನುವ ಒಣಗಿ ಹೋದ ಗಿಡಮರಗಳನ್ನು ಪ್ರೀತಿ,ವಿಶ್ವಾಸ,ಆತ್ಮವಿಶ್ವಾಸ,ಭರವಸೆ ಗಳೆನ್ನುವ ವಸಂತಕಾಲವನ್ನು ಮೂಡಿಸಿ ಸಂತೃಪ್ತಿ ಎನ್ನುವ ಹೊಸಚಿಗುರನ್ನು ಮೂಡಿಸೋಣ.

೩.ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?

ಉ: ಜಾತಿ,ಮತ,ಮೇಲು ಕೀಳು,ಅಸೂಯೆಯಿಂದ ಕೂಡಿದ ಪೈಪೋಟಿಗಳು ,ದ್ವೇಷ ಅಸಹನೆಯ ಭಾವಗಳು ಮನುಷ್ಯರು ಪರಸ್ಪರ ಒಂದುಗೂಡಿ ಪ್ರೀತಿ ವಿಶ್ವಾಸ ದಿಂದ ಬಾಳಲು ಇರುವ ಅಡ್ಡಗೋಡೆಗಳಾಗಿವೆ.ಅಂತಹ ವೈರುಧ್ಯದ ಭಾವನೆಗಳನ್ನು ತೊಡೆದು ಹಾಕಬೇಕಾದ ಅಗತ್ಯವಿದೆ.ಪರಸ್ಪರರನ್ನು ದ್ವೇಷಿಸುವ ,ಅನುಮಾನದಿಂದ ನೋಡುವ ಮನುಷ್ಯ ಮನುಷ್ಯರಲ್ಲಿ ಕಂದಕ ನಿರ್ಮಾಣ ಮಾಡುವ ಭಾವಗಳನ್ನು ಕೆಡವಿ ಹಾಕಿ ಪರಸ್ಪರರಲ್ಲಿ ಪ್ರೀತಿ,ಕರುಣೆ,ನಂಬಿಕೆ,ಆತ್ಮಸ್ಥೈರ್ಯ,ಮಾನವೀಯ ಭಾವಗಳನ್ನು ನಿರ್ಮಾಣ ಮಾಡಿ ಎಲ್ಲರನ್ನೂ ಒಂದುಗೂಡಿಸುವ ಸೇತುವೆಯಾಗುವ ಪ್ರಯತ್ನ ಮಾಡಬೇಕಿದೆ.

೪.ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?

ಪ್ರತಿಯೊಂದು ಮತಕ್ಕೂ ಅದರದೇ ಆದ ದಾರಿಯಿದೆ ಎನ್ನುವ ಎಚ್ಚರದಲ್ಲಿ ಬದುಕೋಣ.ಭಿನ್ನತೆಯಿದ್ದರೂ ಸಹ ಭಾವನೆ ಒಂದೆ ಎಂಬ ಅರಿವು ಮೂಡಿಸಲು ಯತ್ನಿಸೋಣ.ಪರಸ್ಪರರಲ್ಲಿ ಮೂಡಿರುವ ಸಂಶಯ ,ಅಸಹನೆ , ಭಯ ಗಳಿಂದ ಉಂಟಾಗಿರುವ ನಿರಾಶೆಯನ್ನು ಹೋಗಲಾಡಿಸಿ ನಾಳಿನ ಭವಿಷ್ಯದ ಕುರಿತಾಗಿ ಹೊಸ ಕನಸುಗಳನ್ನು ಬಿತ್ತುವ ,ಭರವಸೆಗಳನ್ನು ಮೂಡಿಸುವ ,ಎಲ್ಲರೂ ಒಂದಾಗಿ ಬದುಕುವಂತೆ ಸಮಾಜದಲ್ಲಿ ಉತ್ಸಾಹ,ಆದರ್ಶಗಳ ವಾತಾವರಣ ಬೆಳೆಯುವಂತೆ ಮಾಡೋಣ.ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಸಂಕಲ್ಪ ಮಾಡೋಣ.

## ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ ?

ಉ: ಜೀವನದಲ್ಲಿ ಧನಾತ್ಮಕ ಭಾವನೆಯನ್ನು,ಧೃಢ ಸಂಕಲ್ಪವನ್ನು ಹೊಂದಿರಬೇಕು.ಕಾರಣಾಂತರಗಳಿಂದ ನಮ್ಮಲ್ಲಿ ಮನೆ ಮಾಡಿರುವ ಅಜ್ಞಾನ,ನಿರಾಶೆ,ಭಯ ಹಿಂಸೆಗಳೆನ್ನವ ಕತ್ತಲನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚಬೇಕು,ಸಮಸ್ಯೆಗಳಿಂದ ನಿರಾಶೆಗಳಿಂದ ಹೊಯ್ದಾಡುತ್ತಿರುವ ಜೀವನವೆನ್ನುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ ಸಂಕಲ್ಪವನ್ನು ಮಾಡಬೇಕು.ಸುತ್ತಲಿನ ಸಮಾಜದಲ್ಲಿ ತುಂಬಿರುವ ಹಿಂಸೆ, ಬ್ರಷ್ಟಾಚಾರ ,ಜಾತೀಯತೆ ,ಶೋಷಣೆ ಮೊದಲಾದ ಅಸಹನೀಯವಾದ ಭಾವಗಳನ್ನು ತೊಡೆದುಹಾಕಲು ಸ್ವತಃ ನಮ್ಮಲ್ಲಿ ಮೊದಲು ಮೌಲ್ಯಗಳನ್ನು ರೂಢಿಸಿಕೊಂಡು ಆ ಮೂಲಕ ಸಮಾಜದಲ್ಲಿ ತುಂಬಿರುವ ಕೊಳಕು ತೊಳೆದುಹಾಕಲು ,ಸಮಾಜವೆನ್ನುವ ನದೀಜಲವನ್ನು ಪರಿಶುದ್ಧಗೊಳಿಸುವ ಮುಂಗಾರಿನ ಮಳೆಯಾಗುವ ಆಶಯವನ್ನು ಹೊಂದೋಣ.ನಿರಾಶೆಯಿಂದ ತುಂಬಿರುವ ಸಮಾಜದ ಜನರಲ್ಲಿ ಹೊಸ ಕನಸುಗಳನ್ನು ಚಿಗುರಿಸೋಣ.ಬಿದ್ದುಹೋಗಿರುವ ಆಶಾ ಗೋಪುರವನ್ನು ಮೇಲಕ್ಕೆತ್ತಿ ಹೊಸಭರವಸೆಗಳನ್ನು ಮೂಡಿಸಲು ಪ್ರಯತ್ನಿಸೋಣ.ಮನುಷ್ಯ ಮನುಷ್ಯರ ನಡುವೆ ನೆಲೆಸಿರುವ ಅಸಮಾನತೆ ,ಮತಾಂಧತೆ ಮೊದಲಾದ ಭಾವನೆಗಳನ್ನು ಬೀಳಿಸಿ ಎಲ್ಲರನ್ನೂ ಒಂದುಗೂಡಿಸುವ ಏಕತೆಯ ಸೇತುವೆಯಾಗಲು ಪ್ರಯತ್ನಿಸೋಣ.ಎಲ್ಲ ಧರ್ಮಗಳೂ ಹೇಳುವ ನೀತಿ ಒಂದೇ

ಎನ್ನುವ ಎಚ್ಚರವನ್ನು ಬೆಳೆಸಿಕೊಂಡು ಎಲ್ಲರೂ ಕೂಡಿ ಬಾಳಲು ಪ್ರಯತ್ನಿಸೋಣ.ನಾಳೆ ಏನೋ ಹೇಗೋ ಎಂಬ ಭಯ ಸಂಶಯವನ್ನು ಹೋಗಲಾಡಿಸಿ ಹೊಸ ಕನಸುಗಳನ್ನು ಅದನ್ನು ಈಡೇರಿಕೊಳ್ಳುವ ಛಲವನ್ನು ಮೂಡಿಸಲು ಪ್ರಯತ್ನಿಸೋಣ ಇವೇ ಮೊದಲಾದ ಸಂಕಲ್ಪಗಳನ್ನು ಕೈಗೊಳ್ಳಬೇಕೆಂದು ಕವಿ ಜಿ.ಎಸ್.ಶಿವರುದ್ರಪ್ಪನವರ ಆಶಯವಾಗಿದೆ.

೨.ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ಉ: ಸಂಕಲ್ಪದಿಂದ ಧೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದೂ ಯಾವುದೂ ಇಲ್ಲ .ಪ್ರತಿಫಲದ ಅಪೇಕ್ಷೆಯಿಲ್ಲದೇ ಕಾರ್ಯನಿರ್ವಹಿಸುವ ಮೂಲಕ ಸಮಾಜದಲ್ಲಿ ತುಂಬಿರುವ ಅಜ್ಞಾನ,ಹಿಂಸೆಗಳ ಕತ್ತಲೆಯನ್ನು ಪ್ರೀತಿಯ ಹಣತೆಯನ್ನು ಹಚ್ಚುವ ಮೂಲಕ ಹೋಗಲಾಡಿಸಿ ಹಲವು ತುಮುಲಗಳಿಂದ ಹೊಯ್ದಾಡುತ್ತಿರುವ ಬದುಕಿಗೆ ಭದ್ರತೆ ಕಲ್ಪಿಸುವತ್ತ ಕಾರ್ಯೋನ್ಮುಖರಾಗಬೇಕು.ನಮ್ಮ ಸುತ್ತಮುತ್ತಲೂ ತುಂಬಿರುವ ಹಿಂಸೆ,ಅನಾಚಾರ ,ಶೋಷಣೆ ಗಳನ್ನು ತೊಡೆದುಹಾಕಿ ಸ್ವಸ್ಥ ಮನಸಿನ ಸುಂದರ ವಾತಾವರಣ ಕಲ್ಪಸಲು ಯತ್ನಿಸಬೇಕಿದೆ.ಏನು ಮಾಡಿದರೂ ನಿರರ್ಥಕ ಎಂಬ ಭಾವನೆಯಿಂದ ಹೊರತಂದು ಭರವಸೆಗಳನ್ನು ಮೂಡಿಸಿ ನಮ್ಮ ಮಧ್ಯೆ ಮೂಡಿರುವ ಪ್ರತ್ಯೇಕತೆಯನ್ನು ಇಲ್ಲವಾಗಿಸಿ ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಸಮಾಜದ ಜನರಲ್ಲಿ ಮೂಡಿಸಬೇಕಿದೆ.ಎಲ್ಲ ಧರ್ಮಗಳ ಉದ್ದೇಶವೂ ಜೀವನದ ಸನ್ಮಾರ್ಗವನ್ನು ತೋರಿಸುವುದೇ ಆಗಿದೆ.ಹಾಗಾಗಿ ಎಲ್ಲ ಧರ್ಮಗಳನ್ನೂ ಗೌರವಿಸುವ ಎಲ್ಲರೂ ಒಂದಾಗಿ ಬಾಳುವ ಸದಾಶಯವನ್ನು ರೂಪಿಸಲು ಯತ್ನಿಸಬೇಕು.ನಾಳಿನ ಭವಿಷ್ಯದ ಕುರಿತಾದ ಸಂಶಯ ಮತ್ತು ಭಯದ ಭಾವಗಳನ್ನು ಹೋಗಲಾಡಿಸಿ ಹೊಸ ಕನಸುಗಳನ್ನು ಬಿತ್ತುವ ಧೃಢ ಸಂಕಲ್ಪ ಮಾಡಬೇಕು.ಜೀವನದಲ್ಲಿ ಧನಾತ್ಮಕ ಭಾವನೆಯನ್ನು ,ಧೃಢ ಸಂಕಲ್ಪವನ್ನು ಹೊಂದಿರಬೇಕು.ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದ ಹಾಗೆ.ಸಾಧಕನು ತಾನು ಕಂಡ ಕನಸನ್ನು ಅದೆಷ್ಟೇ ತೊಡಕುಗಳೂ ಬಂದರೂ, ಅಡ್ಡಿ ಆತಂಕಗಳು ಎದುರಾದರೂ ನನಸಾಗಿಸುತ್ತಾನೆ.ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ.ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ.ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ಧೃಢನಿಷ್ಠೆಯಿಂದ ಸಾಷ್ಟದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂದು ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.

## ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.

೧.''ಪ್ರೀತಿಯ ಹಣತೆಯ ಹಚ್ಚೋಣ.''

ಉ: ಈ ಮೇಲಿನ ವಾಕ್ಯವನ್ನುಡಾ|| ಜಿ.ಎಸ್.ಶಿವರುದ್ರಪ್ಪನವರು ಬರೆದ 'ಸಂಕಲ್ಪಗೀತೆ' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನುಕವಿ ಹೇಳಿದ್ದಾರೆ.

ಸಂದರ್ಭ :ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು.ಅಸ್ಪಷ್ಟತೆಯಿಂದ ಸ್ಪಷ್ಟತೆಯೆಡೆಗೆ ದೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಬೇಕು.ಅಜ್ಞಾನ,ನಿರಾಶೆಗಳ ದಾರಿಯಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ,ಪ್ರೀತಿಯ ಹಣತೆಯ ಹಚ್ಚಿ,ಸಮಸ್ಯೆಗಳಿಂದ ಬದುಕಿನ ಹಡಗು ಮುಳುಗಿ ಹೋಗದಂತೆ ಎಚ್ಚರದಿಂದ ಜೀವನವನ್ನು ನಡೆಸಬೇಕೆಂದು ಕವಿ ಆಶಿಸಿದ್ದಾರೆ.

ಸ್ವಾರಸ್ಯ : ಜೀವನದಲ್ಲಿ ಪರಸ್ಪರ ಪ್ರೀತಿ ವಿಶ್ವಾಸದ ಅರಿವು ಹಾಗೂ ಅಗತ್ಯತೆಯ ಕುರಿತು ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೨."ಮುಂಗಾರಿನ ಮಳೆಯಾಗೋಣ."

ಉ: ಈ ಮೇಲಿನ ವಾಕ್ಯವನ್ನು ಡಾ||ಜಿ.ಎಸ್.ಶಿವರುದ್ರಪ್ಪನವರು ಬರೆದ 'ಸಂಕಲ್ಪಗೀತೆ' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಇದನ್ನು ಕವಿ ಹೇಳಿದ್ದಾರೆ.

ಸಂದರ್ಭ : ಕಲುಷಿತವಾದ ನದಿ ನೀರನ್ನುಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ ಭಾವ ,ಅಸಹನೆ ,ದ್ವೇಷ ,ಅಸೂಯೆ ,ಹಿಂಸೆ ,ಭಯ ಸಂಶಯ ಮೊದಲಾದವುಗಳನ್ನು ಪ್ರೀತಿ ,ವಿಶ್ವಾಸ ,ಭರವಸೆಗಳೆನ್ನುವ ಮುಂಗಾರಿನ ಮಳೆ ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನಿಸೋಣವೆಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಬರಿದಾಗಿರುವ ಭೂಮಿಯನ್ನು ಹಸಿರಾಗಿಸಲು ,ಕ್ರೌರ್ಯ ,ಅಸಹನೆ, ದ್ವೇಷಗಳಿಂದ ತುಂಬಿರುವ ಮನುಷ್ಯನ ಮನಸ್ಸಿನ ಕೊಳೆ ಹೋಗಿಸಲು ಮುಂಗಾರಿನ ಮಳೆಯಂತಾಗಬೇಕು ಎಂಬ ಸಂದೇಶ ಈ ವಾಕ್ಯದಲ್ಲಿದೆ.

೩."ಹೊಸ ಭರವಸೆಗಳ ಕಟ್ಟೋಣ."

ಉ: ಈ ಮೇಲಿನ ವಾಕ್ಯವನ್ನು ಡಾ||ಜಿ.ಎಸ್.ಶಿವರುದ್ರಪ್ಪನವರು ಬರೆದ 'ಸಂಕಲ್ಪಗೀತೆ' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ನಿರ್ಮಿಸುವುದು ಕಷ್ಟ.ಆದರೆ ಅದನ್ನೇ ಕ್ಷಣ ಮಾತ್ರದಲ್ಲಿ ನಾಶ ಮಾಡಬಹುದು.ಬಿದ್ದು ಹೋಗಿರುವ ನಿರೀಕ್ಷೆಯ ಆಶಾಸೌಧವನ್ನು ಹೊಸ ಭರವಸೆಗಳ ಮೂಲಕ ಮತ್ತೆ ನಿಲ್ಲಿಸಬೇಕಾದ ಪರಿಸ್ಥಿತಿಯ ಅನಿವಾರ್ಯತೆ ಇದೆ.ಮಾನಸಿಕವಾಗಿ ಅಧಃಪತನಕ್ಕೆ ಕುಸಿದು ಹೋಗಿರುವ ಜನರಲ್ಲಿ ಅವರಲ್ಲಿರುವ ಭಯ ಬೀತಿಯ ಭಾವವನ್ನು ತೊಡೆದು ಹಾಕಿ ಧೈರ್ಯ ವನ್ನು ತುಂಬಲು ಪ್ರಯತ್ನಿಸೋಣವೆಂದು ಕವಿ ಆಶಿಸಿದ್ದಾರೆ.

ಸ್ವಾರಸ್ಯ : ಭರವಸೆಯೇ ಜೀವಿಗಳನ್ನು ಬದುಕುವಂತೆ ಮಾಡುವುದು. ನಾಳಿನ ಕುರಿತಾದ ಭರವಸೆಗಳಿಲ್ಲದೇ ನಿರಾಶೆಯಿಂದ ಬದುಕುವುದು ಅಸಾಧ್ಯ .ಆ ಭರವಸೆ ಮುಡಿಸುವ ಕಾರ್ಯವಾಗಬೇಕಿದೆ ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೪."ಹೊಸ ಎಚ್ಚರದೊಳು ಬದುಕೋಣ."

ಉ: ಈ ಮೇಲಿನ ವಾಕ್ಯವನ್ನುಡಾ|| ಜಿ.ಎಸ್.ಶಿವರುದ್ರಪ್ಪನವರು ಬರೆದ 'ಸಂಕಲ್ಪಗೀತೆ' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :ಪ್ರತಿಯೊಂದು ಮತಕ್ಕೂ ಅದರದೇ ಆದ ದಾರಿಯಿದೆ ಎನ್ನುವ ಎಚ್ಚರದಲ್ಲಿ ಬದುಕೋಣ.ಎಲ್ಲ ಧರ್ಮಗಳನ್ನೂ ,ಎಲ್ಲ ಧರ್ಮಗಳ ಜನರನ್ನೂ ಪರಸ್ಪರ ಗೌರವಿಸುವ ಭಾವನೆ ಬೆಳೆಸಿಕೊಳ್ಳೋಣ.ಭಿನ್ನತೆಯಿದ್ದರೂ ಸಹ ಭಾವನೆ ಒಂದೆ ಎಂಬ ಅರಿವು ಮೂಡಿಸಲು ಯತ್ನಿಸೋಣ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಸಮಾಜದಲ್ಲಿ ಸಾಮರಸ್ಯದ ಬಾಳ್ವೆಗೆ ಪರಸ್ಪರ ಧಾರ್ಮಿಕ ಸಾಮರಸ್ಯ ಅತೀ ಅಗತ್ಯವಾದುದು ಎಂಬ ಎಚ್ಚರಿಕೆಯ ಸಂದೇಶ ಇಲ್ಲಿ ವ್ಯಕ್ತವಾಗಿದೆ.

## ಬಿಟ್ಟ ಜಾಗವನ್ನು ಸೂಕ್ತ ಪದದಿಂದ ತುಂಬಿ.

೧. 'ಸಂಕಲ್ಪ ಗೀತೆ 'ಪದ್ಯವನ್ನು ----------- ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. (ಎದೆ ತುಂಬಿ ಹಾಡಿದೆನು )

೨. ಕತ್ತಲೆಯೊಳಗೆ ಪ್ರೀತಿಯ--------- ಹಚ್ಚೋಣ.(ಹಣತೆಯ )

೩. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ -------- ಕಟ್ಟೋಣ.(ಭರವಸೆಗಳ)

೪. ನಾಳಿನ ಕನಸನು -------- ನಲ್ಲಿ ಬಿತ್ತೋಣ.(ಭಯ ಸಂಶಯದೊಳು ಕಂದಿದ ಕಣ್ಣು)

೫. ಜಿ.ಎಸ್. ಶಿವರುದ್ರಪ್ಪನವರು ------ಯಲ್ಲಿ ಸಮಾವೇಶಗೊಂಡ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.ದಾವಣಗೆರೆ (೧೯೯೨,೬೧ ನೇ)

ಭಾಷಾ ಚಟುವಟಿಕೆ

೧. ನೀಡಿರುವ ಪದಗಳ ಧಾತುಗಳನ್ನು ಗುರುತಿಸಿ ಬರೆಯಿರಿ .ನಿಲ್ಲಿಸು , ನಡೆಸು , ಹಚ್ಚುವುದು, ಮುಟ್ಟೋಣ, ಕಟ್ಟುವುದು, ಆಗೋಣ

ನಿಲ್ಲಿಸು –ನಿಲ್ಲು ಹಚ್ಚುವುದು–ಹಚ್ಚು ಮುಟ್ಟೋಣ –ಮುಟ್ಟು ಕಟ್ಟುವುದು–ಕಟ್ಟು ,ಆಗುವುದು–ಆಗು ನಡೆಸು –ನಡೆ

೨. ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಬರೆಯಿರಿ.

ಪ್ರೀತಿಯ ,ಬಿರುಗಾಳಿಗೆ,ಜಲಕ್ಕೆ,ಬಿದ್ದುದನ್ನು.ಭರವಸೆಗಳ

ಪ್ರೀತಿಯ –ಅ–ಷಷ್ಠಿ ಬಿರುಗಾಳಿಗೆ– ಗೆ –ಚತುರ್ಥಿ, ಜಲಕ್ಕೆ –ಕ್ಕೆ –ಚತುರ್ಥಿ ಬಿದ್ದುದನ್ನು–ಅನ್ನು–ದ್ವಿತೀಯಾ ಭರವಸೆಗಳ–ಅ–ಷಷ್ಠಿ

೩. ಕೊಟ್ಟಿರುವ ಪದಗಳಲ್ಲಿರುವ ವಿಭಕ್ತಿಯನ್ನು ಹೆಸರಿಸಿ.

ಸಂಶಯದೊಳ್ –ಒಳ್ –ಸಪ್ತಮಿ ಜಲದಿಂ –ಇಂ–ತೃತೀಯಾ

ಮರದತ್ತಣಿಂ –ಅತ್ತಣಿಂ –ಪಂಚಮಿ ರಾಯಂಗೆ –ಗೆ –ಚತುರ್ಥಿ


೪. ಕೊಟ್ಟಿರುವ ಧಾತುಗಳಿಗೆ ವಿಧ್ಯರ್ಥಕ ,ನಿಷೇಧಾರ್ಥಕ, ಸಂಭಾವನಾರ್ಥಕ ರೂಪಗಳನ್ನು ಬರೆಯಿರಿ.

| ಧಾತು | ವಿಧ್ಯರ್ಥಕ | ಸಂಭಾವನಾರ್ಥಕ | ನಿಷೇಧಾರ್ಥಕ |
|---|---|---|---|
| ಹಾಡು | ಹಾಡಲಿ | ಹಾಡಿಯಾನು ,ಹಾಡೀತು ,ಹಾಡಿಯಾಳು | ಹಾಡನು ,ಹಾಡಳು,ಹಾಡದು |
| ನೋಡು | ನೋಡಲಿ | ನೋಡಿಯಾನು,ನೋಡೀತು, ನೋಡಿಯಾಳು | ನೋಡನು, ನೋಡದು,ನೋಡಳು |
| ಕಟ್ಟು | ಕಟ್ | ಕಟ್ಟಿಯಾನು ,ಕಟ್ಟೀತು ,ಕಟ್ಟಿಯಾಳು | ಕಟ್ಟನು,ಕಟ್ಟದು, ಕಟ್ಟಳು |
| ಕೇಳು | ಕೇಳಲಿ | ಕೇಳಿಯಾನು,ಕೇಳೀತು,ಕೇಳಿಯಾಳು | ಕೇಳನು,ಕೇಳದು ಕೇಳಳು , |
| ಓಡು | ಓಡಲಿ | ಓಡಿಯಾನು ,ಓಡೀತು,ಓಡಿಯಾಳು | ಓಡನು,ಓಡದು,ಓಡಳು |
| ಓದು | ಓದಲಿ | ಓದಿಯಾನು ,ಓದೀತು,ಓದಿಯಾಳು | ಓದನು,ಓದದು,ಓದಳು |
| ಬರೆ | ಬರೆಯಲಿ | ,ಬರೆದಾನು,ಬರೆದೀತು ,ಬರೆದಾಳು | ಬರೆಯನು,ಬರೆಯದು,ಬರೆಯಳು |

| ಘಟಕ ಪರೀಕ್ಷೆ –೧ ೧೫ ಅಂಕಗಳು | ಘಟಕ ಪರೀಕ್ಷೆ –೨ ೨೦ ಅಂಕಗಳು |
|---|---|
| ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೨*೧=೨<br>೧. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?<br>೨.ನದೀಜಲಗಳು ಏನಾಗಿವೆ ?<br>ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೩*೨ =೬<br>೧.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?<br>೨.ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ ?<br>೩.ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?<br>ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>೧. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ ?<br>ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ. ೩ ಅಂಕಗಳು<br>೧.''ಪ್ರೀತಿಯ ಹಣತೆಯ ಹಚ್ಚೋಣ.'' | ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೩*೧=೩<br>೧.ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?<br>೨.ಕಾಡುಮೇಡುಗಳ ಸ್ಥಿತಿ ಹೇಗಿದೆ?<br>೩.ಯಾವ ಎಚ್ಚರದೊಳು ಬದುಕಬೇಕಿದೆ?<br>ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨ ಅಂಕಗಳು<br>.೧. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?ಜಿ.ಎಸ್.ಶಿವರುದ್ರಪ್ಪನವರ ಸಂಕ್ಷಿಪ್ತ ಪರಿಚಯ ಬರೆಯಿರಿ.೩ ಅಂಕಗಳು<br>ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೩ ಅಂಕಗಳು<br>.ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.<br>ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ. ೩*೩=೯<br>೧''ಮುಂಗಾರಿನ ಮಳೆಯಾಗೋಣ.''<br>.೨.''ಹೊಸ ಭರವಸೆಗಳ ಕಟ್ಟೋಣ.''<br>೩. ''ಹೊಸ ಎಚ್ಚರದೊಳು ಬದುಕೋಣ.'' |

## ಪದ್ಯ ಪಾಠ . ಹಕ್ಕಿ ಹಾರುತಿದೆ ನೋಡಿದಿರಾ – ಅಂಬಿಕಾತನಯದತ್ತ

### ಕೃತಿಕಾರರ ಪರಿಚಯ



ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕವಿ ದತ್ತಾತ್ರೇಯ ರಾಮಚಂದ್ರಬೇಂದ್ರೆಯವರು ಕ್ರಿ.ಶ . ೧೮೯೬ರಲ್ಲಿ ಧಾರವಾಡ ಜಿಲ್ಲೆಯ ಸಾಧನಕೇರಿಯಲ್ಲಿ ಜನಿಸಿದರು.ಗರಿ ,ಗಂಗಾವತರಣ, ನಾದಲೀಲೆ, ಮೇಘದೂತ ,ಸಖೀಗೀತ ,ಸೂರ್ಯಪಾನ,ನಗೆಯ ಹೊಗೆ ,ಸಾಹಿತ್ಯವಿರಾಟ್ ಸ್ವರೂಪ ಮೊದಲಾದವು ಇವರು ಬರೆದ ಪ್ರಮುಖ ಕೃತಿಗಳು. ಇವರಿಗೆ ಅರಳು -ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.ಇವರ ನಾಕು ತಂತಿ ಕೃತಿಗೆ ಜ್ಞಾನ ಪೀಠ ಪ್ರಶಸ್ತಿ ದೊರೆತಿದೆ .

ಪ್ರಸ್ತುತ ಪದ್ಯಭಾಗವನ್ನು ಇವರ ಗರಿ ಕವನಸಂಕಲನದಿಂದ ಆರಿಸಲಾಗಿದೆ.

### ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?
ಉ:ಹಕ್ಕಿಯು ಕಣ್ಣು ರೆಪ್ಪೆ ಮುಚ್ಚಿ ತೆರೆಯುವ ವೇಗದಲ್ಲಿ ಹಾರುತ್ತಿದೆ .

೨. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?
ಉ:ಹಕ್ಕಿಯ ಗರಿಯಲ್ಲಿ ಬಿಳಿ ಹೊಳೆ ಬಣ್ಣಗಳಿವೆ .

೩. ಹಕ್ಕಿಯ ಕಣ್ಣುಗಳು ಯಾವುವು
ಉ: ಹಕ್ಕಿಯ ಕಣ್ಣುಗಳು ಸೂರ್ಯಚಂದ್ರರು .

೪. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?
ಉ: ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

೫. ಹಕ್ಕಿ ಯಾರನ್ನು ಹರಸಿದೆ ?
ಉ: ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

೬. ಹಕ್ಕಿಯು ಯಾವುದರ ಸಂಕೇತವಾಗಿದೆ?
ಉ:ಹಕ್ಕಿಯು ಕಾಲದ ಸಂಕೇತವಾಗಿದೆ.

### ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?
ಉ: ಕಾಲದ ಹಕ್ಕಿಯ ಬಣ್ಣ ನೀಲ ಮೇಘ ಸದೃಶ.ನೀಲಿ ಅಂದರೆ ವೈಶಾಲ್ಯ.ನೀಲಮೇಘಮಂಡಲದಂತೆ ಸಮಬಣ್ಣವೂ ಹೌದು.ಕಾಲದ ದೃಷ್ಟಿ ತರತಮರಹಿತ.ಕಾಲದ ಹಕ್ಕಿಯು ನೀಲಮೇಘಮಂಡಲದಂತೆ ಅಗಾಧ,ವ್ಯಾಪಕ –ವಿಶಾಲ ಎಷ್ಟೆಂದರೆ

ಆಕಾಶಕ್ಕೆ ರೆಕ್ಕೆಗಳು ಮೂಡಿ ಆಕಾಶವೇ ಹಾರುತ್ತ ಸಾಗಿದಂತೆ! ಕಾಲದ ಹಕ್ಕಿಯ ಹಾರಾಟ ಅಂಥದು.ಅನಾದಿಯೆಂಬ ಮುಗಿಲಿಗೆ ಮೂಡಿದ ರೆಕ್ಕೆಗಳೊಡನೆ ,ಅನಂತವೆಂಬ ನೀಲಮೇಘಮಂಡಲದಲ್ಲಿ ,ದಿನ ಮಾಸವರ್ಷ ಯುಗ ಮನ್ವಂತರ ಕಲ್ಪಗಳೆಂಬ ನಕ್ಷತ್ರ ಗಳ ಮಾಲೆ ಧರಿಸಿ ದಿನ ರಾತ್ರಿಗಳೆಂಬ ಸೂರ್ಯ ಚಂದ್ರರನ್ನು ಕಣ್ಣುಗಳಾಗಿ ಹೊಂದಿ ,ನೋಡುತ್ತ ತೋರುತ್ತ ,ತೋರಿಸುತ್ತ ಕಾಲದ ಹಕ್ಕಿಯು ಹಾರುತ್ತಿದೆ.

೨. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

ಉ:ಯುಗಯುಗಗಳ ಆಗುಹೋಗುಗಳನ್ನೆಲ್ಲ ತಿಕ್ಕಿ ತೀಡಿ ,ಚರಿತ್ರೆಯನ್ನು ಹಿಂದೆ ಬಿಟ್ಟು ,ಮನ್ವಂತರಗಳ ಭಾಗ್ಯಕ್ಕೆ ಸಾಕ್ಷಿಯಾಗಿ ,ರೆಕ್ಕೆಯ ಬೀಸುತ್ತ ಚೇತನಗೊಳಿಸಿ ಹೊಸಗಾಲದ ಹಸುಮಕ್ಕಳನ್ನು ಹರಸಿ ಕಾಲದ ಹಕ್ಕಿಯು ಹಾರುವುದು.ಹೊಸಯುಗಕ್ಕೊಮ್ಮೆ ಆ ಯುಗದ ಹಣೆಬರಹವನ್ನು ಒರಸುವುದು ಈ ಕಾಲಪಕ್ಷಿಯ ಕೆಲಸ.ಕಾಲಪಕ್ಷಿಯು ಕೇವಲ ವಿನಾಶಕಾರಿಯಲ್ಲ.ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನೀಡುವುದು ಕಾಲಪಕ್ಷಿ,ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ.

## ಎಂಟು– ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?

ಉ: ಚಲನಶೀಲತೆ ಜೀವಂತಿಕೆಯ ಗುಣ .ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ.ಅದಕ್ಕೆ ತಡೆ ಎಂಬುದಲ್ಲ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು.ಅದಕ್ಕೆ ಹೊಂದಿಕೊಳ್ಳಬೇಕು.ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತ ಹೋಗುತ್ತದೆ.

ವಿಶ್ವವ್ಯಾಪಿ ಕಾಲವು ಕೇವಲ ಗತಿಶೀಲವಲ್ಲ ,ಪ್ರಗತಿಶೀಲ ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲಪಕ್ಷಿ ಸುದೂರ ಗಮಿಸಬಲ್ಲುದು.ಭೂತಕಾಲ,ವರ್ತಮಾನಕಾಲ.ಭವಿಷ್ಯತ್ ಕಾಲಗಳು ಕಾಲಪಕ್ಷಿಯ ಚಲನೆಯ ಅಂಶಗಳು.ಎಲ್ಲ ಜನಾಂಗಗಳನ್ನೂ ಈ ಕಾಲಪಕ್ಷಿ ಹೊತ್ತು ಮುನ್ನಡೆದಿದೆ.ಆಕಾಶ ಅನಂತವಾದದ್ದು.ಹಾಗೆಯೇ ಕಾಲಪಕ್ಷಿಯೂ ಅನಂತವಾದದ್ದು.ಕಾಲಪಕ್ಷಿಯು ಚಿಕ್ಕೆಗಳ ಮಾಲೆಯನ್ನು ಅಂದರೆ ಆಕಾಶಗಂಗೆಯೇ ಮೊದಲಾದ ವಿಶ್ವಗಳನ್ನು ಸೆಕ್ಕಿಸಿಕೊಂಡಿದೆ.ಸೂರ್ಯಚಂದ್ರರು ಕಾಲಪಕ್ಷಿಯ ಕಣ್ಣುಗಳು.ಸಣ್ಣ ಪುಟ್ಟ ರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುವ ಕಾಲಪಕ್ಷಿಯು ಅವುಗಳನ್ನು ನಾಶ ಮಾಡುವ ಕಾರ್ಯವನ್ನು ಮಾಡುವುದು.ಕಾಲ ಪಕ್ಷಿಯ ಮುಂದೆ ಯಾವ ಸಾರ್ವಭೌಮರ ಆಟವೂ ನಡೆಯಲಾರದು ಎಲ್ಲರೂ ಕಾಲ ಪಕ್ಷಿಗೆ ತಲೆಬಾಗಲೇ ಬೇಕು.ಕಾಲಪಕ್ಷಿಯು ಹೊಸಯುಗಕ್ಕೊಮ್ಮೆ ಅದರ ಹಣೆಬರಹವನ್ನು ಬರೆಯುವ ಮತ್ತು ಹಳೆಯ ಯುಗದ ಹಣೆಬರಹ ಒರೆಸುವ ಕಾರ್ಯವನ್ನು ಮಾಡುವುದು.ಯುಗಯುಗಗಳನ್ನು ಮನ್ವಂತರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದೆ.ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ ಎಂದು ಬೇಂದ್ರೆಯವರು ಕಾಲಪಕ್ಷಿಯನ್ನು ವರ್ಣಿಸಿದ್ದಾರೆ.

## ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ.

೧. ''ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ''

ಉ: ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ಈ ಕವನವನ್ನು ಬರೆದಿದ್ದಾರೆ.ಬೇಂದ್ರೆಯವರ ಈ ಕಾಲಪಕ್ಷಿ ಕೇವಲ ಸಮಯದ ಪಕ್ಷಿ ಅಲ್ಲ.ವಿಶ್ವವನ್ನೇ ತನ್ನ ಚಲನೆಯಲ್ಲಿ ಬದಲಾಯಿಸುತ್ತಿರುವ ಬೃಹತ್ ಚೈತನ್ಯ ಪಕ್ಷಿ.ಸಣ್ಣ ಪುಟ್ಟ

ರಾಜ್ಯಗಳನ್ನು ,ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುವುದೇ ಈ ಕಾಲಪಕ್ಷಿ .ಅವುಗಳ ತೆನೆ ಒಕ್ಕುವುದು ಅಂದರೆ ಅವುಗಳ ಫಲಿತವನ್ನು ಕೊಯ್ಲು ಮಾಡುವುದು ಈ ಕಾಲಪಕ್ಷಿಯ ಕೆಲಸ.ಈ ತರಹ ಬೆಳೆದು ನಿಂತ ತೆನೆಗಳನ್ನು ಮುಕ್ಕುವದೂ ಸಹ ಈ ಕಾಲ ಪಕ್ಷಿಯೇ!ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಇಡೀ ಭೂಮಂಡಲವು ಕಾಲಪಕ್ಷಿಯ ಸ್ವಾಧೀನಕ್ಕೆ ಒಳಪಟ್ಟಿದೆ. ಸಾಮ್ರಾಜ್ಯದ ಒಳಿತು ಕೆಡುಕುಗಳನ್ನು ಬೇರ್ಪಡಿಸುವ ಕಾರ್ಯವನ್ನು ಅದು ಮಾಡುವುದು ಎಂದು ಈ ವಾಕ್ಯದ ಸ್ವಾರಸ್ಯವಾಗಿದೆ.

೨. ''ಸಾರ್ವಭೌಮರಾ ನೆತ್ತಿಯ ಕುಕ್ಕಿ''

ಉ: ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ಸಾಮ್ರಾಜ್ಯದ ಭರ್ಜರಿ ತೆನೆಗಳನ್ನೆಲ್ಲ ಒಕ್ಕಿ, ಚಿಕ್ಕಪುಟ್ಟ ಕೋಟೆಕೊತ್ತಲಗಳನ್ನೆಲ್ಲ ಮುಕ್ಕಿ ,ಖಂಡಖಂಡಗಳನ್ನೇ ತೇಲಿಸಿ-ಮುಳುಗಿಸಿ ,ಸಾರ್ವಭೌಮರೆಲ್ಲರ ನೆತ್ತಿಯ ಕುಕ್ಕುವ ಕಾಲದ ಹಕ್ಕಿಯು ಹಾರುತಿದೆ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ :ಧರಣಿ ಮಂಡಲದಲ್ಲಿರುವ ಏಳು ಖಂಡಗಳನ್ನು ಈ ಹಕ್ಕಿ ತೇಲಿಸುತ್ತದೆ ಹಾಗೂ ಮುಳುಗಿಸುತ್ತದೆ.ಈ ಖಂಡಗಳಿಗೆ ತಾವೇ ಸಾರ್ವಭೌಮರೆಂದು ಬೀಗುವವರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಕಾಲಪಕ್ಷಿ ಮೆಟ್ಟಿ ನಿಲ್ಲುವುದು .ಕಾಲಪಕ್ಷಿಯ ಮುಂದೆ ಯಾರ ಆಟವೂ ನಡೆಯದು ಎನ್ನುವುದು ವಾಕ್ಯದ ಸ್ವಾರಸ್ಯವಾಗಿದೆ.

೩. "ಬಲ್ಲರು ಯಾರಾ ಹಾಕಿದ ಹೊಂಚ "

ಉ: ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ವಿಶ್ವಗಳು ಅನೇಕವಿರಬಹುದು. ಈ ವಿಶ್ವಗಳ ದಿಕ್ಕುಗಳು ಅನಂತವಾಗಿರಬಹುದು. ಆದರೆ ಈ ಕಾಲಪಕ್ಷಿಯು ಈ ಎಲ್ಲ ಮಂಡಲಗಳ ಅಂಚನ್ನು ಮುಟ್ಟಿದೆ. ಇಷ್ಟೇ ಅಲ್ಲ, ಈ ಅನಂತತೆಯ ಆಚೆಗೂ ಸಹ ಇದು ತನ್ನ ಚುಂಚನ್ನು ಚಾಚಿದೆ. .ಬ್ರಹ್ಮಾಂಡ ಅಂದರೆ ಬ್ರಹ್ಮದೇವನು ಸೃಷ್ಟಿಸಿದ ಬೃಹತ್ ಅಂಡ . ಆ ಬ್ರಹ್ಮಸೃಷ್ಟಿಗಳನ್ನೇ ಈ ಕಾಲಪಕ್ಷಿ ಒಡೆಯಲೆಂದು ಹೊಂಚು ಹಾಕಿ ಹಾರುತ್ತಿದೆಯೆ? ಇರಬಹುದು, ಅಥವಾ ಅಂಡವು ಒಡೆದಾಗಲೇ ಹೊಸ ಸೃಷ್ಟಿ ಹೊರಗೆ ಬರುವದು ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಈ ಕಾಲಪಕ್ಷಿಯ ಮನೋಗತ ನಮಗೆ ಅರ್ಥವಾಗಬಹುದೆ? ಇದು ಅಸಾಧ್ಯ ಎನ್ನುವ ಹೊಳಹನ್ನು 'ಬಲ್ಲರು ಯಾರಾ' ಎನ್ನುವ ಪ್ರಶ್ನೆಯ ಮೂಲಕ  ಬೇಂದ್ರೆ  ಆಶ್ಚರ್ಯ ವ್ಯಕ್ತಪಡಿಸುತ್ತಾರೆ.

೪. '' ಹೊಸಗಾಲದ ಹಸುಮಕ್ಕಳ ಹರಸಿ''

ಉ: ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ಕಾಲವೆನ್ನುವ ಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಪ್ರಾಣವಾಯುವನ್ನು ಕೊಟ್ಟು ಈ ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನೀಡುವುದು ಅಂದರೆ ಸಜೀವಗೊಳಿಸುವುದು .ನಮ್ಮ ಭೂಮಂಡಲದಲ್ಲಿ ನಡೆದ ಸಾಂಸ್ಕೃತಿಕ ಬದಲಾವಣೆಗಳು ,ಪುನಶ್ಚೇತನಗಳು ಎಲ್ಲವೂ ಈ ಕಾಲಪಕ್ಷಿಯ ಮಹಿಮೆಯೇ.ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿಯೇ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ:ಬದಲಾದ ಲೋಕಕ್ಕೆ ಕಣ್ಣು ತೆರೆದ ಅಂದಂದಿನ ಜನರನ್ನು, -ಜೀವಿಗಳನ್ನು ಮುನ್ನಡೆಸಿ ಮತ್ತು ಇಂದಿನ ಲೋಕಕ್ಕೆ ಕಣ್ಣು ತೆರೆದಿರುವವರನ್ನು ಮುನ್ನಡೆಸುವುದು ಕಾಲಪಕ್ಷಿಯ ಕಾರ್ಯ ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ.

೫. "ಮಂಗಳ ಲೋಕದ ಅಂಗಳಕೇರಿ "

ಉ: ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ :ಕಾಲದ ಓಟದಲ್ಲಿ ಬೆಳ್ಳಿ ಅಂದರೆ ಶುಕ್ರಗ್ರಹವು ಮನುಷ್ಯನಿಗೆ ಕೇವಲ ಹಳ್ಳಿಯಾಗಬಹುದು, ಚಂದ್ರಲೋಕವು ಬರಿ ಊರಾಗಬಹುದು ಹಾಗೂ ಮಂಗಳಲೋಕವು ಭೂಮಿಗೆ ಅಂಗಳವಾಗಬಹುದು. ಮಾನವನಿಗೆ ಈ ಆಕಾಶಕಾಯಗಳು ಆಡಲು, ಹಾಡಲು ಹಾಗೂ ಹಾರಾಡಲು **platforms** ಆಗಬಹುದು! ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಮಾನವನು ಭೂಮಿಯಿಂದ ಇತರ ಗ್ರಹ, ಉಪಗ್ರಹಗಳಿಗೆ ಸಂಚರಿಸಬಹುದಾದ ದಾರ್ಶನಿಕ ಮುನ್ನೋಟ ಈ ನುಡಿಯಲ್ಲಿ ವ್ಯಕ್ತವಾಗಿದೆ.

| (ಅ) | (ಬ) |
|---|---|
| ೧. ಹಕ್ಕಿ | ಜ್ಞಾನಪೀಠ ಪ್ರಶಸ್ತಿ |
| ೨.ನಾಕುತಂತಿ | ಪಕ್ಷಿ |
| ೩.ನೀಲಮೇಘಮಂಡಲ | ಖಂಡಖಂಡಗಳ |
| ೪. ರಾಜ್ಯದ ಸಾಮ್ರಾಜ್ಯದ | ತೆನೆ ಒಕ್ಕಿ |
| ೫.ತೇಲಿಸಿ ಮುಳುಗಿಸಿ | ಸಮಬಣ್ಣ |
| ೬.ಮಂಗಳ | ಭಾಗ್ಯವ ತೆರೆಸಿ |
| | ಅಂಗಳಕೇರಿ |

ಹಕ್ಕಿ – ಪಕ್ಷಿ ನಾಕುತಂತಿ–ಜ್ಞಾನಪೀಠಪ್ರಶಸ್ತಿ

ನೀಲಮೇಘಮಂಡಲ– ಸಮಬಣ್ಣ ರಾಜ್ಯದ ಸಾಮ್ರಾಜ್ಯದ –ತೆನೆಒಕ್ಕಿ ತೇಲಿಸಿಮುಳುಗಿಸಿ– ಖಂಡಖಂಡಗಳ

ಮಂಗಳ : ಅಂಗಳಕೇರಿ

## ಸಮಾನಾರ್ಥಕ ಪದ ಬರೆಯಿರಿ.

ಸೂರ್ಯ–ಭಾಸ್ಕರ,ರವಿ,ಭಾನು,ನೇಸರ ಎದೆ–ಹೃದಯ ಮೇಘ–ಮೋಡ

ಗಡ–ಚಿಕ್ಕ ಕೋಟೆ ಹರಸು– ಆಶೀರ್ವದಿಸು ಕೆನ್ನ–ಕೆಂಪು

ಒಕ್ಕಿ–ತೆನೆಯಿಂದ ಕಸಕಡ್ಡಿ ಬೇರ್ಪಡಿಸುವುದು.

## ತತ್ಸಮ ತದ್ಭವ ಬರೆಯಿರಿ.

ಹಕ್ಕಿ–ಪಕ್ಷಿ, ಬ್ರಹ್ಮ–ಬೊಮ್ಮ ಚಂದ್ರ–ಚಂದಿರ ಯುಗ–ಜುಗ ,ಅಂಗಳ–ಅಂಕಣ

## ಸಂಧಿ ವಿಗ್ರಹಿಸಿ ಹೆಸರಿಸಿ.

ಇರುಳಳಿದು–ಇರುಳು+ಅಳಿದು=ಲೋಪಸಂಧಿ

ತೆರೆದಿಕ್ಕುವ –ತೆರೆದು+ಇಕ್ಕುವ =ಲೋಪಸಂಧಿ

ಹೊಸಗಾಲ–ಹೊಸ+ಕಾಲ=ಆದೇಶಸಂಧಿ

ದಿಗ್ಮಂಡಲ =ದಿಕ್ +ಮಂಡಲ =ಜಶ್ತ್ವಸಂಧಿ

ತಿಂಗಳಿನೂರು=ತಿಂಗಳಿನ +ಊರು=ಲೋಪಸಂಧಿ

## ಭಾಷಾ ಚಟುವಟಿಕೆ

ಈ ಪದ್ಯದಲ್ಲಿ ಬಂದಿರುವ ದ್ವಿರುಕ್ತಿಗಳು : ಇರುಳಿರುಳು ,ದಿನದಿನ ,ಗರಿಗರಿ , ಬಣ್ಣ-ಬಣ್ಣ ,ಖಂಡಖಂಡ ,ಯುಗಯುಗ ,

ಕೊಟ್ಟಿರುವ ಅವ್ಯಯ ಪದಗಳು ಯಾವ ಯಾವ ಅವ್ಯಯಕ್ಕೆ ಸೇರಿವೆ ಎಂಬುದನ್ನು ಗುರುತಿಸಿ.

ಆ) ಅದುವೇ -ಅವಧಾರಣಾರ್ಥಕ

ಆದ್ದರಿಂದ -ಸಂಬಂಧಾರ್ಥಕ ಅವ್ಯಯ

ಅಯ್ಯೋ -ಭಾವಸೂಚಕ ಅವ್ಯಯ

ಬೇಗನೇ - ಸಾಮಾನ್ಯಾರ್ಥಕ ಅವ್ಯಯ

ಧಗಧಗ - ಅನುಕರಣಾವ್ಯಯ

ಸಾಕು - ಕ್ರಿಯಾರ್ಥಕ ಅವ್ಯಯ

ಓಹೋ - ಭಾವಸೂಚಕ ಅವ್ಯಯ

ಹೌದು- ಕ್ರಿಯಾರ್ಥಕ ಅವ್ಯಯ

ನೀನೇ - ಅವಧಾರಣಾರ್ಥಕ ಅವ್ಯಯ

ರೊಯ್ಯನೆ-ಅನುಕರಣಾವ್ಯಯ

ಮೆಲ್ಲಗೆ - ಸಾಮಾನ್ಯಾರ್ಥಕ ಅವ್ಯಯ

ಅಲ್ಲದೆ - ಸಂಬಂಧಾರ್ಥಕ ಅವ್ಯಯ

<table>
<tr>
<td>
ಘಟಕ ಪರೀಕ್ಷೆ -೧ ೧೫ ಅಂಕಗಳು<br>
ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೪*೧=೪<br>
೧. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?<br>
೨. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ ?<br>
೩. ಹಕ್ಕಿಯ ಕಣ್ಣುಗಳು ಯಾವುವು?<br>
೪. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?<br>
ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪ ೧. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?೨. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?<br>
ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ . ೩<br>
'' ಹೊಸಗಾಲದ ಹಸುಮಕ್ಕಳ ಹರಸಿ''ಎಂಟು- ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>
೧. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?
</td>
<td>
ಘಟಕ ಪರೀಕ್ಷೆ -೨ ೧೭ ಅಂಕಗಳು<br>
ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ ೨*೧=೨<br>
೧. ಹಕ್ಕಿ ಯಾರನ್ನು ಹರಸಿದೆ ?<br>
೨. ಹಕ್ಕಿಯು ಯಾವುದರ ಸಂಕೇತವಾಗಿದೆ?<br>
ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ. ೪*೩=೧೨<br>
೧. ''ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ''<br>
೨. ''ಸಾರ್ವಭೌಮರಾ ನೆತ್ತಿಯ ಕುಕ್ಕಿ''<br>
೩. “ಬಲ್ಲರು ಯಾರಾ ಹಾಕಿದ ಹೊಂಚ "<br>
. ೪.“ಮಂಗಳ ಲೋಕದ ಅಂಗಳಕೇರಿ "<br>
ದ.ರಾ.ಬೇಂದ್ರೆಯವರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು
</td>
</tr>
</table>

## ಪದ್ಯ ಪಾಠ . ೩ ... ಹಲಗಲಿ ಬೇಡರು

–ಜನಪದ

### ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು ?

ಉ: ಬ್ರಿಟಿಷ್ ಭಾರತ ಸರಕಾರದ ಅನುಮತಿಯಿಲ್ಲದೆ ಭಾರತೀಯರು ಯಾವುದೇ ಬಗೆಯ ಶಸ್ತ್ರಾಸ್ತ್ರಗಳನ್ನು ಹೊಂದುವ ಹಾಗಿಲ್ಲ, ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು . ಎನ್ನುವುದು ಕುಂಪಣಿಸರಕಾರ ಹೊರಡಿಸಿದ ಆದೇಶ.

೨. ಹಲಗಲಿಯ ನಾಲ್ವರು ಪ್ರಮುಖರು ಯಾರು ?

ಉ: ಪೂಜೇರಿ ಹನುಮ, ಬಾಲ, ಜಡಗ, ರಾಮರು ಹಲಗಲಿಯ ನಾಲ್ವರು ಪ್ರಮುಖರು .

೩. ಹಲಗಲಿ ಗು ರುತು ಉಳಿಯದಂತಾದುದು ಏಕೆ ?

ಉ: ಕುಂಪಣಿ ಸರಕಾರದ ದಂಡು ಹಲಗಲಿ ಊರಿಗೇ ಬೆಂಕಿ ಹಚ್ಚಿದ್ದರಿಂದ ಅದು ಸುಟ್ಟು ಬೂದಿಯಾಗಿ ಅದರ ಗುರುತು ಉಳಿಯದಂತಾಯಿತು .

೪. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?

ಉ: ಹಲಗಲಿ ಬೇಡರ ದಂಗೆ , ಹಲಗಲಿ ಬೇಡರ ಮೇಲೆ ಕುಂಪಣಿ ಸರಕಾರ ನಡೆಸಿದ ದೌರ್ಜನ್ಯ ಹಲಗಲಿ ಬೇಡರ ಕುರಿತ ಲಾವಣಿಗೆ ಕಾರಣವಾಗಿದೆ .

೫.ಹಲಗಲಿ ಗ್ರಾಮ ಎಲ್ಲಿದೆ?

ಉ: ಹಲಗಲಿ ಗ್ರಾಮವು ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿದೆ.

### ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

ಉ: ೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ನಿಶ್ಶಸ್ತ್ರೀಕರಣ ಕಾಯ್ದೆ ಜಾರಿಗೆ ತಂದ ಬ್ರಿಟಿಷ್ ಸರಕಾರ ಕಂಪನಿ ಸರಕಾರಕ್ಕೆ ಎಲ್ಲ ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿದುಕೊಳ್ಳುವಂತೆ ಆದೇಶ ನೀಡಿತು .. ಹಲಗಲಿ ಬೇಡರು ಇದನ್ನು ವಿರೋಧಿಸಿದರು . ಆಯುಧಗಳು ಹೋದರೆ ತಮ್ಮ ಜೀವವೇ ಹೋದಂತೆ ಎಂದು ತಿಳಿದ ಬೇಡರು ಹನುಮ , ಬಾಲ, ಜಡಗ , ರಾಮರ ನೇತೃತ್ವದಲ್ಲಿ ಕಂಪನಿ ಸರ್ಕಾರದ ವಿರುದ್ಧ ದಂಗೆ ಎದ್ದರು .

೨. ಹಲಗಲಿಗೆ ದಂಡು ಬರಲು ಕಾರಣವೇನು ?

ಉ:ಬ್ರಿಟಿಷರ ನಿಶ್ಶಸ್ತ್ರೀಕರಣ ಕಾಯ್ದೆ ವಿರೋಧಿಸಿದ ಹಲಗಲಿ ಬೇಡರು ಕಂಪನಿ ಸರಕಾರದ ವಿರು ದ್ಧ ದಂಗೆ ಎದ್ದರು . ಆಯುಧ ಕೇಳಲು ಬಂದ ಸಿಪಾಯಿಗಳ ಕೆನ್ನೆಗೆ ಬಾರಿಸಿದರು .ವಿಷಯ ತಿಳಿದ ಕಂಪನಿ ಅಧಿಕಾರಿಯು ಕೆಲವು ಜನರನ್ನು ಕಳಿಸಿದಾಗ ಅವರನ್ನೂ ಬೇಡರು ಹಿಮ್ಮೆಟ್ಟಿಸಿದರು . ಆದ್ದರಿಂದ ಬೇಡರನ್ನು ಹತ್ತಿಕ್ಕಲು ಕಂಪನಿಯ ದೊಡ್ಡ ದಂಡು ಹಲಗಲಿಗೆ ಆಗಮಿಸಿತು .

೩. ಲಾವಣಿಗಳನ್ನು ಏಕೆ ವೀರಗೀತೆಗಳೆಂದು ಕರೆಯಲಾಗಿದೆ ?

ಉ:ತ್ಯಾಗ ಬಲಿದಾನಗಳಿಂದ ಅಮರರಾದ ವೀರಕಲಿಗಳ ವೀರಸಾಹಸ , ಉಜ್ವಲ ಜೀವನವನ್ನು ಲಾವಣಿಗಳಲ್ಲಿ ವರ್ಣಿಸಲಾಗಿದೆ. ಆದ್ದರಿಂದ ಲಾವಣಿಗಳನ್ನು ವೀರಗೀತೆಗಳು ಎಂದು ಕರೆಯಲಾಗಿದೆ.

೪. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

ಉ: ಬೇಡರು ನಿಶ್ಶಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿದಾಗ ಅವರ ಮೇಲೆ ದಾಳಿ ನಡೆಯಿತು . ಅವರ ಮನವೊಲಿಸಲು ಪ್ರಯತ್ನಿಸಿದ ಹೆಬಲಕ್ ಎಂಬ ಅಧಿಕಾರಿಯನ್ನು ಬೇಡರು ಹತ್ಯೆಗೈದರು. ಇದರಿಂದ ಕೋಪಗೊಂಡ ಕಂಪನಿಯ ಕಾರಾಸಾಹೇಬ ಎಂಬ ಅಧಿಕಾರಿ ಹಲಗಲಿ ಬೇಡರ ಊರನ್ನು ಲೂ ಟಿ ಮಾಡು ವಂತೆ ಆದೇಶಿಸಿದನು .ಕಂಡ ಕಂಡಲ್ಲಿ ಬೇಡರ ಹತ್ಯೆಗಯ್ಯಲಾಯಿತು . . ರಕ್ತದ ಹೊಳೆ ಹರಿಯಿತು . ಹಲಗಲಿಗೆ ಬೆಂಕಿ ಇಟ್ಟು ಇಡಿ ಊರನ್ನೇ ಬೂದಿ ಮಾಡಲಾಯಿತು .

## ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿ .

೧. ಹಲಗಲಿ ದಂಗೆಗೆ ಕಾರಣವೇನು ?ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ?

ಉ: ೧೮೫೭ ರ ಸಿಪಾಯಿದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮದ ನಂತರ ಬ್ರಿಟಿಷರು ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು . ಅದರಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ.ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು . ಹಲಗಲಿ ಬೇಡರಿಗೆ ಆಯುಧಗಳೇ ಜೀವವಾಗಿತ್ತು . ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು ..ಸಿಪಾಯಿಗಳ ಕೆನ್ನೆಗೆ ಬಾರಿಸಿದರು . ಮನವೊಲಿಸಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು . ಕೋಪಗೊಂಡ ಕಂಪನಿಯ ಸರಕಾರ ಬೇಡರನ್ನು ಕಂಡ ಕಂಡಲ್ಲಿ ಸಾಯಿಸಿತು .. ಬೇಡರ ಮುಖಂಡರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೈಯ್ಯಲಾಯಿತು .. ಹಲಗಲಿ ಊರನ್ನು ಲೂಟಿ ಮಾಡಿ ಬೆಂಕಿ ಹಚ್ಚಲಾಯಿತು . ಹೀಗೆ ಹಲಗಲಿ ದಂಗೆಯನ್ನು ಸರಕಾರ ನಿಯಂತ್ರಿಸಿತು .

೨. ಹಲಗಲಿ ದಂಗೆಯ ಪರಿಣಾಮವೇನು ?

ಉ: ೧೮೫೭ ರ ಸಿಪಾಯಿದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮದ ನಂತರ ಬ್ರಿಟಿಷರು ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು . ಅದರ ಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಆಯುಧಗಳನ್ನು

ಹೊಂದುವ ಹಾಗಿರಲಿಲ್ಲ.ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು . ಹಲಗಲಿ ಬೇಡರಿಗೆ ಆಯುಧಗಳೆ ಜೀವವಾಗಿತ್ತು . ಆಯುಧಗಳನ್ನು ಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು. .ಸಿಪಾಯಿಗಳ ಕೆನ್ನೆಗೆ ಬಾರಿಸಿದರು . ಬೇಡರ ಮನವೊಲಿಸಲು ಬಂದ ಅಧಿಕಾರಿಯನ್ನೇ ಕೊಂದು ಹಾಕಿದರು . ಕ್ರೋಧಗೊಂಡ ಕಾರಾಸಾಹೇಬನ ಆದೇಶದಂತೆ ಕಂಪನಿಯ ದಂಡು ಬೇಡರನ್ನು ಕಂಡ ಕಂಡಲ್ಲಿ ಬೇಟೆಯಾಡಿತು .. ಹನುಮ ,ಭೀಮ. ಜಡಗ , ರಾಮ , ಬಾಲರು ಮಾಡಿದ ಪ್ರಯತ್ನ ವಿಫಲವಾಯಿತು . ನಿರ್ದಯವಾಗಿ ಅವರನ್ನು ಸಾಯಿಸಲಾಯಿತು .ಬೇಡರ ಊರನ್ನು ಏನೂ ಉಳಿಸದಂತೆ ಲೂಟಿ ಮಾಡಲಾಯಿತು . .ಊರಿಗೆ ಬೆಂಕಿ ಇಟ್ಟು ಗುರುತು ಸಿಗದಂತೆ ಬೂದಿ ಮಾಡಲಾಯಿತು .

## ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.

೧."ಎಲ್ಲ ಜನರಿಗೆ ಜೋರು ಮಾಡಿ ಕಸಿದು ಕೊಳ್ಳಿರಿ ಹತಾರ ."

ಉ: ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯದಿಂದ ಆರಿಸಲಾದ 'ಹಲಗಲಿ ಬೇಡರು 'ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.ಈ ಮಾತು ಭಾರತೀಯರನ್ನು ಉದ್ದೇಶಿಸಿ ಹೇಳಲಾಗಿದೆ.

ಸಂದರ್ಭ:೧೮೫೭ ರ ಸಿಪಾಯಿ ದಂಗೆಯ ನಂತರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೊಳಿಸಿದ ಬ್ರಿಟಿಷ್ ಭಾರತ ಸರ್ಕಾರವು ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿದು ಕೊಳ್ಳುವಂತೆ ಭಾರತದಲ್ಲಿರುವ ಕಂಪನಿ ಸರಕಾರಕ್ಕೆ ಆದೇಶ ಹೊರಡಿಸಿದ ಸಂದರ್ಭ ದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಭಾರತೀಯರು ಬ್ರಿಟಿಷ ಸರ್ಕಾರದ ಅನುಮತಿಯಿಲ್ಲದೇ ಆಯುಧಗಳನ್ನು ಇರಿಸಿಕೊಳ್ಳುವಂತಿಲ್ಲ. ಇರಿಸಿಕೊಂಡಿದ್ದೇ ಆದರೆ ಬಲವಂತವಾಗಿಯಾದರೂ ಅವರಿಂದ ಆಯುಧಗಳನ್ನು ಮರಳಿ ಪಡೆಯಲೇ ಬೇಕು. ಅದಕ್ಕಾಗಿ ಯಾವ ಕ್ರಮ ತೆಗೆದುಕೊಂಡರೂ ಸರಿ ಎಂಬ ಕಂಪನಿ ಸರ್ಕಾರದ ಧೋರಣೆ ವ್ಯಕ್ತವಾಗಿದೆ.

೨.'' ಜೀವ ಸತ್ತು ಹೋಗು ವುದು ಗೊತ್ತ".

ಉ: ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯದಿಂದ ಆರಿಸಲಾದ 'ಹಲಗಲಿ ಬೇಡರು' ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಹಲಗಲಿ ಬೇಡರ ಮುಖಂಡರು ಹೇಳಿದ್ದಾರೆ.

ಸಂದರ್ಭ : ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿಯಲು ಕಂಪನಿ ಸರಕಾರ ಮುಂದಾದಾಗ ಹಲಗಲಿ ಬೇಡರ ಮುಧೋಳದ ಬಳಿ ಸೇರಿ ಆಯುಧಗಳನ್ನು ಮರಳಿಸದಿರುವ ತೀರ್ಮಾನ ತೆಗೆದುಕೊಂಡರು . ಆ ಗುಂಪಿನ ನಾಯಕತ್ವವನ್ನು ವಹಿಸಿದ್ದ ರಾಮ , ಬಾಲ, ಜಡಗ , ಹನುಮರು ಆಯುಧಗಳು ಹೋದರೆ ನಮ್ಮ ಜೀವವೇ ಹೋದ ಹಾಗೆ ಆದ್ದರಿಂದ ಆಯುಧಗಳನ್ನು ಮರಳಿಸಬಾರದು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಹಲಗಲಿ ಬೇಡರಿಗೆ ಅವರ ಆಯುಧಗಳೇ ಜೀವಾಳ .ಅವನ್ನು ಮರಳಿಸುವುದು ಅವುಗಳಿಲ್ಲದೇ ಬದುಕುವುದೂ ಎರಡೂ ಜೀವವೇ ಹೋದ ಹಾಗೆ ಎಂಬ ಬೇಡರ ಮನೋಭಾವ ವ್ಯಕ್ತವಾಗಿದೆ.

೩.'' ಹೊಡೆದರೊ ಗುಂಡ ಕರುಣ ಇಲ್ಲದಂಗ ".

ಉ: ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯದಿಂದ ಆರಿಸಲಾದ ಹಲಗಲಿ ಬೇಡರು ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.ಹಲಗಲಿ ಬೇಡರಿಗೂ ಕಂಪನಿ ಸರಕಾರದವರಿಗೂ ನಡೆದ ಘರ್ಷಣೆ ವಿವರಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸಂದರ್ಭ :ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿದ ಬೇಡರು ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು . .ಪರಸ್ಪರ ಗುಂಡಿನ ಕಾಳಗ ನಡೆಯಿತು . ಕಂಪನಿ ಅಧಿಕಾರಿಗಳು ಬೇಡರ ಮೇಲೆ ಕರುಣೆಯಿಲ್ಲದೆ ದಾಳಿ ನಡೆಸಿದರು ಎನ್ನುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಬೇಡರ ಮನವೊಲಿಸಿ ಆಯುಧಗಳನ್ನು ಪಡೆಯಲು ವಿಫಲವಾದ ಕಂಪನಿ ಸರ್ಕಾರದ ಜನರು ಬೇಡರ ಮೇಲೆ ನಡೆಸಿದ ದೌರ್ಜನ್ಯ ,ಅವರ ಅಮಾನವೀಯ ಗುಣ ಇಲ್ಲಿ ವ್ಯಕ್ತವಾಗಿದೆ.

೪. ''ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು ".

ಉ: ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯದಿಂದ ಆರಿಸಲಾದ 'ಹಲಗಲಿ ಬೇಡರು 'ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ ಬ್ರಿಟಿಷರು ಜಾರಿಗೆ ತಂದ ನಿಶ್ಯಸ್ತ್ರೀಕರಣ ಕಾಯ್ದೆ ವಿರೋಧಿಸಿದ ಹಲಗಲಿ ಬೇಡರು ದಂಗೆಯಲ್ಲಿ ಜೀವದ ಹಂಗು ತೊರೆದು ಕಾದಾಡಿದರು. ಅವರ ದಂಗೆಯ ನಾಯಕತ್ವ ವಹಿಸಿದವರು ವೀರ ಮರಣ ಹೊಂದಿದರು . ಹಲಗಲಿ ಬೇಡರ ಊರನ್ನು ಲೂಟಿ ಮಾಡಿ ಸುಟ್ಟು ಹಾಕಲಾಯಿತು ಅದರ ಕುರಿತು ತನಗೆ ಹೊಳೆದಷ್ಟು ವರ್ಣಿಸಿರುವುದಾಗಿ ಜನಪದ ರಚನೆಕಾರ ಮೇಲಿನಂತೆ ಹೇಳಿದ್ದಾನೆ.

ಸ್ವಾರಸ್ಯ : ಕಂಪನಿ ಸರ್ಕಾರದವರು ಬೇಡರಿಂದ ಆಯುಧ ಪಡೆಯಲ ಮಾಡಿದ ದೌರ್ಜನ್ಯ ,ಅವರ ಕ್ರೌರ್ಯವನ್ನು ನೋಡಿದ ಲಾವಣಿಕಾರ ಅಸಹಾಯಕನಾಗಿ ಪ್ರಸ್ತುತ ಘಟನೆಯನ್ನು ವಿವರಿಸಿರುವನು ಎಂದು ಮೇಲಿನ ವಾಕ್ಯವು ಸೂಚಿಸುವುದು.

## ಕೊಟ್ಟಿರುವ ಪದಗಳಲ್ಲಿ ಸೂಕ್ತವಾದುದನ್ನು ಬಿಟ್ಟ ಸ್ಥಳದಲ್ಲಿ ಬರೆಯಿರಿ.

೧. ಹಲಗಲಿ ಬಂಟರ ಕದನ ವೀರರಸ ಪ್ರಧಾನವಾದ --- ಲಾವಣಿ

(ಕತೆ,ಗಾದೆ,ಒಗಟು, ಲಾವಣಿ )

೨. ಹಲಗಲಿಯ ಜಿಲ್ಲಾ ಸ್ಥಾನವಾಗಿದ್ದ ಸ್ಥಳ..ಕಲಾದಗಿ.

(ಬಾಗಲಕೋಟೆ ,ಕಲಾದಗಿ, ಮುಧೋಳ, ಹೆಬಲಕ )

೩.ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ . ನಿಶ್ಯಸ್ತ್ರೀಕರಣ

(ಯುದ್ಧಶಾಸನ, ನಿಶಸ್ತ್ರೀಕರಣ ,ಕಬುಲಶಾಸನ ,ಕುರ್ತಕೋಟಿಶಾಸನ )

೪. ಲಾವಣಿಕಾರ ಅಂಕಿತಗೊಳಿಸಿದ ದೈವ.. ಕಲ್ಮೇಶ.

(ಕಲ್ಮೇಶ, ಹನುಮ, ರಾಮ, ಲಕ್ಷ್ಮೀಶ )

೫.ವಿಲಾತಿ ಪದದ ಸಸರಿಯಾದ ರೂಪ .. ವಿಲಾಯಿತಿ.

. (ಆಯುಧ, ವಿಹಾರ, ವಿಲಂತಿ,ವಿಲಾಯಿತಿ)

## ಭಾಷಾ ಚಟುವಟಿಕೆ

ಪದಗಳನ್ನು ವಿಗ್ರಹಿಸಿ ಸಮಾಸ ಹೆಸರಿಸಿ.

ಮುಂಗೈ = ಕೈಯ +ಮುಂದು =ಅಂಶಿಸಮಾಸ

ನಡು ರಾತ್ರಿ =ರಾತ್ರಿಯ +ನಡುವೆ=ಅಂಶಿ ಸಮಾಸ

ಹನುಮಭೀಮರಾಯ =ಹನುಮನೂ +ಭೀಮನೂ +ರಾಮನೂ =ದ್ವಂದ್ವ ಸಮಾಸ

ಮೋಸಮಾಡು =ಮೋಸವನ್ನು + ಮಾಡು = ಕ್ರಿಯಾಸಮಾಸ

ಗ್ರಾಮ್ಯ ಪದಗಳಿಗೆ ಗ್ರಂಥಸ್ಥ ರೂ ಪ ಬರೆಯಿರಿ.

ಹೀಂಗ- ಹೀಗೆ,ಮ್ಯಾಗ -ಮೇಲೆ, ಕಳುವ್ಯಾರೆ-ಕಳಿಸಿದರು ,

ಇಲ್ಲದಂಗ - ಇಲ್ಲದ ಹಾಗೆ, ಇಸವಾಸ- ವಿಶ್ವಾಸ, ಸಕ್ಕಾರಿ- ಸಕ್ಕರೆ.

## ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿ.

ಅ. ''ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲು ಸಿಡಿದಾಂಗ ''.

ಉಪಮೇಯ : ಒಳಗಿನ ಮಂದಿ ಹೊಡೆದ ಗುಂಡು

ಉಪಮಾನ :ಮುಂಗಾರಿನ ಸಿಡಿಲು

ಉಪಮಾವಾಚಕ : ಹಾಂಗ (ಹಾಗೆ)

ಸಮಾನಧರ್ಮ :ಸಿಡಿಯು ವುದು

ಅಲಂಕಾರ :ಉಪಮಾ

ಸಮನ್ವಯ : ಉಪಮೇಯವಾದ ಒಳಗಿನ ಮಂದಿ ಹೊಡೆಸಿದ ಗುಂಡನ್ನು ಉಪಮಾನವಾದ ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಹೋಲಿಸಿ ವರ್ಣಿಸಿರುವದರಿಂದ ಇದು ಉಪಮಾ ಅಲಂಕಾರವಾಗಿದೆ.

೨ ''ಸಿಡಿಲ ಸಿಡಿದಾಂಗ ಗುಂಡು ಸುರಿದಾವ ''.

ಉಪಮೇಯ_ ಸುರಿದ ಗುಂಡು (ಗುಂಡು ಸುರಿಯುವುದು )

ಉಪಮಾನ -ಸಿಡಿದ ಸಿಡಿಲು (ಸಿಡಿಲು ಸಿಡಿಯುವುದು )

ಉಪಮಾವಾಚಕ -ಹಾಂಗ (ಹಾಗೆ)

ಸಮಾನ ಧರ್ಮ – ಸಿಡಿಯುವುದು

ಅಲಂಕಾರ -ಉಪಮಾ

ಸಮನ್ವಯ - ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

ದೇಶ್ಯ ಅನ್ಯ ದೇಶ್ಯಪದಗಳನ್ನು ಗು ರು ತಿಸಿ.

ದೇಶ್ಯ-ಹೊತ್ತು , ಬಂಟರು , ಮುಂಗೈ, ಮುಂಗಾರು

ಅನ್ಯದೇಶ್ಯ_ಹತಾರ, ಮಸಲತ್ತು, ಹುಕುಮ, ಸಾಹೇಬ,ಕಾರಕೂನ,ಸಿಪಾಯಿ .

| | |
|---|---|
| ಘಟಕ ಪರೀಕ್ಷೆ ೧ ೨೫ ಅಂಕಗಳು<br>ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೪*೧=೬<br>೧.ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು? ೨ಹಲಗಲಿಯ ನಾಲ್ವರು ಪ್ರಮುಖರು ಯಾರು ?೩. ಹಲಗಲಿ ಗು ರುತು ಉಳಿಯದಂತಾದುದು ಏಕೆ ?೪. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?<br>ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>೧. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ? ೨. ಹಲಗಲಿಗೆ ದಂಡು ಬರಲು ಕಾರಣವೇನು ? | ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ. ೩*೩=೯<br>೧."ಎಲ್ಲ ಜನರಿಗೆ ಜೋರು ಮಾಡಿ ಕಸಿದು ಕೊಳ್ಳಿರಿ ಹತಾರ ."೨." ಜೀವ ಸತ್ತು ಹೋಗು ವುದು ಗೊತ್ತ".೩." ಹೊಡೆದರೊ ಗುಂಡ ಕರುಣ ಇಲ್ಲದಂಗ ".<br>೮ ರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ ೨*೬=೬<br>ಹಲಗಲಿ ದಂಗೆಯ ಪರಿಣಾಮವೇನು ?<br>ಹಲಗಲಿ ದಂಗೆಗೆ ಕಾರಣವೇನು ?ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ? |

## ಪದ್ಯಪಾಠ –೪ ಕೌರವೇಂದ್ರನ ಕೊಂದೆ ನೀನು –ಕುಮಾರವ್ಯಾಸ

### ಕೃತಿಕಾರರ ಪರಿಚಯ




ಕುಮಾರವ್ಯಾಸ ಎಂದು ಪ್ರಸಿದ್ಧನಾಗಿರುವ ಗದುಗಿನ ನಾರಣಪ್ಪನ ಕಾಲ ಸುಮಾರು ಕ್ರಿ.ಶ. ೧೪೩೦ .ಇವನು ಗದಗ ಪ್ರಾಂತದ ಕೋಳಿವಾಡದವನು. ಗದುಗಿನ ಭಾರತ , ಕನ್ನಡ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರನ್ನು ಹೊಂದಿರುವ ಕರ್ಣಾಟ ಭಾರತ ಕಥಾ ಮಂಜರಿ ಇವನು ಬರೆದಿರುವ ಮಹಾಕಾವ್ಯವಾಗಿದೆ. ಇವನಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದಿದೆ.

ಪ್ರಸ್ತುತ ಪದ್ಯಭಾಗವನ್ನು ಕುಮಾರವ್ಯಾಸ ವಿರಚಿತ ಕರ್ಣಾಟ ಭಾರತ ಕಥಾಮಂಜರಿ ಕಾವ್ಯದ ಉದ್ಯೋಗಪರ್ವದಿಂದ ಆಯ್ದುಕೊಳ್ಳಲಾಗಿದೆ.

### ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?
ಉ: ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಮೇದಿನಿ ಪತಿ ಎಂದು ಕರ್ಣನನ್ನುಕರೆದನು.

೨. ಕುಮಾರವ್ಯಾಸನ ಆರಾಧ್ಯದೈವ ಯಾರು ?
ಉ: ಕುಮಾರವ್ಯಾಸನ ಆರಾಧ್ಯದೈವ ವೀರನಾರಾಯಣ

೩. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು ?
ಉ: ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲಸಹದೇವರು.

೪. ಕುಮಾರವ್ಯಾಸನಿಗಿರುವ ಬಿರುದು ಯಾವುದು ?
ಉ:ಕುಮಾರವ್ಯಾಸನಿಗಿರುವ ಬಿರುದು ರೂಪಕ ಸಾಮ್ರಾಜ್ಯ ಚಕ್ರವರ್ತಿ

೫. ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು ?
ಉ: ವ್ಯಾಸರು ಸಂಸ್ಕೃತದಲ್ಲಿ ಬರೆದ ಮಹಾಭಾರತವನ್ನು ನಾರಣಪ್ಪನು ಕನ್ನಡದಲ್ಲಿ ರಚಿಸಿ ತನ್ನನ್ನು ಅವರ ಮಗ ಎಂಬ ಅರ್ಥದಲ್ಲಿ ಕುಮಾರವ್ಯಾಸನೆಂದು ಕರೆದುಕೊಂಡಿದ್ದಾನೆ.

### ಕೊಟ್ಟಿರುವ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?
ಉ: ಕರ್ಣ,ಕೌರವರು ಯಾದವರಿಗೆ ಭೇದವಿಲ್ಲ.ವಿಚಾರಿಸಿದರೆ ಇಬ್ಬರೂ ಒಂದೇ ವಂಶದವರು.(ಯಯಾತಿಯ ಮಕ್ಕಳು ಪುರು, ಯದು ,ಪುರುವಿನ ವಂಶದವರು ಕೌರವರು. ಯದುವಿನ ವಂಶದವರು ಯಾದವರು)ನಿನ್ನಾಣೆಯಾಗಿಯೂ ನೀನೇ ರಾಜ (ಮೇದಿನಿಪತಿ )ಆದರೆ ನಿನಗೆ ಅದರ ಅರಿವಿಲ್ಲ ಎಂದು ಹೇಳುವ ಮೂಲಕ ದಾನವರ ವೈರಿಯಾದ ಶ್ರೀಕೃಷ್ಣನು ರವಿಸುತ (ಕರ್ಣ )ನ ಕಿವಿಯಲ್ಲಿ ಭಯವನ್ನು ಬಿತ್ತಿದನು.

೨.ಕುಂತಿ , ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?
ಉ: ಕುಂತಿಯು ತಾನು ಪಡೆದ ಮಂತ್ರೋಪದೇಶದಿಂದ ಮೊದಲು ಸೂರ್ಯನನ್ನು ಸ್ಮರಿಸಿ ಕರ್ಣನನ್ನು,ನಂತರದಲ್ಲಿ ಯಮದೇವನ ಅನುಗ್ರಹದಿಂದ ಧರ್ಮರಾಯನನ್ನೂ,ಆನಂತರ ವಾಯುದೇವನನ್ನು ನೆನೆದು ಅವನ ಅನುಗ್ರಹದಿಂದ ಕಲಿಭೀಮನನ್ನೂ ,ದೇವೇಂದ್ರನನ್ನು ಸ್ಮರಿಸಿ ಅವನ ಕೃಪೆಯಿಂದ ಅರ್ಜುನನ್ನೂ ಪಡೆದಳು.ತಾನು ಪಡೆದ ಮಂತ್ರಗಳಲ್ಲಿ ಒಂದನ್ನು ತನ್ನ ಸವತಿಯಾದ (ಪಾಂಡುವಿನ ಇನ್ನೊಬ್ಬ ಪತ್ನಿ )ಮಾದ್ರಿಗೆ ಕರುಣಿಸಿದಾಗ ಅವಳು ಅಶ್ವಿನಿ ದೇವತೆಗಳನ್ನು ಸ್ಮರಿಸಿ ಅವರ ಅನುಗ್ರಹದಿಂದ ನಕುಲ ಸಹದೇವರನ್ನು ಮಕ್ಕಳಾಗಿ ಪಡೆದಳು.

೩.ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?
ಉ: ಕರ್ಣನ ಜನ್ಮ ವೃತ್ತಾಂತವನ್ನು ಕೃಷ್ಣನು ಹೇಳಿ ಅವನಿಗೆ ಇಡೀ ಹಸ್ತಿನಾಪುರದ ರಾಜ್ಯಭಾರವನ್ನು ಕೊಡಿಸುವುದಾಗಿ ಹೇಳಿದಾಗ ಕರ್ಣನ ಕೊರಳ ನರಗಳು ಹಿಗ್ಗಿದವು (ಗದ್ಗದ )ಕಣ್ಣೀರು ಧಾರೆಯಾಗಿ ಸುರಿಯಿತು.ಅವನು ಬಹಳವಾಗಿ ನೊಂದು ''ಅಯ್ಯೋ! ಕುರುಪತಿಗೆ ಕೇಡಾಯಿತು''ಎಂದು ತನ್ನ ಮನದೊಳಗೆ ಅಂದುಕೊಂಡು ''ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ?ಬರಿದೆ ನನ್ನ ಜನ್ಮವೃತ್ತಾಂತವನ್ನು ಹೇಳಿ ಕೊಂದನು .ಹಲವು ಮಾತೇಕೆ ? ''ಎಂದು ಚಿಂತಿಸಿದನು .

೪. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?
ಉ: ಮರಳು ಮಾಧವನೇ ,ಈ ಭೂಮಿರಾಜ್ಯದ ಸಿರಿಗೆ ಸೋಲುವಂತವನು ನಾನಲ್ಲ. ಕೌಂತೇಯರು (ಪಾಂಡವರು ) , ಕೌರವರು ನನಗೆ ಓಲೈಸಬೇಕೆನ್ನುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ.(ಇಚ್ಛೆಯಿಲ್ಲ )ನನ್ನನ್ನು ಸಲಹಿದ ನನ್ನ ಒಡೆಯನಿಗೆ (ದಾನಿ –ದಾತೃ ) ಅವನನ್ನು ವಿರೋಧಿಸುವ ಶತ್ರುಗಳ ತಲೆಯನ್ನು ಕಡಿದು ಒಪ್ಪಿಸುವೆನು ಎನ್ನು ಆತುರದಲ್ಲಿದ್ದೇನೆ .ಕೌರವೇಂದ್ರನನ್ನು ನೀನು ಕೊಂದೆ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.ಪಾಂಡವರು ದುರ್ಯೋಧನನ ಶತ್ರುಗಳು.ಅವರನ್ನು ನಾಶಮಾಡವುದೇ ತನ್ನ ಧರ್ಮ ಅದು ತನ್ನ ಸ್ವಾಮಿ ಮತ್ತು ಮಿತ್ರನಾದ ದುರ್ಯೋಧನನಿಗೆ ತಾನು ಸಲ್ಲಿಸಬಹುದಾದ ಕಾಣಿಕೆ ಎಂದು ಕಾಯುತ್ತಿದ್ದವನಿಗೆ ಪಾಂಡವರು ಅವನ ಸೋದರರೆಂದು ತಿಳಿದಾಗ ಅವರನ್ನು ತನ್ನ ಕೈಯಾರೆ ಸಾಯಿಸಲಾಗದ ದೌರ್ಬಲ್ಯ ಕಾಡುವುದು ಸಹಜ.ಅವರನ್ನು ನಾಶ ಮಾಡದಿದ್ದರೆ ಕೌರವನ ಸಾವು ಖಚಿತ.ಇದಕ್ಕೆ ಕೃಷ್ಣನೇ ಕಾರಣ ಎಂದು ಕರ್ಣನ ಅಭಿಪ್ರಾಯವಾಗಿದೆ.

೫.ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?
ಉ: ವೀರ ಕೌರವರಾಯನೇ ನನಗೆ ಒಡೆಯನು,ಆತನ ಶತ್ರುಗಳೇ ನನ್ನ ಶತ್ರುಗಳು ,ಅವನ ಅಭಿಮಾನವೇ (ಹೊಗಳಿಕೆಯೇ ) ನನಗೆ ಅಭಿಮಾನ .ಅವನಿಗೆ ಆಗುವುದೇ ನನಗೆ ಆಗಲಿ ,ಕೃಷ್ಣನೇ ಕೇಳು, ನಾಳೆ ಯುದ್ಧಭೂಮಿಯಲ್ಲಿ ನನ್ನ ಭುಜಬಲಶೌರ್ಯದ ಪರಾಕ್ರಮವನ್ನುಪಾಂಡುತನಯ (ಪಾಂಡವರು)ರ ಮೇಲೆ ತೋರಿವೆನುನಾಳೆ ಬರಲಿರುವ ಭಾರತ(ಮಹಾಭಾರತ)ಯುದ್ಧವು ಮಾರಿಗೆ ಔತಣವಾಗುವುದು.ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ , ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು (ಪ್ರಾಣ ಬಿಡುವೆನು )ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆ ಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ?

ಉ: ಕೌರವರಿಗೂ ಪಾಂಡವರಿಗೂ ಯುದ್ಧ ನಡೆಯುವುದು ಖಚಿತವಾದಾಗ ಕೌರವನಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿ ಕರ್ಣನಿರುವುದರಿಂದ ಅವನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ವೇದಿಕೆಯೊಂದನ್ನು ಸಿದ್ಧಪಡಿಸಿ ಕರ್ಣನನ್ನು ತನ್ನೊಡನೆ ಕರೆದೊಯ್ಯುತ್ತಾನೆ. ಶ್ರೀಕೃಷ್ಣನ ಪಕ್ಕದಲ್ಲಿ ಕುಳಿತುಕೊಳ್ಳಲು ಸಂಕೋಚಪಡುವ ಕರ್ಣನಿಗೆ ಶ್ರೀಕೃಷ್ಣನು ಕೌರವರು ಯಾದವರಲ್ಲಿ ಯಾವುದೇ ಭೇದವಿಲ್ಲ ,ಹಾಗೆ ನೋಡಿದರೆ ನೀನೇ ಮೇದಿನಿಪತಿ.ಹಿಂದೆ ನಡೆದುದು ನಿನಗೆ ಅರಿವಿಲ್ಲ .ಮಂತ್ರಗಳ ಸಹಾಯದಿಂದ ಕುಂತಿ ಪಡೆದ ಮಕ್ಕಳಲ್ಲಿ ನೀನೇ ಮೊದಲನೆಯವನು.ಪಾಂಡವರೆಲ್ಲರೂ ನಿನ್ನ ಸಹೋದರರು. ಆದ್ದರಿಂದ ಈ ಹಸ್ತಿನಪುರದ ರಾಜನನ್ನಾಗಿ ನಿನಗೆ ಅಧಿಕಾರ ಸಿಗುವಂತೆ ಮಾಡುವೆನು.ಪಾಂಡವರ ಕಡೆಯವರೂ ಕೌರವನ ಕಡೆಯವರೂ ನಿನ್ನನ್ನು ಓಲೈಸುವಂತೆ ಆಗುವುದು .ಅವೆರಡೂ ಸಂತತಿಯವರೂ ನಿನಗೆ ಕಿಂಕರರೆನಿಸುವರು.ನಿನ್ನ ಬಲಭಾಗದಲ್ಲಿ ಕೌರವನ ಕಡೆಯವರೂ, ಎಡಭಾಗದಲ್ಲಿ ಪಾಂಡವರ ಕಡೆಯವರೂ ,ನಿನ್ನ ಎದುರಿಗೆ ಮಾದ್ರ,ಮಾಗಧ,ಯಾದವರು ಮೊದಲಾದ ರಾಜರು ಅವರೆಲ್ಲರ ನಡುವೆ ನೀನು ಓಲಗದಲ್ಲಿ ಕಂಗೊಳಿಸುವ ಆ ವೈಭವವನ್ನು ಕಲ್ಪಿಸಿಕೋ .ಅದೆಲ್ಲವನ್ನು ಬಿಟ್ಟು ಕೌರವನ ಎದುರು ಜೀಯ ಪ್ರಸಾದ ಎಂದು ಅವನ ಸೇವಕನಂತೆ ಜೀವಿಸುವುದು ನಿನಗೆ ತರವಲ್ಲ.ನನ್ನಾಣೆಯಾಗಿಯೂ ಹೇಳುವೆ ಹಸ್ತಿನಪುರದ ರಾಜ್ಯವನ್ನು ವಹಿಸಿಕೊಂಡು ಕುಂತಿ ಮಕ್ಕಳಿಂದ ಸೇವೆಯನ್ನು ಪಡೆಯುವುದರಿಂದ ಯಾವುದೇ ಹಾನಿಯಿಲ್ಲಎಂದು ಶ್ರೀಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದನು.

೨. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಉ: ಪಾಂಡವರು ತನ್ನ ಸಹೋದರರು ಎಂಬ ಸತ್ಯವನ್ನು ಶ್ರೀಕೃಷ್ಣನು ಹೇಳಿದಾಗ ಕರ್ಣನ ಕೊರಳ ನರಗಳು ಬಿಗಿದವು.ಅವನ ಕಂಠ ಗದ್ಗದವಾಯಿತು.ಅವನ ಕಣ್ಣುಗಳಿಂದ ಧಾರಾಕಾರವಾಗಿ ನೀರು (ಕಣ್ಣೀರು ) ಸುರಿಯಲಾರಂಭಿಸಿತು.ಅಯ್ಯೋ ಕುರುಪತಿಗೇ ಕೇಡಾಯಿತು ಎಂದು ತನ್ನ ಮನದೊಳಗೆ ಮರುಗಿದನು.ಹರಿಯ ದ್ವೇಷ ದ ಹೊಗೆ ಹೆಚ್ಚಾಗದೇ ಇರುವುದೇ ? ಅಂದರೆ ಶ್ರೀಕೃಷ್ಣನು ಕೌರವನ ಮೇಲೆ ಹಗೆ ಸಾಧಿಸದೇ ಬಿಡದಿರುವನೇ !ಅಷ್ಟೇ ಅಲ್ಲ ಶ್ರೀಕೃಷ್ಣನು ತನ್ನ ವಂಶದ ವಿವರವನ್ನು ಹೇಳಿ ,ಪಾಂಡವರು ತನ್ನ ಸಹೋದರರು ಎಂದು ಹೇಳುವ ಮೂಲಕ ತನ್ನನ್ನು ದುರ್ಬಲನಾಗಿಸಿದನು.ಎಂದು ಮರುಗಿದನು.

೩. ಕರ್ಣನ ನಿರ್ಧಾರ ಸರಿ ಎನ್ನುವಿರಾ ?

ಉ: ಕರ್ಣನ ದೃಷ್ಟಿಯಿಂದಲೇ ನೋಡಿದಾಗ ಅವನು ತೆಗೆದುಕೊಂಡ ನಿರ್ಧಾರವು ಸರಿ ಎನ್ನಿಸುವುದು. ಸೂತಪುತ್ರನೆಂದು ಸಮಾಜದಿಂದ ದೂಷಣೆಗೆ ಒಳಗಾದ ಸಂದರ್ಭದಲ್ಲಿ ಅವನಿಗೆ ಅಂಗರಾಜ್ಯವನ್ನು ನೀಡಿ ಅವನಿಗೊಂದು ಸ್ಥಾನವನ್ನು ಕಲ್ಪಿಸಿದವನು ದುರ್ಯೋಧನ ನಾದ್ದರಿಂದ ತನ್ನ ಬದುಕು ಅವನಿಗಾಗಿಯೇ ಮೀಸಲು ಎನ್ನುವ ಅವನ ಸ್ವಾಮಿನಿಷ್ಠೆಯನ್ನು ಎಂಥವರೂ ಮೆಚ್ಚಬೇಕಾದುದೇ .ಮಹಿಯ ಸಿರಿಗೆ ಸೋಲುವವನು ತಾನಲ್ಲ ,ಕೌಂತೇಯರೂ ಸುಯೋಧನರೂ ತನ್ನ ಸೇವಕರಾಗುವುದರಲ್ಲಿ ಯಾವುದೇ ಹಂಬಲವಿಲ್ಲ.ತನ್ನನ್ನು ಸಲಹಿದ ತನ್ನ ಒಡೆಯನ ಇಚ್ಛೆಯಂತೆ ಅವನ ಶತ್ರುಗಳ ತಲೆಯನ್ನು ಒಪ್ಪಿಸುವುದೇ ತನಗೆ ಇರುವ ಹಂಬಲ.ವೀರ ಕೌರವನೇ ತನ್ನ ಒಡೆಯ ಅವನ ಶತ್ರುಗಳು ನನಗೂ ಶತ್ರುಗಳುಎನ್ನುವ ಅವನ ಮಾತುಗಳಲ್ಲಿ ಕೌರವನ ಕುರಿತಾದ ಅಭಿಮಾನ ಮತ್ತು ಸ್ವಾಮಿನಿಷ್ಠೆಯನ್ನು ಗಮನಿಸಬಹುದು.ಕೌರವನ ಋಣ ಭಾರ ತನ್ನ ಮೇಲಿರುವುದರಿಂದ ಅವನಿಗಾಗಿ ತನ್ನ ದೇಹ ಮತ್ತು ಪ್ರಾಣವನ್ನು ತ್ಯಾಗ ಮಾಡಲೂ ಸಿದ್ಧ ಎಂಬ ಅವನ ಉದಾತ್ತ ಭಾವವೂ ಇಲ್ಲಿ ವ್ಯಕ್ತವಾಗಿರುವುದು.ಕರ್ಣನು ಶ್ರೀಕೃಷ್ಣನ ಮಾತಿಗೆ ಒಡಂಬಟ್ಟಿದ್ದೇ ಆದರೆ ಇಡೀ ಹಸ್ತಿನಪುರದ ರಾಜ್ಯವನ್ನು ಅವನು ಆಳಬಹುದಾಗಿತ್ತು.ಅಲ್ಲದೇ ಪಾಂಡವರೂ ಕೌರವರೂ ಅವನ ಸೇವಕರಾಗುವ ಅವಕಾಶ ಅವನದಾಗುತಿತ್ತು.ಆದರೆ ತಾನು

ಪಾಂಡವರ ಸಹೋದರನೆಂದು ತಿಳಿದು ಅವನ ಮನವು ದುರ್ಬಲವಾದರೂ ತನ್ನನ್ನು ಆಪತ್ಕಾಲದಲ್ಲಿ ಓಲೈಸಿದ ದುರ್ಯೋಧನನನನ್ನು ತೊರೆಯುವುದು ಅವನಿಗೆ ಸರಿಕಾಣಲಿಲ್ಲ.ಸಹೋದರರರನ್ನು ನಾಶ ಮಾಡದೇ ತಾನೇ ಸಾಯುವುದು ಅನಿವಾರ್ಯ ಎಂದು ತಿಳಿದಾಗಲೂ ದುರ್ಯೋಧನನಿಗಾಗಿ ಎಲ್ಲ ತ್ಯಾಗಕ್ಕೂ ಅವನು ಸಿದ್ಧನಾಗಿದ್ದನು.ಆದ್ದರಿಂದ ಕರ್ಣನ ನಿಲುವು ಒಪ್ಪಲರ್ಹವೆನಿಸುವುದು.

**ಸಂದರ್ಭ ಸಹಿತ ಸ್ವಾರಸ್ಯವಿವರಿಸಿ.**

೧ ." ರವಿಸುತನ ಕಿವಿಯಲಿ ಬಿತ್ತಿದನು ಭಯವ "

ಉ: ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ 'ಕೌರವೇಂದ್ರನ ಕೊಂದೆ ನೀನು 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾನೆ.

ಸಂದರ್ಭ: ಮಹಾಭಾರತ ಯುದ್ಧವನ್ನು ನಿಲ್ಲಿಸಬೇಕೆಂದು ಪಾಂಡವರ ಪರ ರಾಯಭಾರಿಯಾಗಿ ಬಂದ ಶ್ರೀಕೃಷ್ಣನು ತನ್ನ ಪ್ರಯತ್ನದಲ್ಲಿ ವಿಫಲನಾದಾಗ ದುರ್ಯೋಧನನ ಪಡೆಯಲ್ಲಿದ್ದ ಕರ್ಣನಿಂದ ಪಾಂಡವರಿಗೆ ಕೇಡು ಖಚಿತ ಎಂದು ಅರಿತು ಅದನ್ನು ಹೇಗಾದರೂ ತಡೆಯಬೇಕೆಂದು ಉದ್ದೇಶಿಸಿ ಕರ್ಣನನ್ನು ತನ್ನ ಜೊತೆಯಲ್ಲಿ ಕರೆ ತರುತ್ತಾನೆ.ಪೀಠದಲ್ಲಿ ತನ್ನ ಜೊತೆ ಕೂರಿಸಿಕೊಂಡಾಗ ಕರ್ಣ ನಿನ್ನಜೊತೆ ನಾನು ಸಮನಲ್ಲ ಎಂದು ಹಿಂಜರಿಯುತ್ತಾನೆ.ಆ ಸಂದರ್ಭದಲ್ಲಿ ಶ್ರೀಕೃಷ್ಣನು ಯಾದವರೂ ಕೌರವರೂ ಒಂದೇ ವಂಶದವರು ,ಹಾಗೆ ನೋಡಿದರೆ ನೀನೂ ಸಹ ಅದೇ ವಂಶದವನಾಗಿದ್ದು ನೀನೇ ಮೇದಿನಿಪತಿ.ಹಿಂದೆ ಏನು ನಡೆದಿದೆ ಎಂದು ನಿನ್ನ ಅರಿವಿಗೆ ಬಂದಿಲ್ಲ ಎಂದು ಹೇಳುವ ಮೂಲಕ ಕರ್ಣನ ಮನದಲ್ಲಿ ಗೊಂದಲವನ್ನು ಉಂಟು ಮಾಡುತ್ತಾನೆ ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಪಾಂಡವರು ತನ್ನ ಸಹೋದರರೆಂದು ತಿಳಿದಾಗ ಕರ್ಣನ ಮನದಲ್ಲಿ ಗೊಂದಲವು ಉಂಟಾಗಬಹದು .ಆ ಮೂಲಕ ಕೌರವರ ಶಕ್ತಿಯನ್ನು ಕುಂದಿಸಬಹುದು ಎಂಬ ಕೃಷ್ಣನ ಜಾಣತನ ವ್ಯಕ್ತವಾಗಿದೆ.

೨. "ಬಾಯ್ದಂಬುಲಕೆ ಕೈಯಾನುವರೆ "

ಉ: ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ 'ಕೌರವೇಂದ್ರನ ಕೊಂದೆ ನೀನು' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.ನಿನಗೆ ಹಸ್ತಿನಪುರದ ರಾಜನ ಹಿರಿಮೆಯನ್ನುಕೊಡಿಸುವೆನು.ಪಾಂಡವ ಕೌರವ ರಾಜರೆಲ್ಲರೂ ನಿನ್ನನ್ನು ಓಲೈಸುವರು.ಈ ಎರಡೂ ಸಂತತಿಯವರೂ ನಿನಗೆ ಸೇವಕರೆನಿಸಿಕೊಳ್ಳುವ ಹಿರಿಮೆಯನ್ನು ತಿರಸ್ಕರಿಸಿ ನೀನು ದುರ್ಯೋಧನನ ಬಾಯ್ದಂಬುಲಕೆ ಕೈಯೊಡ್ಡುವುದು ಸರಿಯೇ ?ಹೇಳು ಎಂದು ಶ್ರೀಕೃಷ್ಣನು ಕರ್ಣನನ್ನು ಪ್ರಶ್ನಿಸುವನು.

ಸ್ವಾರಸ್ಯ : ಇಡೀ ಸಾಮ್ರಾಜ್ಯವು ತನ್ನದಾಗಬಹುದಾದ ಸಾಧ್ಯತೆಯಿದ್ದರೂ ಸಹ ಕೌರವನ ಅಧೀನತ್ವವನ್ನು ಒಪ್ಪಿಕೊಳ್ಳುವುದು ಉಚಿತವೇ ಎನ್ನುವ ಮೂಲಕ ಕರ್ಣನ ಆತ್ಮಾಭಿಮಾನವನ್ನು ಕೃಷ್ಣನು ಕೆಣಕುವುದನ್ನು ಇಲ್ಲಿ ನೋಡಬಹುದು.

೩. "ಜೀಯ ಹಸಾದವೆಂಬುದು ಕಷ್ಟ "

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿಯಿಂದ ಆರಿಸಲಾದ 'ಕೌರವೇಂದ್ರನ ಕೊಂದೆ ನೀನು 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

ಸಂದರ್ಭ : ನಿನ್ನ ಎಡ ಭಾಗದಲ್ಲಿ ಕೌರವನ ಸಮೂಹದವರು ,ಬಲ ಭಾಗದಲ್ಲಿ ಪಾಂಡವರ ಸಮೂಹ (ಪಾಂಡು ರಾಜನ ಮಕ್ಕಳು ),ಇದಿರಿನಲ್ಲಿ ಮಾದ್ರಿ, ಮಾಗಧ, ಯಾದವಾದಿಗಳು ಇವರೆಲ್ಲರ ನಡುವೆ ನೀನು ಓಲಗದಲ್ಲಿ ಶೋಭಿಸುವ ನೀನು ಇಂತಹ ಮಹಾ ಸೌಭಾಗ್ಯವನ್ನು ಅತ್ತ ಎಸೆದು ಕುರುಪತಿ (ಕೌರವ ,ದುರ್ಯೋಧನ)ನಿನಗೇನಾದರೂ ಹೇಳಿದರೆ 'ಜೀಯಾ, ಮಹಾಪ್ರಸಾದ' ಎಂದು ಒಪ್ಪಿಕೊಳ್ಳುವುದು ನಿನಗೆ ಕಷ್ಟವಾಗುವುದು ಎಂದು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು.

ಸ್ವಾರಸ್ಯ : ಇಡೀ ಭೂಮಂಡಲದ ಸಾಮ್ರಾಟನೆನಿಸಿಕೊಳ್ಳುವ ಅವಕಾಶವನ್ನು ಒಪ್ಪಿಕೊಂಡು ಕೌರವನ ಅಧೀನತ್ವವನ್ನು ತಿರಸ್ಕರಿಸಬೇಕೆಂಬ ಕೃಷ್ಣನ ಹಿತವಚನ ಇಲ್ಲಿ ವ್ಯಕ್ತವಾಗಿದೆ.

೪.ನಿನ್ನಪದೆಸೆಯ ಬಯಸುವವನಲ್ಲ

ಉ: ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

ಸಂದರ್ಭ : ಎಲವೋ ಕರ್ಣನೇ ಹೇಳು, ನಿನ್ನ ಮನಸಿನ ಜಡತೆ ವ್ಯಾಕುಲಕೆ ಕಾರಣವೇನು ?ಕುಂತಿ ಪುತ್ರರಿಂದ ಓಲೈಸಿಕೊಳ್ಳುವುದು ನಿನಗೆ ಇಷ್ಟವಾಗುವುದಿಲ್ಲವೇ?ಅದು ಬೇಡವಾದರೆ ಏನೂ ಹಾನಿ ಇಲ್ಲ ,ಸುಮ್ಮನೇ ನುಡಿ ,ಮೌನವೇತಕೆ ? ಈ ಮರುಳುತನ ಬೇಡ , ನಿನ್ನ ಹಾನಿಯನ್ನು(ಅಪದೆಸೆ , ಕೇಡು ) ಬಯಸುವವನಲ್ಲ ನಾನು ಎಂದು ಕೃಷ್ಣನು ಕರ್ಣನಿಗೆ ಸಾಂತ್ವನ ಹೇಳುವನು.

ಸ್ವಾರಸ್ಯ : ಕರ್ಣನು ಪಾಂಡವರ ಸಹೋದರನಾಗಿದ್ದು ಅವನಿಗೆ ಒಳ್ಳೆಯದನ್ನು ಮಾಡಬೇಕೆಂಬ ಆಶಯವಿದೆಯೇ ಹೊರತೂ ಅವನ ಕೇಡನ್ನು ಬಯಸುವವನಲ್ಲ ಎಂಬ ಕರ್ಣನ ಕುರಿತಾದ ಕೃಷ್ಣನ ಕಾಳಜಿಯನ್ನು ಇಲ್ಲಿ ನೋಡಬಹುದು.

೫.''ಮಾರಿಗೌತಣವಾಯ್ತು ನಾಳಿನ ಭಾರತವು''

ಉ: ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ 'ಕೌರವೇಂದ್ರನ ಕೊಂದೆ ನೀನು' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕರ್ಣನು ಶ್ರೀಕೃಷ್ಣನಿಗೆ ಹೇಳಿದ್ದಾನೆ.

ಸಂದರ್ಭ : ನಾಳೆ ಬರಲಿರುವ ಭಾರತ(ಮಹಾಭಾರತ)ಯುದ್ಧವು ಮಾರಿಗೆ ಔತಣವಾಗುವುದು.ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ , ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು (ಪ್ರಾಣ ಬಿಡುವೆನು )ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

ಸ್ವಾರಸ್ಯ : ಮಹಾಭಾರತ ಯುದ್ಧದಲ್ಲಿ ಕೌರವನ ಪರವಾಗಿ ಹೋರಾಡಿ ಪಾಂಡವರ ಸೈನ್ಯವನ್ನು ಮಾರಿಗೆ ಓತಣ ಕೊಡುವೆನೆನ್ನುವ ಮೂಲಕ ಕೌರವನ ಪಕ್ಷದಲ್ಲಿದ್ದುಕೊಂಡೇ ಹೋರಾಟ ಮಾಡುವೆನೆನ್ನುವ ಕರ್ಣನ ನಿಲುವು ಇಲ್ಲಿ ವ್ಯಕ್ತವಾಗಿದೆ.

## ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

೧.ಕರ್ನಾಟಭಾರತ ಕಥಾಮಂಜರಿಯನ್ನು --------- ರಚಿಸಿದನು.(ಕುಮಾರವ್ಯಾಸ )

೨.ಗದುಗಿನ ಭಾರತವು --------- ಷಟ್ಪದಿಯಲ್ಲಿ ರಚಿತವಾಗಿದೆ.(ಭಾಮಿನಿ )

೩.ಅಶ್ವಿನೀದೇವತೆಗಳ ವರಬಲದಿಂದ ------ ಜನಿಸಿದರು (ನಕುಲಸಹದೇವರು )

೪.ಕರ್ಣನು ------- ಅನುಗ್ರಹದಿಂದ ಜನಿಸಿದನು. (ಸೂರ್ಯದೇವ)

೫.ಗದುಗಿನ ಸಮೀಪ ----- ಕುಮಾರವ್ಯಾಸನು ಹುಟ್ಟಿದ ಸ್ಥಳ .(ಕೋಳಿವಾಡ )

**ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿ.**

"ಮಾರಿಗೌತಣವಾಯ್ತು ನಾಳಿನ ಭಾರತವು "

ಉಪಮೇಯ : ನಾಳಿನ ಭಾರತ

ಉಪಮಾನ :ಮಾರಿಗೌತಣ

ಅಲಂಕಾರ : ರೂಪಕ

ಉಪಮೇಯವಾದ ನಾಳಿನ ಭಾರತವನ್ನು ಉಪಮಾನವಾದ ಮಾರಿಗೌತಣವೇ ಎಂದು ಹೇಳಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

**ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

ಇನತನೂಜ ,ದನುಜರಿಪು,ಮುರಾರಿ, ಮೇದಿನೀಪತಿ,ಕೈಯಾನು,ಮಾದ್ರಮಾಗಧಯಾದವರು,ಹೊಗೆದೋರು,ರಾಜೀವಸಖ
ಸೂರ್ಯನ (ಇನ )+ಮಗ ಯಾವನೋ ಅವನು = ಕರ್ಣ =ಬಹುವ್ರಿಹಿ ಸಮಾಸ
ದನುಜರಿಗೆ +ರಿಪು ಯಾರೋ ಅವನು =ಶ್ರೀಕೃಷ್ಣ =ಬಹುವ್ರೀಹಿ ಸಮಾಸ
ಮುರನ +ಅರಿ ಯಾರೋ ಅವನು =ಶ್ರೀಕೃಷ್ಣ =ಬಹುವ್ರೀಹಿ ಸಮಾಸ
ಮೇದಿನಿಗೆ +ಪತಿ =ತತ್ಪುರುಷಸಮಾಸ (ಮೇದಿನಿಯ +ಪತಿ )
ಕೈಯನ್ನು +ಆನು =ಕ್ರಿಯಾಸಮಾಸ
ಮಾದ್ರರೂ+ಮಾಗಧರೂ +ಯಾದವರೂ=ದ್ವಂದ್ವಸಮಾಸ
ಹೊಗೆಯನ್ನು +ತೋರು =ಕ್ರಿಯಾಸಮಾಸ
ರಾಜೀವ+ಸಖ ಯಾರೋ ಅವನು =ಸೂರ್ಯ =ಬಹುವ್ರೀಹಿ ಸಮಾಸ

**ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.**

**_ U|_ _| _ U| _ _**
ಏನು ಹೇಳ್ಳೈ ಕ ರ್ಣ ಚಿ ತ್ತ 3|4|3|4
**_ U |_ U U |UUU| _ _**
ಗ್ಲಾನಿ ಯಾವುದು ಮನಕೆ ಕುಂತೀ 3|4|3|4
**_ U |U UU U|_ U | _ U U| _ U| _ UU|_**
ಸೂನು| ಗಳ ಬೆ ಸ|ಕೈ ಸಿ |ಕೊಂಬುದು| ಸೇರ |ದೇ ನಿನ|ಗೆ || 3|4|3|4|3|4|+2
ಭಾಮಿನಿ ಷಟ್ಪದಿ ಲಕ್ಷಣ
ಇದು ಆರು ಸಾಲುಗಳುಳ್ಳ ಪದ್ಯ .ಒಂದು,ಎರಡು,ನಾಲ್ಕು,ಐದನೆಯಪಾದಗಳು ಸಮವಾಗಿದ್ದು ಮೂರು ನಾಲ್ಕು ಮಾತ್ರೆಗಳ ಎರಡೆರಡು ಗಣಗಳು ಇರುತ್ತವೆ.ಮೂರು ಮತ್ತು ಆರನೆಯ ಪಾದಗಳು ಸಮವಿದ್ದು ಮೂರು ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳು ಕೊನೆಯಲ್ಲಿ ಒಂದು ಗುರು ಬರುತ್ತದೆ.

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

೧. ತನುಜ : ಮಗ : : ಸಖ : ಗೆಳೆಯ


೨. ಯುದ್ಧ : ಜುದ್ದ : : ಪ್ರಸಾದ : ಹಸಾದ

೩. ಭೇದವಿಲ್ಲ.: ಆಗಮ ಸಂಧಿ : : ನಿಮ್ಮಡಿಗಳಲಿ : ಲೋಪ ಸಂಧಿ
೪. ಕಂದ : ನಾಲ್ಕುಸಾಲು : : ಷಟ್ಪದಿ : ಆರು ಸಾಲು

| | |
|---|---|
| ಘಟಕ ಪರೀಕ್ಷೆ -೧ ೧೫ ಅಂಕಗಳು<br>ಒಂದೊಂದು ವಾಕ್ಯದಲ್ಲಿ ಉತ್ತರಿಸಿ. ೨*೧=೨<br>೧. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?<br>೨. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು ?<br>ಕೊಟ್ಟಿರುವ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೩*೨=೬<br>೧. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?<br>೨.ಕುಂತಿ , ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು ?<br>೩. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?<br>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.<br>ಸಂದರ್ಭ ಸಹಿತ ಸ್ವಾರಸ್ಯವಿವರಿಸಿ. ೩ ಅಂಕಗಳು<br>೧ ." ರವಿಸುತನ ಕಿವಿಯಲಿ ಬಿತ್ತಿದನು ಭಯವ " | .ಘಟಕ ಪರೀಕ್ಷೆ -೨ ೧೬ ಅಂಕಗಳು<br>ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>೧.ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?೨.ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?<br>ಸಂದರ್ಭ ಸಹಿತ ಸ್ವಾರಸ್ಯವಿವರಿಸಿ. ೩*೩=೯<br>೧ "ಬಾಯ್ದುಂಬುಲಕೆ ಕೈಯಾನುವರೆ "<br>೨."ಜೀಯ ಹಸಾದವೆಂಬುದು ಕಷ್ಟ "<br>೩.ನಿನ್ನಪದೆಸೆಯ ಬಯಸುವನಲ್ಲ<br>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೩ ಅಂಕಗಳು<br>೧. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು ? |

# ಪದ್ಯ ಪಾಠ – ೫ . ಹಸುರು – ಕುವೆಂಪು

## ಕೃತಿಕಾರರ ಪರಿಚಯ :



ಕುವೆಂಪು ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪನವರು ಮಲೆನಾಡ ಮಡಿಲಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಸಮೀಪದ ಕುಪ್ಪಳಿಯಲ್ಲಿ ೧೯೦೪ ಡಿಸೆಂಬರ್ ೨೯ ರಲ್ಲಿ ಜನಿಸಿದರು. ಇವರು ಕೊಳಲು, ಪಾಂಚಜನ್ಯ, ಪ್ರೇಮಕಾಶ್ಮೀರ , ಪಕ್ಷಿಕಾಶಿ ಮೊದಲಾದ ಕವನಸಂಕಲನಗಳನ್ನು ,ನನ್ನ ದೇವರುಮತ್ತು ಇತರ ಕಥೆಗಳು ,ಸಂನ್ಯಾಸಿ ಮತ್ತು ಇತರ ಕಥೆಗಳು –ಕಥಾ ಸಂಕಲನಗಳನ್ನು ,ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಮೊದಲಾದ ಕಾದಂಬರಿಗಳನ್ನು ,ತಪೋನಂದನ, ರಸೋವೈಸಃ ಮೊದಲಾದ ವಿಮರ್ಶಾ ಸಂಕಲನಗಳನ್ನು ಬರೆದಿದ್ದಾರೆ. ನೆನಪಿನ ದೋಣಿಯಲ್ಲಿ ಎನ್ನುವುದು ಇವರ ಆತ್ಮಕಥನವಾಗಿದೆ. ಇವರಿಗೆ ಶ್ರೀರಾಮಾಯಣ ದರ್ಶನಂ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮತ್ತು ೧೯೬೮ ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ದೊರೆತಿದೆ. ಅಷ್ಟೇ ಅಲ್ಲದೆ ಇವರು ರಾಷ್ಟ್ರಕವಿ, ಪಂಪಪ್ರಶಸ್ತಿ ,ಪದ್ಮವಿಭೂಷಣ ,ಮೈಸೂರು,ಬೆಂಗಳೂರು ಮತ್ತು ಗುಲ್ಬರ್ಗ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳನ್ನೂ ಪಡೆದಿದ್ದಾರೆ.

ಪ್ರಸ್ತುತ ಪದ್ಯಭಾಗವನ್ನು ಇವರ **ಪಕ್ಷಿಕಾಶಿ** ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

## ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

ಉ : ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿಯ ಹಸುರು ಬಣ್ಣದಂತಿದೆ .

೨. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?

ಉ: ಕವಿಯು ನೋಡಿದ ಅಡಕೆಯ ತೋಟ ಬನದ ಅಂಚಿನಲ್ಲಿದೆ.

೩. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?

ಉ: ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ.

೪. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?

ಉ:ಕವಿಗೆ ಹುಲ್ಲಿನ ಹಾಸು ಮಕಮಲ್ಲಿನ ಪೊಸಪಚ್ಚೆಯ ಜಮಖಾನೆಯ ರೀತಿ ಕಂಡಿದೆ.

## ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ ?

ಉ:ಕವಿಗೆ ನವರಾತ್ರಿಯ ಸಮಯದಲ್ಲಿ ಭೂಮಿ ನವಧಾತ್ರಿಯೆನಿಸುತ್ತಿದೆ. ಹಸಿರಿನ ಕಡಲಿನಲ್ಲಿ ಕವಿಯ ಆತ್ಮವು ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಆಕಾಶ , ಗದ್ದೆ ಬಯಲು,ಮಲೆ,ಕಣಿವೆ ,ಸಂಜೆಯ ಬಿಸಿಲು ಕೂಡ ಕವಿಗೆ ಹಸುರಾಗಿ ಕಾಣುತ್ತದೆ.

೨. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?

ಉ: ಹಸುರು ಎನ್ನುವ ಪದವು ಮತ್ತೆ ಮತ್ತೆ ಕವನದಲ್ಲಿ ಆವೃತ್ತವಾಗಿ ಜಪಿಸಲ್ಪಟ್ಟು ಹಸುರಿನ ವಾತಾವರಣ ಸೃಷ್ಟಿಯಾಗುತ್ತದೆ. ಎತ್ತೆತ್ತಲೂ ಹಸುರು, ಆಗಸದಿಂದ ಹಿಡಿದು ಭೂಮಿಯಲ್ಲಿ ಗದ್ದೆಯ ಬಯಲು,ಬೆಟ್ಟ,ಕಣಿವೆ ಸಂಜೆಯ ಬಿಸಿಲು ಎಲ್ಲವೂ ಹಸುರು. ಹೂವಿನ ಕಂಪಿನ ಹಸುರಾಗಿ ,ಗಾಳಿಯ ತಂಪಿನ ಹಸುರಾಗಿ , ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿ ವರ್ಣಿಸಿದ್ದಾರೆ.

೩. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು ?

ಉ: ನವರಾತ್ರಿಯ ನವಧಾತ್ರಿಯಲ್ಲಿ ಕವಿಯ ಆತ್ಮವು ಹಸುರಿನ ಕಡಲಲ್ಲಿ ಮಿಂದು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಮಲೆನಾಡಿನ ತುಂಬ ತುಂಬಿದ ಹಸುರು,ಹಬ್ಬಿದ ಹಸುರು ಹಸುರ್ಗಡಲನ್ನು ಸೃಷ್ಟಿಸಿದೆ. ಗದ್ದೆ ಬಯಲು,ಮಲೆ,ಕಣಿವೆ ಇರಲಿ ಸಂಜೆಯ ಬಿಸಿಲೂ ಕೂಡ ಕವಿಗೆ ಹಸುರಾಗಿಯೇ ಕಾಣುತ್ತದೆ. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ. ಬೇರೆ ಬಣ್ಣವೇ ಕಾಣದಂತೆ ಭೂಮಿಯನ್ನು ಎಲ್ಲೆಲ್ಲೂ ಆವರಿಸಿರುವ ಹಸುರು ಶಬ್ದ,ಸ್ಪರ್ಷ ಗಂಧಾದಿಗಳನ್ನೂ ವ್ಯಾಪಿಸುತ್ತದೆ.ಇವೆಲ್ಲ ನೋಡಿದ ತಾದಾತ್ಮ್ಯ ಹೊಂದಿದ ಕವಿಯ ಆತ್ಮವೇ ಹಸುರುಗಟ್ಟುತ್ತದೆ.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. 'ಹಸುರು ' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.

ಉ : ಹಸುರು ಕವನವು ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರನ್ನು ಕಂಡು ಪ್ರೇರಿತವಾದ ಕವನವಾಗಿದೆ. ಇದು ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ ,ಪ್ರಕೃತಿ ಅಲ್ಲಿಯ ಹಸುರುಗಳೊಂದಿಗೆ ಕುವೆಂಪು ಹೊಂದಿದ್ದ ಸಮೀಪ ಸಂಬಂಧವನ್ನು ತೋರಿಸುತ್ತದೆ.

ನವರಾತ್ರಿಯ ಸಮಯ ಭೂಮಿ ನವಧಾತ್ರಿಯಾಗುತ್ತದೆ. ಅಷ್ಟೇ ಅಲ್ಲ ಹಸುರಿನ ಕಡಲಲ್ಲಿ ಕವಿಯ ಆತ್ಮವು ರಸಪಾನ ಸ್ನಾನದಿಂದ ಹಸುರಾಗುತ್ತದೆ. ಮಲೆನಾಡಿನ ಭರ್ತಿ ತುಂಬಿದ ಹಸುರು ,ಹಬ್ಬಿದ ಹಸುರು, ಹಸುರ್ಗಡಲನ್ನು ಸೃಷ್ಟಿಸಿದೆ. ಗದ್ದೆ ,ಬಯಲು, ಮಲೆ,ಕಣಿವೆ ಇರಲಿ ಸಂಜೆ ಬಿಸಿಲು ಕೂಡ ಕವಿಗೆ ಹಸಿರಾಗಿ ಕಾಣುತ್ತದೆ. ಆಶ್ವಯುಜದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ. ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ. ಅದು ಬೇರೆ ಬಣ್ಣವೇ ಕಾಣದಂತೆ ಹರಡಿಕೊಂಡು ಭೂಮಿಯನ್ನು ಮುಚ್ಚಿದೆ. ಎತ್ತೆತ್ತಲೂ ಹಸುರು, ಹೂವಿನ ಕಂಪಿನ ಹಸುರಾಗಿ, ಗಾಳಿಯ ತಂಪಿನ ಹಸುರಾಗಿ ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನೂ ವ್ಯಾಪಿಸುತ್ತದೆ. ಬರುಬರುತ್ತ ಒಡಲು ಹಸುರಾಗಿ, ಹರಿವ ನೆತ್ತರು ಹಸುರಾಗಿ ,ಆತ್ಮವೂ ಹಸಿರುಗಟ್ಟುತ್ತದೆ. ಅಪೂರ್ವವಾದ ಅನುಭವವನ್ನು ,ಕವಿಯು ಹಸುರಿನಲ್ಲಿ ತಲ್ಲೀನರಾಗಿರುವುದನ್ನು ಈ ಕವನದ ಮುಖಾಂತರ ಗುರುತಿಸಬಹುದಾಗಿದೆ.

೨. ಪ್ರಕೃತಿಯ 'ಹಸುರು ' ಜೀವ ಜಗತ್ತಿಗೆ ಎಷ್ಟು ಮುಖ್ಯ ಎಂಬುದನ್ನು ಕುರಿತು ನಿಮ್ಮ ಅಭಿಪ್ರಾಯಗಳನ್ನು ಬರೆಯಿರಿ.

ಉ: ಆಹಾರ: ನಾವು ತಿನ್ನುವ ಎಲ್ಲವು ನೇರವಾಗಿ ಅಥವಾ ಪರೋಕ್ಷವಾಗಿ ಸಸ್ಯಗಳಿಂದ ಬರುತ್ತದೆ. ಮಾನವ ಇತಿಹಾಸದುದ್ದಕ್ಕೂ ಸುಮಾರು 7,000 ವಿಭಿನ್ನ ಸಸ್ಯ ಜಾತಿಗಳನ್ನು ಜನರು ಆಹಾರವಾಗಿ ಬಳಸುತ್ತಾರೆ.
ವಾಯು: ದ್ಯುತಿಸಂಶ್ಲೇಷಣೆಯ ಉಪಉತ್ಪನ್ನವಾಗಿ ಸಸ್ಯಗಳಿಂದ ಆಮ್ಲಜನಕವನ್ನು ತರಲಾಗುತ್ತದೆ.
ನೀರು: ಸಸ್ಯಗಳು ನೀರಿನ ಚಕ್ರವನ್ನು ನಿಯಂತ್ರಿಸುತ್ತವ: ಅವು ಗ್ರಹದ ನೀರನ್ನು ವಿತರಿಸಲು ಮತ್ತು ಶುದ್ಧೀಕರಿಸಲು ಸಹಾಯ ಮಾಡುತ್ತದೆ. ಅವರು ಮಣ್ಣಿನಿಂದ ವಾತಾವರಣಕ್ಕೆ ವಾತಾವರಣವನ್ನು ಸಾಗಿಸಲು ಸಹ ಸಹಾಯ ಮಾಡುತ್ತದೆ.
ಆವಾಸಸ್ಥಾನ: ಸಹಜವಾಗಿ, ಮನುಷ್ಯರ ಅಸಂಖ್ಯಾತ ಬಳಕೆಗಳಿಂದ, ಸಸ್ಯಗಳು ಎಲ್ಲಾ ಆವಾಸಸ್ಥಾನಗಳ ಬೆನ್ನೆಲುಬಾಗಿವೆ. ಇತರ

ಪ್ರಾಣಿಗಳ ಮೀನು ಮತ್ತು ವನ್ಯಜೀವಿಗಳು ಆಹಾರ ಮತ್ತು ಆಶ್ರಯಕ್ಕಾಗಿ ಸಸ್ಯಗಳನ್ನು ಅವಲಂಬಿಸಿವೆ. ಮೆಡಿಸಿನ್: ಎಲ್ಲಾ ಪ್ರಿಸ್ಕ್ರಿಪ್ಷನ್ ಔಷಧಿಗಳಲ್ಲಿ ಒಂದು ಭಾಗವು ನೇರವಾಗಿ ಬರುತ್ತವೆ ಅಥವಾ ಸಸ್ಯಗಳ ಉತ್ಪನ್ನಗಳಾಗಿವೆ. ಹೆಚ್ಚುವರಿಯಾಗಿ, ವಿಶ್ವಾದ್ಯಂತ ಐದು ಜನರಿಗೆ ನಾಲ್ಕು ಪ್ರಾಥಮಿಕ ಆರೋಗ್ಯ ರಕ್ಷಣೆಗಾಗಿ ಸಸ್ಯಗಳ ಮೇಲೆ ಅವಲಂಬಿತವಾಗಿದೆ. ಹವಾಮಾನ: ಸಸ್ಯಗಳು ಇಂಗಾಲವನ್ನು ಸಂಗ್ರಹಿಸುತ್ತವೆ, ಮತ್ತು ಪಳೆಯುಳಿಕೆ ಇಂಧನಗಳ ವಾತಾವರಣದಿಂದ ಹೊರಬರುವ ಕಾರ್ಬನ್ ಡೈಆಕ್ಸೈಡ್ನ ಹೆಚ್ಚಿನ ಭಾಗವನ್ನು ಉಳಿಸಿಕೊಳ್ಳಲು ಸಹಾಯ ಮಾಡಿದೆ.

ಪ್ರಕೃತಿಯ ಸಮತೋಲನ ಮತ್ತು ಜನರ ಜೀವನದಲ್ಲಿ ಹಸುರು ಅಂದರೆ ಸಸ್ಯಗಳು ಅತ್ಯಗತ್ಯ. . ಸಸ್ಯಗಳು ತಮ್ಮ ಆಹಾರವನ್ನು ತಯಾರಿಸಲು ಅಸಾಧ್ಯವಾದ ಎಲ್ಲಾ ಪ್ರಾಣಿಗಳಿಗೆ ಆಹಾರ ಮತ್ತು ಚಯಾಪಚಯ ಶಕ್ತಿಯ ಅಂತಿಮ ಮೂಲವಾಗಿದೆ. ಆಹಾರಗಳನ್ನು ಹೊರತುಪಡಿಸಿ (ಉದಾ., ಧಾನ್ಯಗಳು, ಹಣ್ಣುಗಳು ಮತ್ತು ತರಕಾರಿಗಳು), ಮಾನವರಿಗೆ ಸಸ್ಯಗಳ ಉತ್ಪನ್ನಗಳು ಮುಖ್ಯವಾಗಿ ಮರದ ಮತ್ತು ಮರದ ಉತ್ಪನ್ನಗಳು, ಫೈಬರ್ಗಳು, ಔಷಧಿಗಳು, ತೈಲಗಳು, ಲ್ಯಾಟೆಕ್ಸ್, ವರ್ಣದ್ರವ್ಯಗಳು ಮತ್ತು ರೆಸಿನ್ಗಳು. ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಸಸ್ಯ ಮೂಲದ ಪಳೆಯುಳಿಕೆ ವಸ್ತುಗಳು. ಆದರೆ ಆಶ್ರಯ, ಬಟ್ಟೆ, ಔಷಧಿಗಳು, ಇಂಧನಗಳು ಮತ್ತು ಇತರ ಉತ್ಪನ್ನಗಳನ್ನು ತಯಾರಿಸಲಾಗಿರುವ ಕಚ್ಚಾ ಸಾಮಗ್ರಿಗಳನ್ನು ಒದಗಿಸುತ್ತವೆ. ಸಸ್ಯಗಳು ಸೂರ್ಯನ ಶಕ್ತಿಯನ್ನು ಆಹಾರವಾಗಿ ಪರಿವರ್ತಿಸಲು ಸಾಧ್ಯವಾಗುವ ಏಕೈಕ ವಸ್ತುಗಳಾಗಿವೆ .

## ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. “ ಹಸುರಾದುದು ಕವಿಯಾತ್ಮಂ "

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ 'ಹಸುರು' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರನ್ನು ಕಂಡು ಕವಿ ಪ್ರೇರಿತರಾಗಿದ್ದಾರೆ. ಕುವೆಂಪು ಅವರ ಸ್ಥಳವಾದ ಮಲೆನಾಡಿನ ಕುಪ್ಪಳಿಯ ಕವಿಶೈಲದಲ್ಲಿ ಅವರಿಗುಂಟಾದ ಸೌಂದರ್ಯಾನುಭವ ,ಪ್ರಕೃತಿ ,ಅಲ್ಲಿಯ ಹಸುರುಗಳೊಂದಿಗೆ ಕುವೆಂಪುರವರಿಗೆ ಅವಿನಾಭಾವ ಸಂಬಂಧವಿದೆ. ಸಸ್ಯ ಸಮೃದ್ಧಿಯ ಹಸುರೇ ಆಕಾಶ ,ಗದ್ದೆ,ಬಯಲು, ಸಂಜೆ ಹೂಗಂಪು ,ಹಕ್ಕಿಯ ದನಿ ,ಕಡಲಿನವರೆಗೂ ವ್ಯಾಪಿಸುವ ಮಟ್ಟಿಗೆ ಕವಿಯು ತಾನು ಹಸಿರಿನಲ್ಲಿ ತಲ್ಲೀನರಾಗಿರುವ ಬಗೆಯನ್ನು ವರ್ಣಿಸುವಾಗ ಮೇಲಿನಂತೆ ಹೇಳಿದ್ದಾರೆ. ಮೇಲಿನ ಮಾತು

ಸ್ವಾರಸ್ಯ : ಕವಿಯು ಹಸುರಿನಲ್ಲಿ ತಾದಾತ್ಮ್ಯ ಅನುಭೂತಿಯ ಶಿಖರ ಹೊಂದಿದ್ದನ್ನು ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೨. "ಬೇರೆ ಬಣ್ಣವನೆ ಕಾಣೆ "

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ 'ಹಸುರು' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಭರ್ತಿ ತುಂಬಿದ ಹಸುರು ಎಲ್ಲೆಡೆಯೂ ಹಸುರು ವಾತಾವರಣವನ್ನು ಸೃಷ್ಟಿ ಮಾಡಿದೆ.ಗದ್ದೆ ,ಬಯಲು, ಮಲೆ,ಕಣಿವೆ ಇರಲಿ ಸಂಜೆ ಬಿಸಿಲು ಕೂಡ ಕವಿಗೆ ಹಸುರಾಗಿ ಕಾಣುತ್ತದೆ. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಗಿಳಿ ಹಸುರಿನಂತಿದೆ. ಹುಲ್ಲು ಹಾಸು ಪಚ್ಚೆಯ ಜಮಖಾನೆಯಂತಿದೆ.ಭೂಮಿಯು ಹಸುರಿನಿಂದ ಮೈ ಮುಚ್ಚಿ ಬೇರೆ ಯಾವುದೇ ಬಣ್ಣವನ್ನು ಕಾಣಲು ಆಗದು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಕುವೆಂಪು ಅವರ ಪ್ರಕೃತಿ ತನ್ಮಯತೆಯನ್ನು ಕವಿ ಮತ್ತು ಪ್ರಕೃತಿ ಒಂದಾಗುವ ಅವರು ಮಲೆನಾಡಿನ ಪ್ರಕೃತಿ ಹಸುರುಗಳೊಂದಿಗೆ ಹೊಂದಿದ್ದ ಸಂಬಂಧವನ್ನು ಮೇಲಿನ ವಾಕ್ಯವು ಸೂಚಿಸುವುದು.

೩. "ಹಸುರು ಹಸುರಿಳೆಯುಸಿರೂ"

ಉ: ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ 'ಹಸುರು' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ಕವಿಗೆ ಹಸುರು ಹೂವಿನ ಕಂಪಿನ ಹಸುರಾಗಿ ,ಗಾಳಿಯ ತಂಪಿನ ಹಸುರಾಗಿ ,ಹಕ್ಕಿಯ ಕೊರಲಿಂಪಿನ ಹಸುರಾಗಿ ,ಇಳೆಯ ಉಸಿರಿನ ಹಸುರಾಗಿ ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂದು ವರ್ಣಿಸುವಾಗ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ಕವಿಗೆ ಎಲ್ಲಿ ನೋಡಿದರೂ ಹಸುರೇ ಕಾಣುವ ಬಗೆಯನ್ನು ಹಸುರಿನಿಂದ ಕವಿ ಪ್ರೇರಿತರಾಗಿರುವ ಬಗೆಯನ್ನೂ ಕವಿಯ ರಸಾಸ್ವಾದನೆಯನ್ನೂ ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೪. " ಹಸುರತ್ತಲ್ ,ಹಸುರಿತ್ತಲ್ ,ಹಸುರೆತ್ತಲ್ "

ಉ : ಈ ಮೇಲಿನ ವಾಕ್ಯವನ್ನು ಕುವೆಂಪುರವರು ಬರೆದ ಪಕ್ಷಿಕಾಶಿ ಕವನ ಸಂಕಲನದಿಂದ ಆರಿಸಲಾದ 'ಹಸುರು' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಹಸುರು ಕವನದಲ್ಲಿ ಹಸುರು ಪದವು ಮತ್ತೆ ಮತ್ತೆ ಕವನದಲ್ಲಿ ಪುನರಾವರ್ತಿತವಾಗಿ ಜಪಿಸಲ್ಪಟ್ಟು ಹಸುರಿನ ವಾತಾವರಣ ನಿರ್ಮಿತವಾಗಿದೆ. ಎತ್ತೆತ್ತಲೂ ಹಸುರನ್ನೇ ಕಾಣುತ್ತೇವೆ. ಹಸುರಿನಲ್ಲಿಯೇ ಬಾಳುತ್ತೇವೆ .ಹಸುರು ಇಡೀ ಪ್ರಕೃತಿಯನ್ನೇ ಆವರಿಸಿ ಬರು ಬರುತ್ತ ಒಡಲು ಹಸಿರಾಗಿ ,ಹರಿವ ನೆತ್ತರು ಹಸಿರಾಗಿ ,ಆತ್ಮವೂ ಹಸಿರಾಯಿತು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ: ನವರಾತ್ರಿಯ ನವಧಾತ್ರಿಯ ಹಸುರಿನ ಕಡಲಿನಲ್ಲಿ ಕವಿಯ ಆತ್ಮವು ಮಿಂದು ಎಲ್ಲಿ ನೋಡಿದರೂ ಅವರಿಗೆ ಹಸುರೇ ಕಾಣುವ ಬಗೆಯನ್ನು ಮೇಲಿನ ವಾಕ್ಯವು ವಿವರಿಸುತ್ತದೆ.

| | |
|---|---|
| ಘಟಕ ಪರೀಕ್ಷೆ –೧ ೧೫ ಅಂಕಗಳು<br><br>ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೩*೧=೩<br><br>೧. ಅಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?<br>೨. ಕವಿಯು ನೋಡಿದ ಅಡಕೆಯ ತೋಟ ಎಲ್ಲಿದೆ ?<br>೩. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?<br>ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ ೨ ಅಂಕಗಳು<br>೩. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು ?<br><br>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br><br>೧. 'ಹಸುರು ' ಕವನದ ರೀತ್ಯ ಎಲ್ಲೆಲ್ಲಿ ಹಸುರು ವ್ಯಾಪಿಸಿದೆ ಎಂಬುದನ್ನು ವಿವರಿಸಿ.<br>ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ. ೨*೩=೬<br>೪. " ಹಸುರತ್ತಲ್ ,ಹಸುರಿತ್ತಲ್ ,ಹಸುರೆತ್ತಲ್ "<br>"ಬೇರೆ ಬಣ್ಣವನೆ ಕಾಣೆ " | ಘಟಕ ಪರೀಕ್ಷೆ –೨ ೧೫ ಅಂಕಗಳು<br><br>ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ ೨*೧=೨<br><br>೧. ಹಸುರು ಎಂಬುದು ಯಾವುದನ್ನು ಕಂಡು ಪ್ರೇರಿತವಾದ ಕವನವಾಗಿದೆ ?<br>೨. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?<br>ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>೧. ಕವಿಗೆ ಯಾವ್ಯಾವುದರಲ್ಲಿ ಆಗಸದಿಂದ ಬಿಸಿಲವರೆಗೂ ಹಸುರು ಕಾಣುತ್ತಿದೆ ?<br>೨. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿಯು ಹೇಗೆ ವರ್ಣಿಸಿದ್ದಾರೆ ?<br><br>ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ. ೨*೩=೬<br><br>೧. " ಹಸುರಾದುದು ಕವಿಯಾತ್ಮಂ "<br>೩. "ಹಸುರು ಹಸುರಿಳೆಯುಸಿರೂ"<br>ಕುವೆಂಪುರವರ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು |

# ಪದ್ಯಪಾಠ ೬. ಛಲಮನೆ ಮೆರೆವೆಂ –ರನ್ನ

## ಕೃತಿಕಾರರ ಪರಿಚಯ




ರನ್ನ ಕ್ರಿ.ಶ.ಸುಮಾರು ೯೪೯ ರಲ್ಲಿ (೧೦ ನೆಯ ಶತಮಾನ ) ಬಾಗಲಕೋಟೆ ಜಿಲ್ಲೆಯ ಮುದುವೊಳಲು (ಈಗಿನ ಮುಧೋಳ ) ಎಂಬ ಗ್ರಾಮದಲ್ಲಿ ಜನಿಸಿದನು. ಇವನು ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು. ಇವನು ಸಾಹಸಭೀಮ ವಿಜಯಂ ,ಅಜಿತ ತೀರ್ಥಂಕರ ಪುರಾಣ ತಿಲಕಂ ,ಪರಶುರಾಮಚರಿತಂ ,ಚಕ್ರೇಶ್ವರಚರಿತಂ ಎಂಬ ಕಾವ್ಯಗಳನ್ನು ಬರೆದಿದ್ದಾರೆ. ಈತನು ರನ್ನಕಂದ ಎಂಬ ಎಂಬ ನಿಘಂಟುವನ್ನು ಬರೆದಿರುವುದಾಗಿ ತಿಳಿದು ಬರುತ್ತದೆ. ಇವನುತೈಲಪ ಅರಸನಿಂದ ಕವಿಚಕ್ರವರ್ತಿ ಎಂಬ ಬಿರುದನ್ನು ಪಡೆದಿದ್ದನು .ಇವನು ರತ್ನತ್ರಯರಲ್ಲಿ ಒಬ್ಬನು. ಪ್ರಸ್ತುತ ಪದ್ಯಭಾಗವನ್ನು ರನ್ನನ ಸಾಹಸಭೀಮ ವಿಜಯಂ (ಗದಾಯುದ್ಧ )ಕಾವ್ಯದ ಐದನೆಯ ಆಶ್ವಾಸದಿಂದ ಆರಿಸಿಕೊಳ್ಳಲಾಗಿದೆ.

### ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು ?

ಉತ್ತರ : ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು ಭೀಷ್ಮರಿಗೆ ಹೇಳಿದನು.

೨.ದಿನಪಸುತ ಎಂದರೆ ಯಾರು ?

ಉ: ದಿನಪಸುತ ಎಂದರೆ ಕರ್ಣ

೩. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?

ಉ: ಪಾರ್ಥ (ಅರ್ಜುನ ) ಮತ್ತು ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

೪. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು ?

ಉ: ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ

೫. ಅಂತಕಾತ್ಮಜ ಎಂದರೆ ಯಾರು ?

ಉ: ಅಂತಕಾತ್ಮಜ ಎಂದರೆ ಧರ್ಮರಾಯ

### ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ ?

ಉ: ಮಹಾಭಾರತ ಯುದ್ಧದ ಕೊನೆಯಲ್ಲಿ ಏಕಾಂಗಿಯಾದ ದುರ್ಯೋಧನನು ತಂದೆ ತಾಯಿಯರ ಸಲಹೆಯಂತೆ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ಸಂಧಿಸಿದಾಗ ಅವರು ದುರ್ಯೋಧನನು ಒಪ್ಪಿದರೆ ಸಂಧಿ ಮಾಡಿಕೊಳ್ಳುವಂತೆ ಪಾಂಡವರನ್ನು ಒಪ್ಪಿಸುವುದಾಗಿ ನುಡಿಯುತ್ತಾರೆ . ಇದಕ್ಕೆ ಒಪ್ಪದ ದುರ್ಯೋಧನನು ನಿಮ್ಮನ್ನು ನಮಸ್ಕರಿಸಲೆಂದು ಬಂದೆನೇ

ಹೊರತೂ ಸಂದಿ ಮಾಡಿಸಬೇಕೆಂದು ಕೇಳಲು ಅಲ್ಲ. ನಾನೇನು ಭೂಮಿಗಾಗಿ ಹೋರಾಡುವೆನೆಂದು ಭಾವಿಸಿದಿರಾ ? ನನ್ನ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಹಾಳು ಭೂಮಿ . ಕರ್ಣನನ್ನು ಕೊಲಿಸಿದ ಭೂಮಿಯೊಡನೆ ಮತ್ತೆ ನಾನು ಬಾಳುವುದುಂಟೆ ?ಎಂದು ವಿವರಿಸುತ್ತಾನೆ.

೨. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ ?

ಉ: ತನ್ನ ಪ್ರೀತಿಯ ಸಹೋದರ ಮತ್ತು ಸ್ನೇಹಿತ ಕರ್ಣನನ್ನು ಕಳೆದುಕೊಂಡ ದುರ್ಯೋಧನನಿಗೆ ಆ ಭೂಮಿ ಹಾಳು ಭೂಮಿ .ಕರ್ಣನನ್ನು ಕೊಲ್ಲಿಸಿದ ಭೂಮಿಯೊಡನೆ ಮತ್ತೆ ತಾನು ಸಹಬಾಳ್ವೆಮಾಡುವುದಿಲ್ಲವೆಂದು ದುರ್ಯೋಧನ ಹೇಳಿದ್ದಾನೆ.

೩. ಪಾರ್ಥ-ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?

ಉ: ನನ್ನ ಪ್ರೀತಿಯ ಬಂಟ (ಕರ್ಣ) ನನ್ನೂ , ನನ್ನ ಪ್ರೇಮದ ತಮ್ಮ (ದುಶ್ಯಾಸನ)ನನ್ನೂ ಕೊಂದ ಅರ್ಜುನ ಭೀಮರು ಜೀವಂತವಾಗಿರುವವರೆಗೆ ನನ್ನ ದೇಹದಲ್ಲಿ ಪ್ರಾಣವಿರುವವರೆಗೂ , , ನಾನು ಸಂಧಿಗೆ ಒಪ್ಪಲಾರೆನು . ಮೊದಲು ಆ ಇಬ್ಬರನ್ನೂ ಕೊಲ್ಲುವೆನು . ಹಾಗೆ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳೋಣ . ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ ?ಎಂದು ಪಾರ್ಥ – ಭೀಮರ ಕುರಿತು ದುರ್ಯೋಧನ ಅಭಿಪ್ರಾಯ ಪಡುತ್ತಾನೆ.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

ಉ: ಮಹಾಭಾರತ ಯುದ್ಧದಲ್ಲಿ ತನ್ನೆಲ್ಲ ಸಹೋದರರರನ್ನೂ ,ಆಪ್ತಮಿತ್ರ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ನೀನು ಒಪ್ಪುವೆಯಾದರೆ ಪಾಂಡವರನ್ನು ಸಂಧಿಗೆ ಒಪ್ಪಿಸುವೆನು .ಅವರು ಈಗಲೂ ನಮ್ಮ ಮಾತನ್ನು ಕೇಳುತ್ತಾರೆ ಎನ್ನುವಲ್ಲಿ ಭೀಷ್ಮರ ಮುಂದಾಗುವ ಅನಾಹುತವನ್ನು ತಪ್ಪಿಸಬೇಕೆನ್ನುವ ನಿಲುವು , ಪಾಂಡವರ ಬಗೆಗಿನ ನಂಬಿಕೆ ವ್ಯಕ್ತವಾಗಿದೆ.ಆದರೆ ತಾನು ನಿಮಗೆ ನಮಸ್ಕರಿಸಲು ಬಂದೆನೇ ಹೊರತೂ ಸಂಧಿ ಮಾಡಿಸೆಂದು ಕೇಳಲು ಅಲ್ಲ ಎನ್ನುವ ದುರ್ಯೋಧನನಲ್ಲಿ ಭೀಷ್ಮರ ಬಗೆಗಿನ ಗೌರವ ಆದರೆ ಹೋರಾಟ ಮುಂದುವರಿಸಲೇ ಬೇಕೆಂಬ ಅಛಲ ನಿರ್ಧಾರ ಇರುವುದು ಸ್ಪಷ್ಟವಾಗುವುದು. ನಾನು ನೆಲಕ್ಕಾಗಿ ಹೋರಾಡುತ್ತಿಲ್ಲ. ಛಲಕ್ಕಾಗಿ ಪಾಂಡವರೊಡನೆ ಹೋರಾಡುತ್ತಿದ್ದೇನೆ .ಕರ್ಣನಿಲ್ಲದ ಈ ಭೂಮಿ ನನಗೆ ಪಾಳು ಭೂಮಿ ಎನ್ನುವ ದುರ್ಯೋಧನನಲ್ಲಿ ತನ್ನ ಛಲದ ಕುರಿತಾದ ಅಭಿಮಾನ , ಕರ್ಣನನ್ನು ಕಳೆದುಕೊಂಡ ನೋವು ವ್ಯಕ್ತವಾಗುತ್ತದೆ.ಆಪ್ತಮಿತ್ರ ಕರ್ಣನನ್ನು ಮತ್ತು ತನ್ನ ಸಹೋದರ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರನ್ನು ಕೊಂದ ನಂತರವೇ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳುವೆ ಎನ್ನುವ ದುರ್ಯೋಧನನಲ್ಲಿ ದುಶ್ಯಾಸನ ,ಕರ್ಣರನ್ನು ಕಳೆದುಕೊಂಡ ನೋವಿನ ಜೊತೆಗೆ ಅವರ ಸಾವಿಗೆ ಕಾರಣರಾದವರ ಬಗೆಗಿನ ರೋಷವು ವ್ಯಕ್ತವಾಗಿದೆ. ನನ್ನವರನ್ನು ಕಳೆದುಕೊಂಡ ನನ್ನಲ್ಲಿ ಕೋಪ ಕೆರಳಿ ಅತಿಶಯವಾಗಿದೆ ಪಾಂಡವರೊಡನೆ ಕಾದಾಡಿಯೇ ಸಿದ್ಧ .ಈ ಯುದ್ಧದಲ್ಲಿ ಭೂಮಿಯ ಒಡೆತನ ಪಾಂಡವರಿಗೆ ಹೋಗಬೇಕು ಇಲ್ಲವೇ ನನಗೆ ಉಳಿಯಬೇಕು ಎಂದು ದುರ್ಯೋಧನನು ಹೇಳುವಲ್ಲಿ ಯುದ್ಧವು ನಿಶ್ಚಿತ , ಸೋಲು ಗೆಲುವಿನ ಅನಿವಾರ್ಯತೆ ಎಲ್ಲದಕ್ಕೂ ತಾನು ಬದ್ಧ , ಬಂದುದನ್ನು ಅನುಭವಿಸಲೇ ಬೇಕೆನ್ನುವ ನಿಲುವು, ಛಲ ವ್ಯಕ್ತವಾಗಿರುವುದನ್ನು ಗಮನಿಸಬಹುದು.

೨. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

ಉ: ಮಹಾಭಾರತ ಯುದ್ಧದಲ್ಲಿ ತನ್ನೆಲ್ಲ ಸಹೋದರರರನ್ನೂ ,ಆಪ್ತಮಿತ್ರ ಕರ್ಣನನ್ನೂ ಕಳೆದುಕೊಂಡ ದುರ್ಯೋಧನನನು ತನ್ನ ತಂದೆ ತಾಯಿಯರ ಅಪೇಕ್ಷೆಯಂತೆ ರಣರಂಗದಲ್ಲಿ ಶರಶಯ್ಯೆಯಲ್ಲಿ ಮಲಗಿದ್ದ ತಾತ ಭೀಷ್ಮರ ಸಲಹೆಯನ್ನು ಪಡೆಯಲು ಬರುತ್ತಾನೆ. ಭೀಷ್ಮರು ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಂಡು ಬದುಕಬೇಕೆಂಬ ಸಲಹೆಯನ್ನು ದುರ್ಯೋಧನನಿಗೆ ನೀಡುತ್ತಾರೆ. ಆದರೆ ಅದಕ್ಕೊಪ್ಪದ ದುರ್ಯೋಧನ ತಾನು ಯುದ್ಧ ಮಾಡುವುದಾಗಿ ತಿಳಿಸುತ್ತಾನೆ. ನಿಮಗೆ ನಮಸ್ಕರಿಸಿ ಹೋಗುವ ಸಲುವಾಗಿ ಬಂದೆನೇ ಹೊರತೂ ಪಾಂಡರೊಡನೆ ಸಂಧಿ ಮಾಡಿಸಿ ಎಂದು ಕೇಳಲು ಅಲ್ಲ . ನಾನು ಭೂಮಿಗಾಗಿ ಯುದ್ಧ ಮಾಡುತ್ತಿದ್ದೇನೆಂದು ಭಾವಿಸಿದಿರಾ? ನಾನು ಛಲಕ್ಕಾಗಿ ಹೋರಾಡುತ್ತಿದ್ದೇನೆ. ಈ ಭೂಮಿ ನನಗೆ ಪಾಳು ಭೂಮಿ ಕರ್ಣನನ್ನು ಕೊಲ್ಲಿಸಿದ ಈ ಭೂಮಿಯೊಡನೆ ನಾನು ಸಹಬಾಳ್ವೆ ನಡೆಸುವುದು ಉಂಟೇ ?ನನ್ನ ಪ್ರೀತಿಯ ಬಂಟ (ಕರ್ಣ) ನನ್ನೂ , ನನ್ನ ಪ್ರೇಮದ ತಮ್ಮ (ದುಶ್ಯಾಸನ)ನನ್ನೂ ಕೊಂದ ಅರ್ಜುನ ಭೀಮರು ಜೀವಂತವಾಗಿರುವವರೆಗೆ ನನ್ನ ದೇಹದಲ್ಲಿ ಪ್ರಾಣವಿರುವವರೆಗೂ ನಾನು ಸಂಧಿಗೆ ಒಪ್ಪಲಾರೆನು . ಮೊದಲು ಆ ಇಬ್ಬರನ್ನೂ ಕೊಲ್ಲುವೆನು . ಹಾಗೆ ಕೊಂದ ಬಳಿಕ ಧರ್ಮರಾಜನೊಡನೆ ಸಂಧಿ ಮಾಡಿಕೊಳ್ಳೋಣ . ನನ್ನೊಡನೆ ಹುಟ್ಟಿದ ನೂರ್ವರು ಸೋದರರೂ ಶತ್ರುಗಳನ್ನು ಎದುರಿಸಿ ಸತ್ತರು . ಅದರಿಂದ ನನ್ನಲ್ಲಿ ಕೋಪ ಕೆರಳಿ ಅತಿಶಯವಾಯಿತು. ಪಾಂಡವರೊಡನೆ ಕಾದಾಡಿ ನನ್ನ ಛಲವನ್ನೆ ಸಾಧಿಸುವೆನು . ಇಂದಿನ ಒಂದು ಕಾಳಗದಲ್ಲಿ ಪಾಂಡವರು ಉಳಿಯಬೇಕು , ಇಲ್ಲವೆ ನಾನು ಉಳಿಯಬೇಕು . ಅದರಿಂದ ಭೂಮಿಯ ಒಡೆತನ ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು ಎನ್ನುವ ದುರ್ಯೋಧನನ ಮಾತುಗಳಲ್ಲಿ ಅವನ ಛಲದ ಗುಣ ವ್ಯಕ್ತವಾಗಿರುವುದನ್ನು ಗಮನಿಸಬಹುದು. .

ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧. " ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ ."

ಉ: ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದ ಸಾಹಸಭೀಮ ವಿಜಯದ ಐದನೆಯ ಆಶ್ವಾಸದಿಂದ ಆರಿಸಲಾದ 'ಛಲಮನೆ ಮೆರೆವೆಂ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳಿದ್ದಾನೆ.

ಸಂದರ್ಭ : ಮಹಾಭಾರತ ಯುದ್ಧದಲ್ಲ ತನ್ನೆಲ್ಲ ಸಹೋದರರನ್ನೂ, ತನ್ನ ಪರಮಾಪ್ತ ಸ್ನೇಹಿತ ಕರ್ಣನನ್ನು ಕಳೆದುಕೊಂಡ ದುರ್ಯೋಧನ ತನ್ನ ತಂದೆ ತಾಯಿಯರ ಸಲಹೆಯಂತೆ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಬಳಿ ಬಂದಾಗ ಅವರು ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಸೂಚಿಸುತ್ತಾರೆ. ನಿಮಗೆ ನಮಸ್ಕರಿಸಲು ಬಂದೆನೇ ಹೊರತೂ ಪಾಂಡವರೊಡನೆ ಸಂಧಿ ಮಾಡಿಸೆಂದು ಕೇಳಲು ಅಲ್ಲ. ಇಷ್ಟಕ್ಕೂ ನಾನು ನೆಲಕ್ಕಾಗಿ ಯುದ್ಧ ಮಾಡುವವನಲ್ಲ ಛಲಕ್ಕಾಗಿ ಎಂದು ದುರ್ಯೋಧನ ಪ್ರತಿಕ್ರಯಿಸುತ್ತಾನ.

ಸ್ವಾರಸ್ಯ : ದುರ್ಯೋಧನನ ಛಲ ,ಅಭಿಮಾನ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

೨. "ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ. "

ಉ: ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದ ಸಾಹಸಭೀಮ ವಿಜಯದ ಐದನೆಯ ಆಶ್ವಾಸದಿಂದ ಆರಿಸಲಾದ 'ಛಲಮನೆ ಮೆರೆವೆಂ 'ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳಿದ್ದಾನೆ.

ಸಂದರ್ಭ : ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ತಂದೆತಾಯಿಯರ ಸಲಹೆಯಂತೆ ದುರ್ಯೋಧನನು ಸಂಧಿಸಿದಾಗ ಅವರು ಪಾಂಡವರೊಡನೆ ಸಂಧಿ ಮಾಡಿಕೊ ,ಪಾಂಡವರನ್ನು ನಾನೇ ಒಪ್ಪಿಸುತ್ತೇನೆ ಎಂದು ಸಲಹೆ ನೀಡಿದಾಗ ದುರ್ಯೋಧನನು ನಿಮಗೆ ನಮಸ್ಕಾರ ಮಾಡಿ ಹೋಗಬೇಕೆಂದು ಬಂದೆನಲ್ಲದೆ ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸಲೆಂದೇನು ನಾನು ಬಂದೆನೆ ? ಅಜ್ಜಾ , ಯುದ್ಧದಲ್ಲಿ ಇನ್ನು ನನ್ನ ಕಾರ್ಯವೇನೆಂಬುದನ್ನು ಹೇಳಿ ಎಂದು ಹೇಳುವನು.

ಸ್ವಾರಸ್ಯ : ಯುದ್ಧದ ಕುರಿತು ದುರ್ಯೋಧನನ ಉತ್ಸಾಹ ,ಯುದ್ಧ ಮುಂದುವರಿಸಲೇ ಬೇಕೆನ್ನುವ ಹಠ ಇಲ್ಲಿ ವ್ಯಕ್ತವಾಗಿದೆ.

೩. " ಪಾಂಡವರೊಳಿರಿದು ಛಲಮನೆ ಮೆರೆವೆಂ ."
ಉ: ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದ ಸಾಹಸಭೀಮ ವಿಜಯದ ಐದನೆಯ ಆಶ್ವಾಸದಿಂದ ಆರಿಸಲಾದ 'ಛಲಮನೆ ಮೆರೆವೆಂ 'ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳಿದ್ದಾನೆ.
ಸಂದರ್ಭ : ಭೀಷ್ಮರ ಸಲಹೆಯಂತೆ ಯುದ್ಧವನ್ನು ನಿಲ್ಲಿಸಿ ಪಾಂಡವರೊಡನೆ ಸಂಧಿ ಮಾಡಿಕೊಳ್ಳಲು ಒಪ್ಪದ ದುರ್ಯೋಧನನು ಹುಟ್ಟಿದ ನೂರ್ವರು ಮಕ್ಕಳೂ ,ನನ್ನೊಡನೆ ಹುಟ್ಟಿದ ನೂರ್ವರು ಸೋದರರೂ ಶತ್ರುಗಳನ್ನು ಎದುರಿಸಿ ಸತ್ತರು . ಅದರಿಂದ ನನ್ನಲ್ಲಿ ಕೋಪ ಕೆರಳಿ ಅತಿಶಯವಾಯಿತು. ಸತ್ತವರೇನು ಮರಳಿ ಹುಟ್ಟುವುದಿಲ್ಲವೆ ? ಪಾಂಡವರೊಡನೆ ಕಾದಾಡಿ ನನ್ನ ಛಲವನ್ನೆ ಸಾಧಿಸುವೆನು ಎಂದು ಭೀಷ್ಮರಲ್ಲಿ ತನ್ನ ನಿಲುವನ್ನು ಸಮರ್ಥಿಸುವನು.
ಸ್ವಾರಸ್ಯ : ಪಾಂಡವರೊಂದಿಗೆ ತಾನು ಹಿಡಿದ ಹಠವನ್ನು ಸಾಧಿಸಲೇಬೇಕೆನ್ನುವ ದುರ್ಯೋಧನನ ಅಚಲ ನಿಲುವು ,ಛಲ ಇಲ್ಲಿ ವ್ಯಕ್ತವಾಗಿದೆ.

೪. " ಮೇಣಾಯ್ತು ಕೌರವಂಗವನಿತಳಂ ."
ಉ: ಈ ಮೇಲಿನ ವಾಕ್ಯವನ್ನು ರನ್ನ ಮಹಾಕವಿಯು ಬರೆದ ಸಾಹಸಭೀಮ ವಿಜಯದ ಐದನೆಯ ಆಶ್ವಾಸದಿಂದ ಆರಿಸಲಾದ ಛಲಮನೆ ಮೆರೆವೆಂ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳಿದ್ದಾನೆ.
ಸಂದರ್ಭ : ಭೀಷ್ಮರ ಪಾಂಡವರೊಡನೆ ಸಂಧಿ ಮಾಡಿಕೊಳ್ಳಬೇಕೆನ್ನುವ ಸಲಹೆ ಮಾತನ್ನು ಒಪ್ಪದ ದುರ್ಯೋಧನನು ನಾನು ಪಾಂಡವರೊಡನೆ ಕಾದಾಡದೆ ಬಿಡಲಾರೆ . ಇಂದಿನ ಒಂದು ಕಾಳಗದಲ್ಲಿ ಪಾಂಡವರು ಉಳಿಯಬೇಕು , ಇಲ್ಲವೆ ನಾನು ಉಳಿಯಬೇಕು . ಅದರಿಂದ ಭೂಮಿಯ ಒಡೆತನ ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು ಎಂದು ಹೇಳುವನು.
ಸ್ವಾರಸ್ಯ : ಯುದ್ಧದ ಕುರಿತ ದುರ್ಯೋಧನನ ಅಚಲ ತೀರ್ಮಾನ , ಬಂದುದನ್ನು ಎದುರಿಸಬೇಕೆನ್ನುವ ಅವನ ಅಭಿಪ್ರಾಯ ಇಲ್ಲಿ ವ್ಯಕ್ತವಾಗಿದೆ.

**ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರನ್ನು ಬರೆಯಿರಿ.**

4 4 4
**– UU| – U U | – U U**
೧. ಪುಟ್ಟಿದ| ನೂರ್ವರು| ಮೆನ್ನೊಡ 12
4 4 4 4 4
**– U U| – U U | U – U | – U U | _ _ |**
ಪುಟ್ಟಿದ| ನೂರ್ವರು| ಮಿದಿರ್ಚಿ| ಸತ್ತೊಡೆ | ಕೋಪಂ| 20
ಛಂದಸ್ಸು : **ಕಂದ ಪದ್ಯ**

ಭ ರ ನ ಭ ಭ ರ ಲಘು + ಗುರು
**– U U| – U – | UUU | – U U | – UU| – U – | U –**
೨. ಎನ್ನಣು|ಗಾಳನೆ| ನ್ನಣುಗ| ದಮ್ಮನ| ನಿಕ್ಕಿದ | ಪಾರ್ಥಭೀ| ಮರು

ಛಂದಸ್ಸು : ಉತ್ಪಲ ಮಾಲಾ ವೃತ್ತ (ಉತ್ಪಲ ಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಳ್ದಿರಲ್

**ಕೊಟ್ಟಿರುವ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**

ಕಜ್ಜ–ಕಾರ್ಯ ,ಅಜ್ಜ– ಆರ್ಯ

**ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

ಪಾರ್ಥಭೀಮರು= ಪಾರ್ಥನೂ ಭೀಮರೂ = ದ್ವಂದ್ವ ಸಮಾಸ ,
ಅಂತಕಾತ್ಮಜ =ಅಂತಕನ (ಯಮ )ಆತ್ಮಜ ಯಾರೋ ಅವನು = ಧರ್ಮರಾಯ = ಬಹುವ್ರೀಹಿ ಸಮಾಸ ,
ದಿನಪಸುತ =ದಿನಪ(ಸೂರ್ಯ)ನ ಸುತ ಯಾರೋ ಅವನು = ಕರ್ಣ = ಬಹುವ್ರೀಹಿ ಸಮಾಸ

| | |
|---|---|
| ಘಟಕ ಪರೀಕ್ಷೆ –೧    ೧೮ ಅಂಕಗಳು<br><br>ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.೨*೧=೨<br><br>೧.ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು ?<br>೨.ದಿನಪಸುತ ಎಂದರೆ ಯಾರು ?<br><br>ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ.೨*೨=೪<br><br>ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ ?<br>ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು ?<br><br>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೩ ಅಂಕಗಳು<br><br>೧. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ ೨*೩=೬<br>೩. " ಪಾಂಡವರೊಳಿರಿದು ಛಲಮನೆ ಮೆರೆವೆಂ ."<br>೪. " ಮೇಣಾಯ್ತು ಕೌರವಂಗವನಿತಳಂ ."<br><br>ರನ್ನ ಕವಿಯ ಸಂಕ್ಷಿಪ್ತ ಪರಿಚಯ ಬರೆಯಿರಿ.   ೩ ಅಂಕಗಳು | ಘಟಕ ಪರೀಕ್ಷೆ – ೨    –೧೫ ಅಂಕಗಳು<br><br>ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.೨*೧=೨<br><br>೧. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು<br>೨. ಅಂತಕಾತ್ಮಜ ಎಂದರೆ ಯಾರು ?<br><br>ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ ೨*೨=೪ .<br><br>೧. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿ ಸುತ್ತಾನೆ ?<br>೨. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ ?<br><br>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೩ ಅಂಕಗಳು<br><br>. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು<br><br>ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ. ೨*೩=೬<br><br>೧. " ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ ."<br>ವಿವರಿಸಿ.<br>೨. "ಸಮರದೊಳೆನಗಜ್ಜ ಪೇಳಿಮಾವುದು ಕಜ್ಜಂ. " |

# ಪದ್ಯ ಪಾಠ –೭ ವೀರ ಲವ –ಲಕ್ಷ್ಮೀಶ

## ಕೃತಿಕಾರರ ಪರಿಚಯ




ಲಕ್ಷ್ಮೀಶ ಕವಿಯ ಕಾಲ ಸುಮಾರು ಕ್ರಿ.ಶ.೧೫೫೦ . ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ ದೇವನೂರು ಇವನು ಜನಿಸಿದ ಸ್ಥಳ. ಜೈಮಿನಿ ಭಾರತ ಇವನು ಬರೆದಿರುವ ಪ್ರಸಿದ್ಧ ಕೃತಿಯಾಗಿದೆಇವನಿಗೆ ಉಪಮಾಲೋಲ ,ಕರ್ಣಾಟ ಕವಿ ಚೂತವನ ಚೈತ್ರ ಎಂಬ ಬಿರುದುಗಳಿವೆ.
ಪ್ರಸ್ತುತ ಪದ್ಯಭಾಗವನ್ನು ಅವರ **ಜೈಮಿನಿ ಭಾರತ** ಕೃತಿಯಿಂದ ಆರಿಸಲಾಗಿದೆ.

### ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು ?
ಉ: ಜೈಮಿನಿಭಾರತವನ್ನು ಬರೆದ ಕವಿ ಲಕ್ಷ್ಮೀಶ

೨.ಯಜ್ಞಾಶ್ವವನ್ನು ಕಟ್ಟಿದವರು ಯಾರು ?
ಉ: ಯಜ್ಞಾಶ್ವವನ್ನು ಕಟ್ಟಿದವನು ಲವ

೩. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
ಉ: ಕುದುರೆಯನ್ನು ಲವನು ತನ್ನ ಉತ್ತರೀಯವನ್ನು ಹಗ್ಗವನ್ನಾಗಿ ಹೊಸೆದು ಅದರಿಂದ ಕಟ್ಟಿದನು.

೪. ಮುನಿಸುತರು ಹೆದರಲು ಕಾರಣವೇನು ?
ಉ:ಯಜ್ಞಾಶ್ವವನ್ನು ಕಟ್ಟಲು ಬಿಟ್ಟರೆ ಶ್ರೀರಾಮನ ಕಡೆಯವರಿಂದ ಶಿಕ್ಷೆಗೆ ಒಳಗಾಗಬೇಕಾಗುವುದೆಂದು(ಹೊಡೆಸಿಕೊಳ್ಳಬೇಕಾಗುವುದೆಂದು ) ಮುನಿಸುತರು ಹೆದರಿದರು.

### ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.
ಉ: ಸೀತೆಯನ್ನು ಕಾಡಿಗೆ ಕಳುಹಿಸಿದ ಶ್ರೀರಾಮನು ಅವಳ ಅಗಲಿಕೆಯಿಂದ ನೊಂದಿರುವ ಸಂದರ್ಭದಲ್ಲಿಯೇ, ರಾವಣನ ಒದೆಯಿಂದ ಬ್ರಹ್ಮಹತ್ಯಾ ದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಮಹರ್ಷಿಗಳ ಆದೇಶದಂತೆಅಶ್ವಮೇಧ ಯಾಗವನ್ನು ಕೈಗೊಳ್ಳುವನು.ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ತನ್ನ ಸಹೋದರ ಶತ್ರುಘ್ನನನ್ನು ಕಳುಹಿಸುವನು.
ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೇ ಕುದುರೆಯನ್ನು ಕಟ್ಟಲು ಹೆದರಿ ,ಅದಕ್ಕೆ ನಮಸ್ಕರಿಸಿ ಅದನ್ನು ತಡೆಯದೇ ಇರಲು ,ಶ್ರೀರಾಮನ ಯಜ್ಞಾಶ್ವದ ಪ್ರೀತಿಯ ಕುದುರೆಯು ಇಡೀ ಭೂಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿಯ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಿತು.

೨. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?
ಉ: ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದು ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಬರೆಯಲಾಗಿತ್ತು.

೩.ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

ಉ: ಶ್ರೀರಾಮನ ಅಶ್ವಮೇಧದ ಕುದುರೆಯು ಇಡೀ ಭೂಮಂಡಲದಲ್ಲಿ ಸಂಚರಿಸುತ್ತ ಕೊನೆಗೆ ವಾಲ್ಮೀಕಿಯ ಆಶ್ರಮದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಲು ಅದನ್ನು ನೋಡಿದ ಆಶ್ರಮದ ಕಾವಲಿಗಿದ್ದ ಲವನು ಕುದುರೆಯ ಹತ್ತಿರಕ್ಕೆ ಬಂದು ಅದರ ಹಣೆಪಟ್ಟಿಯು ಮೇಲಿದ್ದ ಶ್ರೀರಾಮನೊಬ್ಬನೇ ವೀರನೆಂಬ ವಾಕ್ಯವನ್ನು ಓದಿ ಕೆರಳಿ ಶ್ರೀರಾಮನ ಗರ್ವವನ್ನು ಮುರಿಯಬೇಕೆಂದು ನಿರ್ಧರಿಸಿದನು.ಆದ್ದರಿಂದ ಲವನು ತನ್ನ ಉತ್ತರೀಯವನ್ನು ಹೊಸೆದು, ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಮರಕ್ಕೆ ಕಟ್ಟಲು ಮುನಿಸುತರು ಅತಿಯಾಗಿ ನಡುಗಿ ,ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು,ಇಲ್ಲವಾದರೆ ನಮ್ಮನ್ನು ಹೊಡೆಯುವರು ಎಂದರು ಅದಕ್ಕೆ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ?ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ,ತೀಡಿ ಜೇಂಕಾರ ಮಾಡಿ ನಿಂತಿದ್ದನು .

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

ಉ: ರಾವಣನ ವಧೆಯಿಂದ ಬ್ರಹ್ಮಹತ್ಯಾ ದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲುಶ್ರೀರಾಮನು ಮಹರ್ಷಿಗಳ ಸಲಹೆಯಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ಕುದುರೆಯ ಕಾವಲಿಗೆ ಶತ್ರುಘ್ನನನ್ನು ಕಳಿಸಿದನು. ದೇಶ ದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆಯು ಒಂದುದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬರುತ್ತದ.ಅಲ್ಲಿ ಮಹರ್ಷಿಗಳ ಆಶ್ರಮದ ಉಪವನದ ಕಾವಲಿಗೆ ನಿಯೋಜಿತನಾಗಿದ್ದ ಲವನು ತನ್ನ ಜೊತೆಯವರ ಕೂಡಿ ಧನುರ್ಧಾರಿಯಾಗಿ ಬರುತ್ತಿದ್ದಾಗ ಅಲ್ಲಿದ್ದ ಕುದುರೆಯನ್ನು

ನೋಡಿ ಎಲ್ಲಿಯ ತುರಗವಿದು ?ಹೀಗೆ ಹೂದೋಟವನ್ನು ಹಾಳು ಮಾಡುತ್ತಿದೆಯಲ್ಲ ,ವರುಣನಿರುವಲ್ಲಿಗೆ ಹೋಗುವಾಗ ವಾಲ್ಮೀಕಿ ಮಹರ್ಷಿಗಳು ಈ ವನವನ್ನು ನೋಡಿಕೊಳ್ಳಲು ಹೇಳಿ ಹೊಗಿದ್ದಾರೆ.ಅವರು ಮರಳಿ ಬಂದು ಇದನ್ನು ನೋಡಿದರೆ ನನ್ನ ಮೇಲೆ ಮುನಿಸಿಕೊಳ್ಳುವರುಎಂದು ಯೋಚಿಸಿ ಕುದುರೆಯ ಬಳಿ ಬರಲು ಅದರ ಮೇಲಿದ್ದ ಹಣೆಪಟ್ಟಿಯನ್ನು ನೋಡಿದನು.ಅದರಲ್ಲಿ ಈ ಭೂಮಿಯಲ್ಲಿ ಕೌಸಲ್ಯೆ ಪಡೆದ ಅವಳ ಮಗ ಶ್ರೀರಾಮನೊಬ್ಬನೇ ವೀರನು ,ಆತನ ಯಜ್ಞತುರಗವಿದು.ಅದನ್ನು ಕಟ್ಟುವ ವೀರರು ಯಾರಾದರೂ ಇದ್ದರೆ ಕಟ್ಟಬಹುದುಎಂದಿದ್ದ ಲೇಖನವನ್ನೋದಿದ ವೀರಲವನು ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ತಾಯಿಯನ್ನು ಜನರು ಬಂಜೆಯೆಂದು ಕರೆದಿರುವರೇ! ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜನ? ಎಂದು ಆಲೋಚಿಸಿ ಶ್ರೀರಾಮನ ಯಜ್ಞದ ಕುದುರೆಯನ್ನು ಕಟ್ಟಿ ಹಾಕಿದನು.

೨. ಲವನ ನಡುವಳಿಕೆ ಮೆಚ್ಚುಗೆಯಾಯಿತೇ?ಏಕೆ ?

ಉ: ಲವನ ನಡುವಳಿಕೆಯು ಮೆಚ್ಚುಗೆಯಾಯಿತು.ಇದನ್ನು ಮೂರು ಅಂಶಗಳಿಂದ ಸಮರ್ಥಿಸಬಹುದು.

ಮೊದಲನೆಯದಾಗಿ ಶ್ರೀರಾಮನ ಅಶ್ವಮೇಧದ ಕುದುರೆಯು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಉಪವನದಲ್ಲಿದ್ದ ಹಸಿರಿಗೆ ಮನಸೋತು ಅಲ್ಲಿ ಪ್ರವೇಶಿಸಿದಾಗ ಉಪವನದ ಕಾವಲಿಗೆ ಮಹರ್ಷಿಗಳಿಂದ ನೇಮಕವಾಗಿದ್ದ ಲವನು ಅದನ್ನು ನೋಡಿ ಮಹರ್ಷಿಗಳು ತೋಟದ ಕಾವಲಿಗೆ ತನ್ನನ್ನು ನೇಮಿಸಿ ವರುಣನಲ್ಲಿಗೆ ಹೋಗಿರುವರು.ಅವರು ಮರಳಿ ಬಂದು ತೋಟದ ದುರವಸ್ಥೆಯನ್ನು ನೋಡಿ ಮುನಿಸಿಕೊಳ್ಳುವರು ಎಂದು ಆಲೋಚಿಸುವನು.ತೋಟದ ರಕ್ಷಣೆಗೆ ಮುಂದಾಗುವನು.ಇಲ್ಲಿ ಲವನಲ್ಲಿ ಜಾಗೃತವಾದ ಕರ್ತವ್ಯ ಪ್ರಜ್ಞೆಯನ್ನು ಗಮನಿಸಬಹುದು.

ಅಲ್ಲದೇ ಯಜ್ಞಾಶ್ವದ ಕುದುರೆಯ ಮೇಲಿದ್ದ ಹಣೆಪಟ್ಟಿಯಲ್ಲಿ ಈಭೂಮಿಯಲ್ಲಿಕೌಸಲ್ಯೆಯ ಮಗನಾದಶ್ರೀರಾಮನೊಬ್ಬನೇವೀರನು.ಯಜ್ಞಾಶ್ವವನ್ನು ಕಟ್ಟುವವರು ಯಾರಾದರೂ ಇದ್ದರೆ ಕಟ್ಟಬಹುದು ಎಂದು

ಇರುವುದನ್ನು ಓದಿದ ಲವನು ಶ್ರೀರಾಮನೊಬ್ಬನೇ ವೀರನಾದರೆ ಅವನನ್ನು ಹಡೆದ ತಾಯಿಯು ವೀರಮಾತೆಯೆನಿಸುವಳು .ತನ್ನಲ್ಲಿ ತೋಳ್ಬಲವಿದ್ದೂ ಏನೂ ಪ್ರಯೋಜನವಿಲ್ಲದ ಹಾಗಾಗಿ ತನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯುವಂತಾಗುವುದುಆದ್ದರಿಂದ ಶ್ರೀರಾಮನ ಗರ್ವವನ್ನು ಅಡಗಿಸಿ ತನ್ನ ತಾಯಿಗೆ ವೀರ ಮಾತೆಯೆಂಬ ಗೌರವವನ್ನು ಒದಗಿಸಬೇಕೆಂಬ ಭಾವವು ಅವನಲ್ಲಿ ಜಾಗೃತವಾಗುವುದು.ಇಲ್ಲಿ ತನ್ನನ್ನು ಹೊತ್ತು ಹೆತ್ತ ತಾಯಿಗೆ ಉನ್ನತ ಪದವಿಗೌರವಗಳು ಸಿಗುವಂತೆ ಮಾಡುವುದುಅವಶ್ಯ ಎಂಬ ಮಾತೃ ಗೌರವ ಲವನಲ್ಲಿ ಮೈ ತಾಳಿದ್ದನ್ನು ಗಮನಿಸಬಹುದು.

ಶ್ರೀರಾಮನ ಕುದುರೆಯನ್ನು ಬಿಡದಿದ್ದರೆ ಅವನ ಕಡೆಯವರಿಂದ ಹೊಡೆಸಿಕೊಳ್ಳಬೇಕಾಗುವುದು. ಆದ್ದರಿಂದ ಕುದುರೆಯನ್ನು ಕಟ್ಟದಿರು ಎಂದು ಮುನಿಸುತರು ಲವನಲ್ಲಿ ಬೇಡಿಕೊಂಡಾಗ ಪಾರ್ವರ ಮಕ್ಕಳಾದ ನೀವು ಹೆದರುತ್ತೀರೆಂದರೆ ಜಾನಕಿಯ ಮಗನಾದ ನಾನಿದಕ್ಕೆ ಹೆದರುವೆನೇ ?ಎಂದು ಲವನು ಉತ್ತರಿಸುವನು .ಇಲ್ಲಿ ಲವನು ಚಿಕ್ಕ ಬಾಲಕನಾದರೂ ಲೋಕ ವೀರನೆನಿಸಿದ ಶ್ರೀರಾಮನಿಂದ ಮುಂದೆ ಎದುರಾಗಬಹುದಾದ ಅಪಾಯಕ್ಕೆ ಹೆದರದೇ ಅವನನ್ನು ಎದುರಿಸಲು ಸನ್ನದ್ಧನಾಗುವನು.ಇಲ್ಲಿ ಲವನಲ್ಲಿ ತಂದೆಯಾದ ಶ್ರೀರಾಮನ ಧೈರ್ಯ ಶೌರ್ಯಗಳು ವ್ಯಕ್ತವಾಗಿರುವುನ್ನು ಗಮನಿಸಬಹುದು.

## ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.

೧. ''ರಘೂದ್ವಹನ ಸೊಲ್ಗೇಳೆ ನಮಿಸಲ್''

ಉ: ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ 'ವೀರಲವ' ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ರಾವಣನ ಹತ್ಯೆಯಿಂದ ಬಂದೊದಗಿದ ಬ್ರಹ್ಮಹತ್ಯಾ ದೋಷ ನಿವಾರಣೆಗಾಗಿ ಮಹರ್ಷಿಗಳ ಸಲಹೆಯಂತೆ ಶ್ರೀರಾಮನು ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ರಕ್ಷಣೆಯ ಕುದುರೆಗೆ ಬೆಂಗಾವಲಾಗಿ ಶತ್ರುಘ್ನನನ್ನು ಕಳಿಸಿದನು.ಅದು ಇಡೀ ಭೂಮಂಡಲದೊಳಗೆ ಸಂಚರಿಸುತ್ತಿರಲು ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೆ ಕುದುರೆಯನ್ನು ಕಟ್ಟಲು ಹೆದರಿ ,ಅದಕ್ಕೆ ನಮಸ್ಕರಿಸಿ ಅದನ್ನು ತಡೆಯುವ ಯತ್ನವನ್ನು ಅವರು ಮಾಡಲಿಲ್ಲ ಎಂದು ಕವಿ ವಿವರಿಸಿದ್ದಾರೆ.

ಸ್ವಾರಸ್ಯ : ಯಜ್ಞಾಶ್ವದ ವಿಶೇಷತೆ ಮತ್ತು ಶ್ರೀರಾಮನ ಬಗ್ಗೆ ಇತರ ರಾಜರು ಹೊಂದಿರುವ ಭಯ ಭಕ್ತಿ ಗೌರವವನ್ನು ಮೇಲಿನ ವಾಕ್ಯವು ಸೂಚಿಸುವುದು.

೨. ''ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ ''

ಉ: ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ 'ವೀರಲವ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಲವ ಹೇಳಿದ್ದಾರೆ.

ಸಂದರ್ಭ :ವಾಲ್ಮೀಕಿಯ ಆಶ್ರಮ ಪ್ರವೇಶಿಸಿದ ಶ್ರೀರಾಮನ ಯಜ್ಞಾಶ್ವದ ಕುದುರೆಯ ಹಣೆಪಟ್ಟಿಯ ಮೇಲಿದ್ದ ಬರಹದಲ್ಲಿ ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ(ಕಟ್ಟುವ) ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದಿದ್ದನ್ನು ನೋಡಿ, ಓಹೋ ! ಅವನ (ಶ್ರೀರಾಮನ ) ಗರ್ವವನ್ನು ಮುರಿಯದಿದ್ದರೆ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ ? ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ ?ಎಂದರೆ ರಾಮನ ಗರ್ವವನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಲವನು ಉರಿದೆದ್ದನುಎಂದು ಕವಿ ವರ್ಣಿಸಿದ್ದಾರೆ .

ಸ್ವಾರಸ್ಯ :ಲವನು ತನ್ನ ತಾಯಿ ಸೀತಾಮಾತೆಯ ಬಗ್ಗೆ ಗೌರವ ಹೊಂದಿರುವುದರ ಜೊತೆಗೆ ಅವಳಿಗೆ ಸರ್ವ ಗೌರವವನ್ನು ದೊರಕಿಸಬೇಕೆಂಬ ಹಂಬಲವನ್ನು ಅವಳ ಗೌರವಕ್ಕೆ ಧಕ್ಕೆ ಬರದಂತೆ ತಾನು ನಡೆಯಬೇಕೆಂಬ ಮನೋಭಾವನೆಯನ್ನು ಹೊಂದಿದ್ದನು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೩. ''ಅರಸುಗಳ ವಾಜಿಯಂ ಬಿಡು ''

ಉ:ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ 'ವೀರಲವ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಮುನಿಸುತರು ಲವನಿಗೆ ಹೇಳಿದ್ದಾರೆ.

ಸಂದರ್ಭ : ಯಜ್ಞಾಶ್ವದ ಹಣೆಪಟ್ಟಿಯಲ್ಲಿದ್ದ ಬರಹವನ್ನು ಓದಿದ ಲವನು ಕೆರಳಿ ಲೋಕದಲ್ಲಿ ರಾಮನೊಬ್ಬನೇ ಸರ್ವ ಶ್ರೇಷ್ಠ ಎಂದು ಒಪ್ಪಿ ಅದನ್ನು ಕಟ್ಟದೇ ಹಾಗೆ ಬಿಟ್ಟರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆಯೆಂದು ಕರೆದಾರು.ಅಲ್ಲದೇ ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜನ ? ಎಂದು ಯೋಚಿಸಿ ಅದನ್ನು ಕಟ್ಟಿ ಹಾಕಿದನು.ಆಗ ಅಲ್ಲಿದ್ದ ಮುನಿಸುತರು ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು ನಮಗೆ ತೊಂದರೆಯಾಗುವುದು ಎಂದು ಕುದುರೆಯನ್ನು ಕಟ್ಟಬೇಡವೆಂದು ಲವನನ್ನು ತಡೆಯುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಕುದುರೆಯನ್ನು ಕಟ್ಟಿದ್ದರೆ ಶ್ರೀರಾಮನವರ ಕಡೆಯಿಂದ ಮುಂದೆ ಉಂಟಾಗಬಹುದಾದ ಅಪಾಯದ ಕುರಿತು ಮುನಿಕುಮಾರರ ಭಯವನ್ನು ಮೇಲಿನ ವಾಕ್ಯವು ಸೂಚಿಸುವುದು.

೪. '' ಜಾನಕಿಯ ಮಗನಿದಕೆ ಬೆದರುವನೆ ''

ಉ:ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ ವೀರಲವ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಲವನು ಮುನಿಸುತರಿಗೆ ಹೇಳಿದ್ದಾನೆ.

ಸಂದರ್ಭ : ವಾಲ್ಮೀಕಿಯ ಆಶ್ರಮವನ್ನು ಶ್ರೀರಾಮನ ಅಶ್ವಮೇಧದ ಕುದುರೆಯು ಪ್ರವೇಶಿಸಿದಾಗ ಆಶ್ರಮದ ಕಾವಲಿಗಿದ್ದ ಲವನು ಅದನ್ನು ಕಟ್ಟಿ ಹಾಕಿದನು.ಆಗ ಅವನ ಜೊತೆಯಿದ್ದ ಮುನಿಕುಮಾರರು ಹೆದರಿ ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು ಇಲ್ಲವಾದರೆ ಅವರು ಬಂದು ನಮ್ಮನ್ನು ಹೊಡೆಯುವರು ಎಂದು ಲವನಿಗೆ ಹೇಳಿದರು.ಆಗ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ?ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ,ತೀಡಿ ಜೇಂಕಾರ ಮಾಡಿ ನಿಂತಿದ್ದನು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಲವನು ತನ್ನ ಶೌರ್ಯದ ಕುರಿತು ಹೊಂದಿರುವ ಅಭಿಮಾನವನ್ನು , ಶ್ರೀರಾಮನ ಯಜ್ಞದ ಕುದುರೆಯನ್ನು ಕಟ್ಟಿ ಅವನನ್ನು ಎದುರಿಸಿಯೇ ಸಿದ್ಧ ಎಂಬ ಅವನ ನಿಲುವನ್ನು ಮೇಲಿನ ವಾಕ್ಯವು ಸೂಚಿಸುವುದು.

## ಹೊಂದಿಸಿ ಬರೆಯಿರಿ.

| ಅ. | ಬ |
|---|---|
| ೧. ದೇವನೂರು | ರಾಮ |
| ೨. ಕೌಸಲ್ಯೆ | ಲಕ್ಷ್ಮೀಶ |
| ೩. ವರುಣ | ಅಶ್ವ |
| ೪. ವಾಲ್ಮೀಕಿ | ಅಬ್ಧಿಪ |
| ೫. ತುರಂಗ | ಮುನಿ |
| | ಮಳೆ |

ಶತ್ರುಘ್ನ

೧.ದೇವನೂರು –ಲಕ್ಷ್ಮೀಶ ೨.ಕೌಸಲ್ಯೆ–ರಾಮ ೩.ವರುಣ –ಅಬ್ಧಿಪ ೪.ವಾಲ್ಮೀಕಿ –ಮುನಿ ೫.ಅಶ್ವ –ತುರಂಗ

## ಭಾಷಾ ಚಟುವಟಿಕೆ

### ೧. ವಿಗ್ರಹಿಸಿ ಸಮಾಸವನ್ನು ಹೆಸರಿಸಿ.

**ಸೊಲ್ಗೇಳಿ , ನಲ್ಗುದುರೆ ,ಬಿಲ್ಗೊಂಡು , ಬಿಲ್ದಿರುವನೇರಿಸಿ, ಪೂದೋಟ**

**ಸೊಲ್ +ಕೇಳಿ =ಕ್ರಿಯಾ ಸಮಾಸ ನಲ್ +ಕುದುರೆ =ಕರ್ಮಧಾರಯ ಸಮಾಸ ಬಿಲ್ಲನ್ನು +ಕೊಂಡು =ಕ್ರಿಯಾ ಸಮಾಸ ಬಿಲ್ದಿರುವನು +ಏರಿಸಿ=ಕ್ರಿಯಾ ಸಮಾಸ ಪೂವಿನ (ಹೂವಿನ )+ತೋಟ =ತತ್ಪುರುಷ ಸಮಾಸ**

### ೨. ತತ್ಸಮ ತದ್ಭವ ಬರೆಯಿರಿ.

**ವೀರ ,ಯಜ್ಞ, ಬಂಜೆ**

**ವೀರ –ಬೀರ ಯಜ್ಞ–ಜನ್ನ ಬಂಜೆ –ವಂಧ್ಯಾ**

**೩. ವಿಂಗಡಿಸಿ ಸಂಧಿಯ ಹೆಸರು ಬರೆಯಿರಿ.**

**ಚರಿಸುತಧ್ವರದ ,ನಿಜಾಶ್ರಮ , ಲೇಖನವನೋದಿ ,ತೆಗೆದುತ್ತರೀಯಮಂ ,ಬೇಡಬೇಡರಸುಗಳ ,ನಿಂತಿರ್ದನು ,**

**ಚರಿಸುತ+ಅಧ್ವರದ =ಲೋಪ ಸಂಧಿ ನಿಜ +ಆಶ್ರಮ =ಸವರ್ಣದೀರ್ಘ ಸಂಧಿ**

**ತೆಗೆದು +ಉತ್ತರೀಯಮಂ =ಲೋಪಸಂಧಿ**

**ಬೇಡಬೇಡ+ಅರಸುಗಳ =ಲೋಪಸಂಧಿ ನಿಂತು+ಇರ್ದನು =ಲೋಪ ಸಂಧಿ**

**ಲೇಖನವನು +ಓದಿ =ಲೋಪ ಸಂಧಿ**

**೪. ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.**

**_ U _ | _ _ U|UUU U U| _ _ U** 5|5|5|5 =೨೦

**ಊರ್ವಿಯೊಳ್| ಕೌಸಲ್ಯೆ| ಪಡೆದ ಕುವ|ರಂ ರಾಮ**

**_ U _ | _ U _ | UU _ U|UUUUU** 5|5|5|5| =೨೦

**ನೋರ್ವನೇ| ವೀರನಾ| ತ ನ ಯಜ್ಞ ತುರಗಮಿದು**

**– U UU|_ U _| _ U _ | UUU_ _ U _ |UUU _ | _** 5|5|5|5|5|5+2(ಗುರು ) =೩೦+೨

**ನಿರ್ವಹಿಸ|ಲಾರ್ಪರಾ|ರಾದೊಡಂ| ತಡೆಯಲೆಂ|ದಿರ್ದ ಲೇ|ಖನವನೋದಿ**


**ವಾರ್ಧಕ ಷಟ್ಪದಿ ಲಕ್ಷಣ**

**ಆರು ಸಾಲುಗಳುಳ್ಳ ಪದ್ಯ . ಒಂದು ,ಎರಡು ,ನಾಲ್ಕು ಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಸಮಾನವಾಗಿದ್ದು ಐದು ಮಾತ್ರೆಗಳ ನಾಲ್ಕು ಗಣಗಳು ಪ್ರತಿ ಪಾದದಲ್ಲೂ ಇರುತ್ತವೆ. ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿದ್ದು ಐದು ಮಾತ್ರ ಗಳ ಆರಾರು ಗಣಗಳು ಪ್ರತಿ ಪಾದದಲ್ಲೂ ಇದ್ದು ಕೊನೆಯಲ್ಲಿ ಒಂದು ಗುರು ಇರುತ್ತದೆ.**

| | |
|---|---|
| ಘಟಕ ಪರೀಕ್ಷೆ –೧ ೧೫ ಅಂಕಗಳು<br>ಒಂದೊಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ. ೪*೧=೪<br>೧. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು ?<br>೨.ಯಜ್ಞಾಶ್ವವನ್ನು ಕಟ್ಟಿಧವರು ಯಾರು ?<br>೩. ಕುದುರೆಯನ್ನು ಲವನು ಯಾವುದರಿಂದ ಕಟ್ಟಿಧನು?<br>೪. ಮುನಿಸುತರು ಹೆದರಲು ಕಾರಣವೇನು ?<br>ಲಕ್ಷ್ಮೀಶ ಕವಿಯ ಸಂಕ್ಷಿಪ್ತ ಪರಿಚಯ ಬರೆಯಿರಿ. ೩ ಅಂಕಗಳು<br>ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪<br>೧. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.<br>೨. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?<br>೮ ರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೪ ಅಂಕಗಳು<br>೧. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ? | ಘಟಕ ಪರೀಕ್ಷೆ -೨<br>ಒಂದು ವಾಕ್ಯದಲ್ಲಿ ಉತ್ತರಿಸಿ ೧ ಅಂಕ ೧. ಶ್ರೀರಾಮನ ಯಜ್ಞಾಶವವು ಯಾರ ಆಶ್ರಮವನ್ನು ಪ್ರವೇಶಿಸಿತು ?<br>ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ ೨ ಅಂಕಗಳು<br>'ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.<br>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ ೪*೩=೧೨ ೧. ''ರಘೂದ್ವಹನ ಸೊಲ್ಗೇಳಿ ನಮಿಸಲ್''೨. ''ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ಪುದೆ ''೩. ''ಅರಸುಗಳ ವಾಜಿಯಂ ಬಿಡು ''೪. '' ಜಾನಕಿಯ ಮಗನಿದಕೆ ಬೆದರುವನೆ ' |

## ಪದ್ಯ –೮ ಕೆಮ್ಮನೆ ಮೀಸೆವೊತ್ತೆನೇ –ಪಂಪ

### ಕೃತಿಕಾರರ ಪರಿಚಯ




ಪಂಪ ಮಹಾಕವಿಯ ಕಾಲ ಸುಮಾರು ಕ್ರಿ.ಶ. ೯೪೧ .ಇವನು ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದವನು. ಚಾಲುಕ್ಯ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ(ಪಂಪಭಾರತ) ಎಂಬ ಮಹಾಕಾವ್ಯಗಳ ಕರ್ತೃ .ರತ್ನತ್ರಯರಲ್ಲಿ ಒಬ್ಬನಾದ ಪಂಪನು ಸರಸ್ವತೀ ಮಣಿಹಾರ ,ಸಂಸಾರ ಸಾರೋದಯ ,ಕವಿತಾಗುಣಾರ್ಣವ ಬಿರುದುಗಳನ್ನು ಪಡೆದಿದ್ದನು.

ಪ್ರಸ್ತುತ ಪದ್ಯವನ್ನು ಪಂಪ ಮಹಾಕವಿ ವಿರಚಿತ ವಿಕ್ರಮಾರ್ಜುನ ವಿಜಯಂ ದ ದ್ವಿತೀಯಾಶ್ವಾಸದಿಂದ ಆರಿಸಲಾಗಿದೆ (ಸಂಪಾದಕರು –ಡಿ.ಎಲ್.ನರಸಿಂಹಾಚಾರ್ಯ )

### ಒಂದು ವಾಕ್ಯದಲ್ಲಿ ಉತ್ತರಿಸಿ .

೧. ದ್ರೋಣರು ಪರಶುರಾಮನಲ್ಲಿಗೆ ಏಕೆ ಬಂದನು ?

ಉ: ದ್ರೋಣನು ತನಗೆ ಬಡತನವುಂಟಾಗಲು ದ್ರವ್ಯವನ್ನು ಬೇಡುವುದಕ್ಕಾಗಿ ಪರಶುರಾಮನ ಬಳಿಗೆ ಬಂದನು.

೨. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು ?

ಉ: ಪರಶುರಾಮನು ವಾರುಣ , ವಾಯುವ್ಯ, ಆಗ್ನೇಯ, ಐಂದ್ರಾದಿ ಅಸ್ತ್ರಗಳನ್ನು ದ್ರೋಣನಿಗೆ ಕೊಟ್ಟನು.

೩. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ?

ಉ: ದ್ರೋಣನು ಅಶ್ವತ್ಥಾಮನೊಡನೆ ಪರಶುರಾಮನ ಬಳಿಗೆ ಬಂದನು.

೪. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು ?

ಉ: ಹಾಗೆನ್ನುವವನು ಯಾರ ಸಂಬಂಧಿ ? ಇದು ವಿಶೇಷ ಭ್ರಮೆಯಲ್ಲವೆ ? ದ್ರೋಣನೆಂಬುವವನು ಬ್ರಾಹ್ಮಣನೇ ಹೇಗೆ ? ನನಗೆ ಸ್ನೇಹಿತನೇ ಹೇಳು ? ಅಂತಹವನನ್ನು ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ದ್ರುಪದನು ಪಡಿಯರನಿಗೆ ಹೇಳಿದನು.

### ಮೂರು– ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?

ಉ: ದ್ರೋಣನು ತನಗೆ ಬಡತನವುಂಟಾಗಲು ಅಶ್ವತ್ಥಾಮನನ್ನೂ ಕರೆದುಕೊಂಡು ದೇಶದೇಶಗಳನ್ನೆಲ್ಲ ಸುತ್ತಿ ಪರಶುರಾಮನ ಬಳಿಗೆ ಬಂದನು .ಈಗ ನಾರು ಮಡಿಯಿಂದ ಕೂಡಿದ ನಡುವನ್ನುಳ್ಳವನೂ ಜಟಾಸಮೂಹದಿಂದ ಕೂಡಿದವನೂ ಆದ ಆ ಪರಶುರಾಮನು ದ್ರವ್ಯವನ್ನು ಬೇಡುವುದಕ್ಕಾಗಿ ಬಂದ ದ್ರೋಣನನ್ನು ಚಿನ್ನದ ಪಾತ್ರೆಗಳಿಲ್ಲದುದರಿಂದ ಮಣ್ಣಿನ ಪಾತ್ರೆಯಲ್ಲಿಯೇ ಅರ್ಘ್ಯವನ್ನು ಕೊಟ್ಟು ಪೂಜಿಸಿದನು.

೨. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?
ಉ: ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದುದನ್ನು ತಿಳಿದಿಲ್ಲವೇ ?ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು ) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ತೀವ್ರ ನಾಚಿಕೆಯಾಗುವಂತೆ ಹೀಯ್ಯಾಳಿಸಿದನು .

೩. ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು ?
ಉ:ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು. ಮಾತುಗಳು ನಾಚಿಕೆಯಿಲ್ಲದಾಗುವವು. ಮರೆಯುವಂತೆ ಮಾಡುವುದು. ಆದುದದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ವಿಶದವಾಗಿ ತಿಳಿದೆನು.ಎಲೋ ಖಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು. ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಮಾಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ ? ಎಂದು ದ್ರೋಣನು ದ್ರುಪದನಿಗೆ ಹೇಳಿದನು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.
ಉ: ದ್ರೋಣನು ತನಗೆ ಬಡತನವುಂಟಾದಾಗ ಸಹಾಯಕ್ಕಾಗಿ ಬಾಲ್ಯದ ಗೆಳೆಯ ದ್ರುಪದ ರಾಜನ ಬಳಿ ಬಂದನು. ದ್ರೋಣನು ಪಡಿಯರನ ಬಳಿ ಹೇಳಿ ಕಳಿಸಿದಾಗ ಅಂತಹವನನ್ನು ನಾನು ತಿಳಿದಿಲ್ಲ. ಅವನನ್ನು ಹೊರಕ್ಕೆ ತಳ್ಳು ಎಂದು ಸಭಾ ಮಧ್ಯದಲ್ಲಿ ಕೆಟ್ಟ ಮಾತನಾಡಿದನು. ಹೀಗೆ ಹೇಳಿದುದನ್ನು ದ್ವಾರಪಾಲಕನು ಬಂದು ಆ ರೀತಿಯಲ್ಲಿ ತಿಳಿಸಲಾಗಿ ದ್ರೋಣನು ಒತ್ತಾಯದಿಂದ ಒಳಕ್ಕೆ ಪ್ರವೇಶಿಸಿ ದ್ರುಪದನನ್ನು ನೋಡಿ ,ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದುದನ್ನು ತಿಳಿದಿಲ್ಲವೇ ? ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು ) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ತೀವ್ರ ನಾಚಿಕೆಯಾಗುವಂತೆ ಹೀಯ್ಯಾಳಿಸಿದನು .

ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು. ಮುಖದಲ್ಲಿ ವಕ್ರ ಚೇಷ್ಟೆಯುಂಟಾಗುವುದು.ಮಾತುಗಳು ನಾಚಿಕೆಯಿಲ್ಲದಾಗುವವು. ಸಂಬಂಧವನ್ನು ಮರೆಯುವಂತೆ ಮಾಡುವುದು. ಆದುದದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ವಿಶದವಾಗಿ ತಿಳಿದೆನು.ಎಲೋ ಖಳನೇ, ನೊಣಕ್ಕೆ ಕಸವೇ ಶ್ರೇಷ್ಠವಾದುದು. ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ ?ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಮಾಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ ? ಎಂದು ದ್ರೋಣನು ದ್ರುಪದನಿಗೆ ಹೇಳಿದನು.

೨. ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.
ಉ: ದ್ರೋಣ ಮತ್ತು ದ್ರುಪದರಿಬ್ಬರೂ ಸಹಪಾಠಿಗಳು .ಯಜ್ಞಸೇನನೆಂಬ ಗುರುವಿನಲ್ಲಿ ವಿದ್ಯಾಭ್ಯಾಸ ಮಾಡಿದರು.ದ್ರುಪದನು ತಾನು ದೊರೆಯಾದಾಗ ತನ್ನ ಬಳಿಗೆ ಬಂದರೆ ಸಹಾಯ ಮಾಡುವುದಾಗಿ ದ್ರೋಣನಿಗೆ ಹೇಳಿದನು.ದ್ರೋಣನಿಗೆ ಬಡತನ

ದೊರೆಕೊಂಡಿತು.ಈ ವೇಳೆಗೆ ದ್ರುಪದನು ರಾಜನಾಗಿದ್ದನು. ದ್ರುಪದನು ವಿದ್ಯಾಭ್ಯಾಸ ಮಾಡುವ ಸಮಯದಲ್ಲಿ ಆಡಿದ್ದ ಮಾತುಗಳನ್ನು ಜ್ಞಾಪಿಸಿಕೊಂಡು ಸಹಾಯವನ್ನು ನಿರೀಕ್ಷಿಸಿ ದ್ರುಪದನಲ್ಲಿಗೆ ಬಂದನು. ಆದರೆ ದ್ರುಪದನಿಗೆ ಅಧಿಕಾರ ಮದ ಆವರಿಸಿತ್ತು. ದ್ರೋಣ ತನ್ನ ಸಹಪಾಠಿ ಎಂದು ಗುರುತಿಸದಾದನು.ದ್ರೋಣನು ಬಾಲ್ಯದ ದಿನಗಳನ್ನು ನೆನಪಿಸಲು ಪ್ರಯತ್ನಿಸಿದಾಗ ದ್ರುಪದ ರಾಜನು ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ?ಎಂದು ತಿರಸ್ಕಾರದ ಮಾತುಗಳನ್ನಾಡಿದನು. ಇದರಿಂದ ಕೋಪಗೊಂಡ ದ್ರೋಣನು ಐಶ್ವರ್ಯದಿಂದ ಮದೋನ್ಮತ್ತನಾಗಿ ಸಂಬಂಧವನ್ನು ಮರೆತ ನಿನ್ನನ್ನು ನೋಡಿದರೆ ಐಶ್ವರ್ಯವು ಕಳ್ಳನೊಡನೆ ಹುಟ್ಟಿತ್ತು ಎಂಬ ಮಾತು ಇಂದಿಗೆ ನನಗೆ ಸ್ಪಷ್ಟವಾಯಿತು. ಆದರೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ ? ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಮಾಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ ? ಎಂದು ದ್ರೋಣನು ತುಂಬಿದ ಸಭೆಯಲ್ಲಿ ದ್ರುಪದನ ವಿರುದ್ಧ ಶಪಥ ಮಾಡಿದನು.

## ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ.

೧. " ಈಗಳೊಂದಡಕೆಯುಮಿಲ್ಲ ಕೈಯೊಳ್ "

ಈ ಮೇಲಿನ ವಾಕ್ಯವನ್ನು ಪಂಪನು ಬರೆದ ಪಂಪಭಾರತ (ವಿಕ್ರಮಾರ್ಜುನ ವಿಜಯ) ಎಂಬ ಮಹಾಕಾವ್ಯದಿಂದ ಆರಸಲಾದ ' ' 'ಕೆಮ್ಮನೆ ಮೀಸೆವೊತ್ತೆನೇ 'ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ದ್ರೋಣನು ತನಗೆ ಬಡತನ ಬಂದಾಗ ಸಹಾಯ ಕೇಳಲು ಪರಶುರಾಮನ ಬಳಿ ಬಂದಾಗ ನನ್ನ ಪದಾರ್ಥಗಳನ್ನೆಲ್ಲ ಬೇಡಿದವರಿಗೆ ಕೊಟ್ಟೆನು. ಭೂಮಂಡಲವನ್ನು ಗುರುಗಳಿಗೆ ಕೊಟ್ಟೆನು. ಈಗ ನನ್ನಲ್ಲಿ ಒಂದಡಕೆಯೂ ಇಲ್ಲ. ಬೇಡುವವನಾದರೋ ವೇದಪಾರಂಗತ . ಹೇಗೆ ಅವನನ್ನು ಸಂತೋಷಪಡಿಸಲಿ ? ಎಂದು ಪರಶುರಾಮನು ಮರುಗುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ದ್ರೋಣನಿಗೆ ಏನೂ ಕೊಡದೇ ಹಾಗೆ ಕಳಿಸಲು ಮನಸ್ಸಿಲ್ಲದ ಪರಶುರಾಮನ ಅಸಹಾಯಕತೆ ವ್ಯಕ್ತವಾಗಿದೆ.

೨. " ವಿದ್ಯಾಧನಮೆ ಧನಮಪ್ಪುದು "

ಉ: ಈ ಮೇಲಿನ ವಾಕ್ಯವನ್ನು ಪಂಪನು ಬರೆದ ಪಂಪಭಾರತ (ವಿಕ್ರಮಾರ್ಜುನ ವಿಜಯ) ಎಂಬ ಮಹಾಕಾವ್ಯದಿಂದ ಆರಸಲಾದ ' ಕೆಮ್ಮನೆ ಮೀಸೆವೊತ್ತೆನೇ' ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ : ದ್ರೋಣನು ತನಗೆ ಬಡತನ ಉಂಟಾದಾಗ ಪರಶುರಾಮರ ಬಳಿ ಬಂದು ಸಹಾಯ ಕೇಳಿದನು.ಆಗ ಪರಶುರಾಮರು " ದ್ರೋಣನೇ ಈಗ ಇದೊಂದು ಬಿಲ್ಲೂ ಇದೊಂದು ದಿವ್ಯಾಸ್ತ್ರಗಳ ಸಮೂಹವೂ ಇದೆ. ಬೇರೆ ಆಸ್ತಿಯಿಲ್ಲ. ಇವುಗಳಲ್ಲಿ ನಿನಗೆ ಯಾವುದನ್ನು ಕೊಡಲಿ ? ಚೆನ್ನಾಗಿ ಯೋಚಿಸಿ ಹೇಳು."ಎಂದು ಹೇಳಿದರು. ಆಗ ದ್ರೋಣನು ಮೇಲಿನಂತೆ ಹೇಳುತ್ತ ನನಗೆ ದಿವ್ಯಾಸ್ತ್ರಗಳನ್ನು ದಯಪಾಲಿಸಿ ಎಂದು ಕೇಳಿಕೊಳ್ಳುವನು.

ಸ್ವಾರಸ್ಯ : ವಿದ್ಯೆಗಿಂತ ಮಿಗಿಲಾದ ಸಂಪತ್ತಿಲ್ಲ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. "ಎಂತು ನಾಣಿಲಿಗರಪ್ಪರೆ ಮಾನಸರ್ "

ಉ: ಈ ಮೇಲಿನ ವಾಕ್ಯವನ್ನು ಪಂಪನು ಬರೆದ ಪಂಪಭಾರತ (ವಿಕ್ರಮಾರ್ಜುನ ವಿಜಯ) ಎಂಬ ಮಹಾಕಾವ್ಯದಿಂದ ಆರಸಲಾದ ಕೆಮ್ಮನೆ ಮೀಸೆವೊತ್ತೆನೇ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ದ್ರುಪದನು ದ್ರೋಣನನ್ನು ಕುರಿತು ಈ ಮಾತು ಹೇಳಿದನು.

ಸಂದರ್ಭ : ಬಾಲ್ಯದ ಸ್ನೇಹವನ್ನು ,ದ್ರುಪದನು ತನಗೆ ಕೊಟ್ಟ ಮಾತನ್ನು ನೆನೆದು ದ್ರೋಣನು ತನಗೆ ಬಡತನವುಂಟಾದಾಗ ದ್ರುಪದನ ಬಳಿ ಬಂದಾಗ ದ್ರೋಣನೆನ್ನುವವನು ಬ್ರಾಹ್ಮಣನೇ? ನನಗೆ ತಿಳಿಯದು ಎಂದು ದ್ರುಪದನು ಪಡಿಯರನ ಬಳಿ ಹೇಳಿ ಕಳಿಸಿದಾಗ ,ದ್ರೋಣನು ಅಣ್ಣಾ ನೀನೂ ನಾನೂ ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದುದುದನ್ನು ತಿಳಿದಿಲ್ಲವೇ ?ಎನ್ನಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು ) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ತೀವ್ರ ನಾಚಿಕೆಯಾಗುವಂತೆ ಹೀಯ್ಯಾಳಿಸಿದನು .

ಸ್ವಾರಸ್ಯ : ದ್ರುಪದನ ಅಹಂಕಾರ , ರಾಜಪ್ರತಿಷ್ಠೆ , ಬಡ ಸ್ನೇಹಿತನ ಬಗೆಗಿನ ತಿರಸ್ಕಾರ ಇಲ್ಲಿ ವ್ಯಕ್ತವಾಗಿದೆ.

೪. " ಜಲಕ್ಕನೀಗಳರಿದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ "

ಉ : ಈ ಮೇಲಿನ ವಾಕ್ಯವನ್ನು ಪಂಪನು ಬರೆದ ಪಂಪಭಾರತ (ವಿಕ್ರಮಾರ್ಜುನ ವಿಜಯ) ಎಂಬ ಮಹಾಕಾವ್ಯದಿಂದ ಆರಸಲಾದ ಕೆಮ್ಮನೆ ಮೀಸೆವೊತ್ತೆನೇ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ : ದ್ರೋಣನಿಗೆ ಬಡತನವುಂಟಾದಾಗ ತನ್ನ ಗೆಳೆಯ ದ್ರುಪದನ ಬಳಿ ಸಹಾಯವನ್ನು ಯಾಚಿಸಿ ಬರಲು ದ್ರುಪದನು ನಿನ್ನನ್ನು ನಾನು ತಿಳಿದಿಲ್ಲ (ನೀನು ನನಗೆ ಅಪರಿಚಿತನು ) ನೀನು ನನ್ನನ್ನು ಅದೆಲ್ಲಿ ಕಂಡಿದ್ದೆಯೊ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಸ್ನೇಹ ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರೂ ಆಗುತ್ತಾರೆಯೇ ? ಎಂಬ ಮಾತುಗಳಿಂದ ದ್ರೋಣನಿಗೆ ತೀವ್ರ ನಾಚಿಕೆಯಾಗುವಂತೆ ಹೀಯ್ಯಾಳಿಸಿದನು .ಆಗ ದ್ರೋಣನು ಐಶ್ವರ್ಯ ಬರಲು ಮದ್ಯಪಾನ ಮಾಡಿದವರಂತೆ ಮಾತು ತೊದಲುವುದು. ಮುಖದಲ್ಲಿ ವಕ್ರ ಚೇಷ್ಟೆಯುಂಟಾಗುವುದು.ಮಾತುಗಳು ನಾಚಿಕೆಯಿಲ್ಲದಾಗುವವು. ಸಂಬಂಧವನ್ನು ಮರೆಯುವಂತೆ ಮಾಡುವುದು. ಆದುದದರಿಂದ ಐಶ್ವರ್ಯವು ಕಳ್ಳಿನೊಡನೆ ಹುಟ್ಟಿತು ಎಂಬುದನ್ನು ನಿಸ್ಸಂಶಯವಾಗಿ ಈಗ ವಿಶದವಾಗಿ ತಿಳಿದೆನು.

ಸ್ವಾರಸ್ಯ :

೫. "ನೊಳವಿಂಗೆ ಕುಪ್ಪೆವರಂ "

ಉ : ಈ ಮೇಲಿನ ವಾಕ್ಯವನ್ನು ಪಂಪನು ಬರೆದ ಪಂಪಭಾರತ (ವಿಕ್ರಮಾರ್ಜುನ ವಿಜಯ) ಎಂಬ ಮಹಾಕಾವ್ಯದಿಂದ ಆರಸಿಲಾದ ಕೆಮ್ಮನೆ ಮೀಸೆವೊತ್ತೆನೆ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ದ್ರೋಣನು ಹೇಳಿದ್ದಾನೆ.

ಸಂದರ್ಭ : ಸಹಾಯ ಯಾಚಿಸಿ ಬಂದ ದ್ರೋಣನು ಮನಬಂದಂತೆ ಹೀಯಾಳಿಸಿದಾಗ ಅವಮಾನ ಸಹಿಸದ ದ್ರೋಣನು ನೊಣಕ್ಕೆ ಕಸವೇ ಶ್ರೇಷ್ಠವಾದುದು. ಎನ್ನುವ ಗಾದೆಯ ಹಾಗೆ ನಿನ್ನ ಯೋಗ್ಯತೆ ನನ್ನವರೆಗೂ ಉಂಟೇ ?ಜೊತೆಯಲ್ಲಿ ವಿದ್ಯಾಭ್ಯಾಸ ಮಾಡಿದೆವೆಂಬ ಒಂದು ಕಾರಣದಿಂದ ನಿನ್ನನ್ನು ಕೊಲ್ಲಲಾರೆ. ಈ ಸಭಾಮಂಡಲದಲ್ಲಿ ನನ್ನನ್ನು ಹೀಯ್ಯಾಳಿಸಿದ ನಿನ್ನನ್ನು ನಿರಾಯಾಸವಾಗಿ ನನ್ನ ಶಿಷ್ಯರಿಂದ ನೀನು ಗಾಬರಿ ಮಾಡುವಂತೆ ಕಟ್ಟಿಸದೆ ಬಿಟ್ಟರೆ ನಾನು ಮೀಸೆಯನ್ನು ಹೊತ್ತಿರುವುದು ವ್ಯರ್ಥವಲ್ಲವೆ ? ಎಂದು ದ್ರುಪದನಿಗೆ ಹೇಳಿದನು.

ಸ್ವಾರಸ್ಯ : ವ್ಯಕ್ತಿಯ ನಡೆ ನುಡಿಯ ಮೂಲಕವೇ ಯೋಗ್ಯತೆಯನ್ನು ಅಳೆಯಬಹುದು .ಅವರರವರ ಯೋಗ್ಯತೆಯಂತೆ ಅವರ ಅಭಿರುಚಿ ಸ್ವಭಾವ ವ್ಯಕ್ತವಾಗುತ್ತದೆ ಎನ್ನುವುದು ಮೇಲಿನ ವಾಕ್ಯದಿಂದ ಅರ್ಥೈಸಬಹುದು.

## ಭಾಷಾ ಚಟುವಟಿಕೆ

**ಕೊಟ್ಟಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿ.**

ವಲ್ಕಲಾವೃತ=ವಲ್ಕಲ +ಆವೃತ = ಸವರ್ಣ ದೀರ್ಘಸಂದಿ

ದ್ರವ್ಯಾರ್ಥಿ =ದ್ರವ್ಯ+ಅರ್ಥಿ=ಸವರ್ಣದೀರ್ಘಸಂದಿ ,

ನಿಮ್ಮರಸ=ನಿಮ್ಮ+ಅರಸ =ಲೋಪಸಂಧಿ
ಮದೋನ್ಮತ್ತ=ಮದ +ಉನ್ಮತ್ತ =ಗುಣಸಂದಿ
ಕಳ್ಗುಡಿ =ಕಳ್ +ಕುಡಿ=ಆದೇಶಸಂಧಿ

**ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸ ಹೆಸರಿಸಿ.**

ನಾಣಿಲಿ =ನಾಣ್ +ಇಲ್ಲದವನು ಯಾರೋ ಅವನು =ನಾಚಿಕೆಗೇಡಿ =ಬಹುವ್ರೀಹಿ ಸಮಾಸ
ದಿವ್ಯಶರಾಳಿ=ದಿವ್ಯವಾದ +ಶರಾಳಿ =ಕರ್ಮಧಾರಯ ಸಮಾಸ ,
ಮಹೀಪತಿ=ಮಹಿಗೆ +ಪತಿ =ತತ್ಪುರುಷಸಮಾಸ , ಮಹಿಗೆ +ಪತಿ(ಒಡೆಯ) ಯಾರೋ ಅವನು =ರಾಜ (ಬಹುವ್ರೀಹಿ ಸಮಾಸ
ಕಳ್ಗುಡಿದ =ಕಳ್ಳನ್ನು +ಕುಡಿದ =ಕ್ರಿಯಾ ಸಮಾಸ

**ಕೊಟ್ಟಿರುವ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ ,ಲಕ್ಷಣದೊಂದಿಗೆ ಸಮನ್ವಯಗೊಳಿಸಿ.**

ನೊಳವಿಂಗೆ ಕುಪ್ಪೆವರಮೆಂಬವೊಲಾಂಬರಮುಂಟೆ ನಿನ್ನದೊಂದಳವು
ಉಪಮೇಯ : ನಿನ್ನದೊಂದಳವು (ದ್ರುಪದನ ಯೋಗ್ಯತೆ )
ಉಪಮಾನ : ಕಸದತಿಪ್ಪೆಯನ್ನು ಶ್ರೇಷ್ಠವೆಂದು ಭಾವಿಸುವ ನೊಣದ ಯೋಗ್ಯತೆ (ನೊಳವಿಂಗೆ ಕುಪ್ಪೆವರಂ )
ಉಪಮಾವಾಚಕ :ಎಂಬವೊಲ್
ಸಮಾನಧರ್ಮ : ಲುಪ್ತವಾಗಿದೆ .
ಅಲಂಕಾರ : ಉಪಮಾ ಅಲಂಕಾರ

ಸಮನ್ವಯ : ಉಪಮೇಯವಾದ ದ್ರುಪದನ ಯೋಗ್ಯತೆಯನ್ನು ಉಪಮಾನವಾದ ಕಸದ ತಿಪ್ಪೆ ಯನ್ನು ಶ್ರೇಷ್ಠವೆಂದು ಭಾವಿಸುವ ನೊಣದ ಯೋಗ್ಯತೆಗೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ .

ಲಕ್ಷಣ : ಎರಡು ವಸ್ತುಗಳಲ್ಲಿರುವ ಪರಸ್ಪರ ಸಾದೃಶ್ಯ ಸಂಪತ್ತನ್ನು ವರ್ಣಿಸುವುದು ಉಪಮಾ ಅಲಂಕಾರವಾಗಿದೆ.

**ಕೊಟ್ಟಿರುವ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸಿನ ಹೆಸರು ಬರೆಯಿರಿ.**

4 4 4
– – | **U - U** | **UU**– |
ಅ) ಅಂತೆಂ| ಬನಾರ್ಗೆ| ಪಿರಿದುಂ 12
4 | 4 | 4 | 4 | 4
_ **U U**| _ _ | **U**– **U**| _ _ | **U U** _
ಭ್ರಾಂತು ದ| ಲೇಂ ದ್ರೋ| ಣನೆಂಬ|ನೇಂ ಪಾ| ರ್ವನೆ ಪೇ 20
ಛಂದಸ್ಸು : ಕಂದಪದ್ಯ

ನ ಜ ಭ ಜ ಜ ಜ ರ
**U UU** | **U - U**| –**UU** | **U**– **U**| **U** – **U**| **U - U** | – **U** –
ಆ . ಖಳನೊ| ಳ ವಿಂಗೆ |ಕುಪ್ಪೆವ| ರಮೆಂಬ| ವೊಲಾಂಬ|ರಮುಂಟೆ| ನಿ ನ್ನದೊಂ
ಛಂದಸ್ಸು : ಚಂಪಕಮಾಲಾವೃತ್ತ (ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಳ್ದಿರಲ್ )

ಘಟಕಪರೀಕ್ಷೆ –೧ ೧೯ ಅಂಕಗಳು

ಒಂದು ವಾಕ್ಯದಲ್ಲಿ ಉತ್ತರಿಸಿ ೨*೧=೨

೧. ದ್ರೋಣರು ಪರಶುರಾಮನಲ್ಲಿಗೆ ಏಕೆ ಬಂದನು ?

೨. ಪರಶುರಾಮನು ದ್ರೋಣನಿಗೆ ಕೊಟ್ಟ ಪ್ರಧಾನ ಅಸ್ತ್ರಗಳು ಯಾವುವು ?

೩ –೪ ವಾಕ್ಯಗಳಲ್ಲಿ ಉತ್ತರಿಸಿ ೨*೨=೪

೧. ದ್ರುಪದನು ದ್ರೋಣರಿಗೆ ಹೇಳಿದ ಮಾತುಗಳು ಯಾವುವು ?

೨.೨ .ದ್ರುಪದನ ಮಾತಿಗೆ ದ್ರೋಣನ ಪ್ರತ್ಯುತ್ತರವೇನು ?

೮ ರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ ೪ ಅಂಕಗಳು

೧. ದ್ರುಪದನಿಗೂ ದ್ರೋಣನಿಗೂ ನಡೆದ ಸಂಭಾಷಣೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ ೨*೩=೬

೧. "ಎಂತು ನಾಣಿಲಿಗರಪ್ಪರೆ ಮಾನಸರ್ "

೨ . " ಜಲಕ್ಕನೀಗಳರಿದೆಂ ಸಿರಿ ಕಳ್ತೊಡವುಟ್ಟಿತೆಂಬುದಂ "

ಪಂಪ ಕವಿಯ ಸಂಕ್ಷಿಪ್ತ ಪರಿಚಯ ಬರೆಯಿರಿ ೩ ಅಂಕಗಳು

ಘಟಕ ಪರೀಕ್ಷೆ –೨ ೧೪ ಅಂಕಗಳು

ಒಂದು ವಾಕ್ಯದಲ್ಲಿ ಉತ್ತರಿಸಿ ೨*೧=೨

೧. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು ?

೨. ದ್ರುಪದನು ಪಡಿಯರನಿಗೆ ಏನೆಂದು ಹೇಳಿ ಕಳುಹಿಸಿದನು

೩ –೪ ವಾಕ್ಯಗಳಲ್ಲಿ ಉತ್ತರಿಸಿ ೨ ಅಂಕ

೧. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು ?

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ ೨*೩=೬

೧. " ಈಗಳೊಂದಡಕೆಯುಮಿಲ್ಲ ಕೈಯೊಳ್ "

೨. " ವಿದ್ಯಾಧನಮೆ ಧನಮಪ್ಪುದು "

೮ ರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ **೪ ಅಂಕಗಳು**

೧. ದ್ರೋಣನೂ ದ್ರುಪದನ ವಿರುದ್ಧ ಶಪಥ ಮಾಡಲು ಕಾರಣವಾದ ಅಂಶಗಳನ್ನು ವಿವರಿಸಿ.

# ಪತ್ಯ ಪೂರಕ ಅಧ್ಯಯನ ೧ . ಸ್ವಾಮಿವಿವೇಕಾನಂದರ ಚಿಂತನೆಗಳು

## ಒಂದು ವಾಕ್ಯದಲ್ಲಿ ಉತ್ತರಿಸಿ

೧. ವಿವೇಕಾನಂದರೆಂದರೆ ಯಾವುದರ ರೂಪಕವಾಗಿದೆ ?

ಉ: ವಿವೇಕಾನಂದರೆಂದರೆ ಸಾಮಾಜಿಕ ಸಂಕಟ ,ಸಿಟ್ಟು ,ಸ್ಫೋಟ,ಸ್ಪಷ್ಟತೆಗಳ ರೂಪಕವಾಗಿದ್ದಾರೆ.

೨. ವಿವೇಕಾನಂದರು ಮೊದಲನೆ ಆದ್ಯತೆ ಯಾವುದಕ್ಕೆ ನೀಡಬೇಕೆಂದಿದ್ದಾರೆ ?

ಉ: ವಿವೇಕಾನಂದರು ಬಡಜನರ ಹೊಟ್ಟೆಹಸಿವನ್ನು (ದೈಹಿಕ ಹಸಿವು)ಹಿಂಗಿಸುವುದಕ್ಕೆ ಮೊದಲನೆ ಆದ್ಯತೆ ನೀಡಬೇಕೆಂದಿದ್ದಾರೆ.

೩. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ ?

ಉ:ವಿವೇಕಾನಂದರು ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸಿದರು.

೪. ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿರುವವರು ಯಾರು ?

ಉ:ಜಾತಿ ವ್ಯವಸ್ಥೆಯ ಕ್ರೌರ್ಯಕ್ಕೆ ತುತ್ತಾಗಿರುವವರು ಶೂದ್ರರು , ಅಸ್ಪೃಶ್ಯರು.

೫. ಸರ್ವಧರ್ಮ ಸಮ್ಮೇಳನವು ಎಲ್ಲಿ ನಡೆಯಿತು ?

ಉ: ಸರ್ವರ್ಧರ್ಮ ಸಮ್ಮೇಳನವು ೧೧/೯/೧೮೯೩ ರಲ್ಲಿ ಚಿಕಾಗೊದಲ್ಲಿ ನಡೆಯಿತು.

೬. ವಿವೇಕಾನಂದರನ್ನು ಮಾನವತಾ ಮಿತ್ರ ' ಎಂದು ಕರೆದವರು ಯಾರು ?

ಉ: ವಿವೇಕಾನಂದರನ್ನು ' ಮಾನವತಾ ಮಿತ್ರ 'ಎಂದು ಕರೆದವರು ಕುವೆಂಪುರವರು.

## ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?

ಉ: ಹಿಂದುಳಿದ ಹಾಗೂ ದಲಿತ ಜಾತಿಗಳ ಬಗ್ಗೆ ಅವರಿಗೆ ಸಹಜವಾದ ಸಾಮಾಜಿಕ ಕಳಕಳಿಯಿತ್ತು. ಹೀಗಾಗಿಯೇ ಅವರು ಸಂಶಯಕ್ಕೆಡೆಯಿಲ್ಲದಂತೆ ಜಾತಿ ಮತ್ತು ವರ್ಗ ವ್ಯವಸ್ಥೆಯನ್ನು ವಿರೋಧಿಸಿದರು. ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ .ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ. ಎಂದು ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರು ಅಭಿಪ್ರಾಯ ಹೊಂದಿದ್ದರು.

೨. ವಿವೇಕಾನಂದರು ಕೋಮುವಾದದ ಕಟ್ಟಾವಿರೋಧಿಯಾಗಿದ್ದರು . ಏಕೆ ?

ವಿವೇಕಾನಂದರು ಏಕಸಂಸ್ಕೃತಿ ಮತ್ತು ಏಕಧರ್ಮ ವಿಸ್ತರಣೆಗಳ ಪರವಾಗಿರಲಿಲ್ಲ. ಅದು ಹಿಂದೂ ಧರ್ಮವಿರಲಿ,ಕ್ರೈಸ್ತಧರ್ಮವಿರಲಿ, ಇಸ್ಲಾಂಧರ್ಮವಿರಲಿ ಏಕಧರ್ಮ ಶ್ರೇಷ್ಠತೆ ಮತ್ತು ವಿಸ್ತರಣೆಯು ಜೀವ ವಿರೋಧವೆಂದು ಅವರು ಭಾವಿಸಿದ್ದರು. ಹೀಗಾಗಿ ವಿವೇಕಾನಂದರು ಕೋಮುವಾದದ ಕಟ್ಟಾವಿರೋಧಿಯಾಗಿದ್ದರು.

೩. ವಿವೇಕಾನಂದರು ಚಿಕಾಗೋ ಸರ್ವ ಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು ?ಸ್ವಮತಾಭಿಮಾನ, ಅನ್ಯ ಮತದ್ವೇಷ ಮತ್ತು ಇವುಗಳಿಂದ ಉತ್ಪನ್ನವಾದ ಘೋರ ಧಾರ್ಮಿಕ ದುರಭಿಮಾನಗಳು ಈ ಸುಂದರ ಜಗತ್ತನ್ನು ಆವರಿಸಿಕೊಂಡಿವೆ. ಇಂತಹ ಉಗ್ರ ಧರ್ಮಾಂಧತೆಯ ದೈತ್ಯರಿಲ್ಲದೆ ಇದ್ದರೆ ಮಾನವ ಜನಾಂಗ ಇಂದಿಗಿಂತ ಎಷ್ಟೋ ಮುಂದುವರಿಯುತ್ತಿತ್ತು ಎಂದು ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದರು.

## ಪಠ್ಯ ಪೂರಕ ಅಧ್ಯಯನ ೨. ವಸಂತ ಮುಖ ತೋರಲಿಲ್ಲ . – ವಿಜಯಶ್ರೀ ಸಬರದ

### ಕೃತಿಕಾರರ ಪರಿಚಯ

ಡಾ. ವಿಜಯಶ್ರೀ ಸಬರದ ಅವರು ೧೯೫೭ ರಲ್ಲಿ ಬೀದರ್ ನಲ್ಲಿ ಜನಿಸಿದರು. ಉರಿಲಿಂಗ ,ಹೂವಿನ ತೇರನೇರಿ ಎನ್ನುವ ನಾಟಕಗಳನ್ನು ಬರೆದಿದ್ದಾರೆ. ಸಾಹಿತ್ಯ ಮತ್ತು ಮಹಿಳೆ ,ಜಾನಪದ ಮತ್ತು ಮಹಿಳೆ ಎಂಬ ವಿಮರ್ಶಾ ಸಂಕಲನಗಳು, ಜ್ವಲಂತ, ಲಕ್ಷ್ಮಣರೇಖೆ ದಾಟಿದವರು ,ಮುಗಿಲ ಮಲ್ಲಿಗೆ ಮೊದಲಾದ ಕವನಸಂಕಲನಗಳನ್ನು ಬರೆದಿದ್ದಾರೆ . ರತ್ನಮ್ಮ ಹೆಗ್ಗಡೆ ಬಹುಮಾನ , ಮೈಸೂರಿನ ಸಾಹಿತ್ಯ ಶ್ರೀ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳು ಇವರಿಗೆ ದೊರೆತಿವೆ . ಪ್ರಸ್ತುತ ಕವನವನ್ನು ಇವರ ಮುಗಿಲ ಮಲ್ಲಿಗೆ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಪ್ರಶ್ನೆಗಳಿಗೆ ಉತ್ತರಿಸಿ

೧. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

ಉ: ಪುಟ್ಟ ಪೋರಿ ಮುಸುರೆ ತಿಕ್ಕುವ ಕೆಲಸ ಮಾಡುತ್ತಿದ್ದಾಳೆ.

೨. ಅಮ್ಮ ಎಲ್ಲಿ ಮಲಗಿದ್ದಾಳೆ ?

ಉ: ಅಮ್ಮ ಗುಡಿಸಲಿನಲ್ಲಿ ಗೂರುತ್ತ ಮಲಗಿದ್ದಾಳೆ.

೩. ಯಾರಿಗೆ ವಸಂತ ಮುಖ ತೋರಲಿಲ್ಲ ?

ಉ: ಕಮ್ಮಾರ, ಕುಂಬಾರ, ನೇಕಾರ, ಕೇರಿಯ ಮಾರ ಇವರಾರಿಗೂ ವಸಂತ ಮುಖ ತೋರಲಿಲ್ಲ.

೪. ಪುಟ್ಟಿಯ ಪ್ರಶ್ನೆಗಳೇನು ?

ಉ: ಗುಡಿಸಲೊಳಗೆ ಬರಲು ವಸಂತ ಹೆದರಿದನೆ ?ಹರಿದ ಚಿಂದಿ ಬಟ್ಟೆಗಳ ಕಂಡು ಅವನು ಮರುಗಿದನೆ ?ಎನ್ನುವುದು ಪುಟ್ಟಿಯ ಪ್ರಶ್ನೆಗಳು .

೫ . ಈ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

ಉ: ಹಸಿರು ತುಂಬಿ ನಿಂತ ಮಾವಿನ ಮರಗಳು , ಸಂಭ್ರಮದಿಂದ ರೆಕ್ಕೆ ಬಿಚ್ಚಿ ಹಾರುತ್ತಿರುವ ಹಕ್ಕಿಗಳು , ಮನದುಂಬಿ ಹಾಡುವ ಕೋಗಿಲೆಗಳು ಕಡಲುಕ್ಕಿ ಹರಿಯುವಂತೆ ಸಂಭ್ರಮ ಭೂಮಿಯ ಮೇಲೆ ಇವೆಲ್ಲವೂ ಪ್ರಕೃತಿಯಲ್ಲಿ ಕಂಡುಬಂದು ವಸಂತನ ಆಗಮನವಾಗಿದೆ ಎಂದು ವ್ಯಕ್ತಪಡಿಸುತ್ತಿವೆ ಎಂದು ಕವಯತ್ರಿ ಪ್ರಕೃತಿಯ ಸಂಭ್ರಮವನ್ನು ಬಣ್ಣಿಸಿದ್ದಾರೆ.

## ಪಠ್ಯ ಪೂರಕ ಅಧ್ಯಯನ ೩. ಭಗತ್ ಸಿಂಗ್ – ಡಾ. ಜಿ. ರಾಮಕೃಷ್ಣ

### ಕೃತಿಕಾರರ ಪರಿಚಯ

ಡಾ. ಗಂಪಲಹಳ್ಳಿ ರಾಮಕೃಷ್ಣರವರು ಕ್ರಿ.ಶ .೧೯೩೯ರಲ್ಲಿ ಬೆಂಗಳೂರು ಗ್ರಾಮಾಂತರ ಮಾಗಡಿ ಬಳಿಯ ಕೆಂಪಸಾಗರದಲ್ಲಿ ಜನಿಸಿದರು. ದೇವಿಪ್ರಸಾದ್ ಮತ್ತು ಲೋಕಯುತ ದರ್ಶನ ,ಭಗತ್ ಸಿಂಗ್ ,ಭೂಪೇಶಗುಪ್ತ ,ಜೆಗೆವಾರ ,ಲೆನಿನ್ ,ಅನುವಾದ –ಬಾ ನೊಣವೇ ,ವಾನರನಿಂದ ಮಾನವ ದರ್ಶನ ಮತ್ತು ಹಲವಾರು ಸಂಪಾದಿತ ಕೃತಿಗಳನ್ನು ರಚಿಸಿದ್ದಾರೆ.

ಪ್ರಸ್ತುತ ಪಾಠವನ್ನು ಜಿ.ರಾಮಕೃಷ್ಣರ ಭಗತ್ ಸಿಂಗ್ ಎಂಬ ಜೀವನ ಚರಿತ್ರೆಯಿಂದ ಆರಿಸಿಕೊಳ್ಳಲಾಗಿದೆ

### ಪ್ರಶ್ನೆಗಳಿಗೆ ಉತ್ತರಿಸಿ .

೧. ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಎಂದು ನಡೆಯಿತು ?

ಉ: ಜಲಿಯನ್ ವಾಲಾಭಾಗ್ ಹತ್ಯಾಕಾಂಡ ಏಪ್ರಿಲ್ ೧೩, ೧೯೧೯ ರಂದು ನಡೆಯಿತು.

೨. ಭಗತ್ ಸಿಂಗ್ ತನ್ನ ಸಹೋದರರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?

ಉ: ಭಗತ್ ಸಿಂಗ್ ತನ್ನ ಸಹೋದರಿಗೆ ಮಣ್ಣು ತ್ಯಾಗದ ಪ್ರತೀಕ ಎಂದು ತೋರಿಸುತ್ತಾನೆ.

೩. ಜಲಿಯನ್ ವಾಲಾಭಾಗ್ ನಲ್ಲಿರುವ ಒಕ್ಕಣೆ ಏನು ?

ಉ: " ಏಪ್ರಿಲ್ –೧೩–೧೯೧೯ ರಂದು ಬ್ರಿಟಿಷರ ಗುಂಡುಗಳಿಗೆ ಆಹುತಿಯಾದ ಸುಮಾರು ೨೦೦೦ ಮುಗ್ಧ ಹಿಂದೂ ,ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಈ ಪ್ರದೇಶ ಪಾವನವಾಗಿದೆ.''

೪. ಭಗತ್ ಸಿಂಗ್ ನ ಸಹಚರರು ಯಾರು ?

ಉ: ಸುಖ್ ದೇವ್ ,ರಾಜ್ ಗುರು , ಭಟುಕೇಶ್ವರ ದತ್ತ ರು ಭಗತ್ ಸಿಂಗ್ ನ ಸಹಚರರು .

೫. ಭಗತ್ ಸಿಂಗ್ ಹುತಾತ್ಮನಾದದ್ದು ಯಾವಾಗ ?

ಉ: ಭಗತ್ ಸಿಂಗ್ ಮಾರ್ಚ್ ೨೩, ೧೯೩೧ ರಂದು ಬ್ರಿಟಿಷರಿಂದ ಮರಣದಂಡನೆಗೆ ಈಡಾಗಿ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಹುತಾತ್ಮನಾದನು.

## ಪಠ್ಯ ಪೂರಕ ಅಧ್ಯಯನ ೪. ಮೃಗ ಮತ್ತು ಸುಂದರಿ –ಪಿ.ಲಂಕೇಶ್

### ಕೃತಿಕಾರರ ಪರಿಚಯ

ಪಾಳ್ಯ ಲಂಕೇಶ್ ಅವರು ಮಾರ್ಚ್ ೮,೧೯೩೫ ರಂದು ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿ ಗ್ರಾಮದಲ್ಲಿ ಜನಿಸಿದರು. ಸಂಕ್ರಾಂತಿ, ಈಡಿಪಸ್ ಮತ್ತು ಅಂತಿಗೊನೆ ಮುಂತಾದ ನಾಟಕಗಳನ್ನೂ ,ಕಲ್ಲು ಕರಗುವ ಸಮಯ ,ಕೆರೆಯ ನೀರನು ಕೆರೆಗೆ ಚೆಲ್ಲಿ ,ಉಲ್ಲಂಘನೆ ,ಮಂಜು ಕವಿದ ಸಂಜೆ ಮುಂತಾದ ಕಥಾ ಸಂಗ್ರಹಗಳನ್ನೂ ,ಮುಸ್ಸಂಜೆಯ ಕಥಾ ಪ್ರಸಂಗ, ಅಕ್ಕ ಕಾದಂಬರಿಗಳನ್ನೂ ಹಲವಾರು ಅಂಕಣ ಬರಹಗಳನ್ನೂ ,ಹುಳಿಮಾವಿನ ಮರ ಆತ್ಮಕಥೆಯನ್ನೂ ರಚಿಸಿದ್ದಾರೆ .

ಪ್ರಸ್ತುತ ಕಥೆಯನ್ನು ಲಂಕೇಶರ ಕಲ್ಲು ಕರಗುವ ಸಮಯ ಎಂಬ ಕಥಾ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

### ಪ್ರಶ್ನೆಗಳಿಗೆ ಉತ್ತರಿಸಿ.

೧. ಬಡತನ ಸುಂದರಿ ಹಾಗೂ ಅವಳ ತಂದೆಗೆ ಕಷ್ಟವಾಗಲಿಲ್ಲ ಏಕೆ ?

ಉ: ಸುಂದರಿ ಮತ್ತು ಅವಳ ತಂದೆ ಸರಳ ಜೀವನ ನಡೆಸುತ್ತಿದ್ದುದರಿಂದ ಬಡತನ ಅವರಿಗೆ ಕಷ್ಟವಾಗಲಿಲ್ಲ.

೨. ಮೃಗದ ಬಾಹ್ಯ ಆಕಾರ ಹೇಗಿತ್ತು ?

ಉ: ಮೃಗ ನೋಡಲು ಭೀಕರವಾಗಿತ್ತು. ಕೋರೆ ಹಲ್ಲು ,ಹಂದಿಯ ದೇಹ ,ತೋಳದ ಚಲನೆಯನ್ನು ಪಡೆದಿದ್ದ ಮೃಗದ ಧ್ವನಿ ಗೊಗ್ಗರು ಮತ್ತು ಕರ್ಕಶ ವಾಗಿತ್ತು.

೩. ಯಾರು ಶಾಪಗೊಂಡ ಮೃಗವಾಗಿದ್ದರು ?

ಉ: ಸುಂದರ ರಾಜಕುಮಾರ ಶಾಪಗೊಂಡ ಮೃಗವಾಗಿದ್ದನು.

೪. ದೇವತೆ ಕೊಟ್ಟ ಶಾಪವೇನು ?

ಉ:ಕನ್ಯೆಯೊಬ್ಬಳು ಮನಸಾರೆ ಒಪ್ಪಿ ಪ್ರೀತಿಸುವವರೆಗೆ ರಾಜಕುಮಾರನು ಮೃಗವಾಗಿಯೇ ಇರುವಂತೆ ದೇವತೆ ಶಾಪ ಕೊಟ್ಟಿದ್ದಳು.

೫. ಶಾಪ ವಿಮೋಚನೆಯ ಫಲವೇನು ?

ಉ: ಸುಂದರಿಯು ಮೃಗದ ರೂಪದಲ್ಲಿದ್ದ ರಾಜಕುಮಾರನನ್ನು ಮನಸಾರೆ ಒಪ್ಪಿದ್ದರಿಂದ ರಾಜಕುಮಾರನ ಮೃಗತ್ವ ಕರಗಿತು. ರಾಜಕುಮಾರನು ತನ್ನ ಮಂತ್ರದಂಡದಿಂದ ಪ್ರಜೆಗಳನ್ನೆಲ್ಲ ಕರೆದನು. ಅರಮನೆ ಮೋಹಕವಾಗಿ ಝುಗಝುಗಿಸತೊಡಗಿತು. ಸುಂದರಿ ಮತ್ತು ರಾಜಕುಮಾರ ಮದುವೆಯಾಗಿ ನೆಮ್ಮದಿಯಿಂದ ರಾಜ್ಯಭಾರ ನಡೆಸತೊಡಗಿದರು.

೬. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ ?

ಉ: ಸುಂದರಿಗೆ ಮೃಗದ ಬಗ್ಗೆ ಕುತೂಹಲವಾಗುತ್ತಿತ್ತು. ಒಮ್ಮೊಮ್ಮೆ ನೋಡುವ ಇಷ್ಟವಾಗುತ್ತಿತ್ತು. ಅವನ ಒರಟು ಮಾತು ,ತಿಕ್ಕಲು ನಡುವಳಿಕೆ ಮನಸ್ಸಿನಲ್ಲೇ ನಗು ತರುತ್ತಿದ್ದವು. ಆತನ ಕಾಳಜಿಯನ್ನು ನೆನೆದು ಮನ ಕರಗುತ್ತಿತ್ತು.

# ಜನಪದ ಒಗಟುಗಳು

೧. ಅಂಗಿ ಎಂಬ ಅರ್ಥ ಬರುವ ಬೆಡಗಿನ ಪ್ರಶ್ನೆಯನ್ನು ತಿಳಿಸಿ.

ಉ: ಕೈಯುಂಟು ಕಾಲಿಲ್ಲ ,ಶಿರ ಹರಿದ ಮುಂಡ ಮೈಯೊಳಗೆ ನವಗಾಯ ಒಂಬತ್ತು ತುಂಡ ಒಯ್ಯನೊಯ್ಯನೇ ಬಂದು ಹೆಗಲೇರಿಕೊಂಡ ರಾಯರಾಯರಿಗೆಲ್ಲ ತಾನೇ ಪ್ರಚಂಡ

೨. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?

ಉ: ಉಪ್ಪು ನೀರಲ್ಲಿಯೇ ಹುಟ್ಟುವುದು ನೀರಲ್ಲಿಯೇ ಬೆಳೆಯುವುದು ಆದರೆ ನೀರು ಸೋಕಿದರೆ ಮತ್ತೆ ಕರಗಿ ಹೋಗುವುದು

೩. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಒಗಟು ಹೇಗೆ ವಿವರಿಸುತ್ತದೆ ?

ಉ: ಕೆಸರಿನಲ್ಲಿಯೇ ಕಮಲವು ಹುಟ್ಟುವುದು .ಕೆಸರಿನಲ್ಲಿಯೇ ಅದು ಬೆಳೆಯುವುದು (ಕೆಸರಲ್ಲಿ ಹುಟ್ಟೋದು ಕೆಸರಲ್ಲಿ ಬೆಳೆಯೋದು ಅದು ಒಂದು ಗಿಡದ ಪರಿಕಾರ

೪. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹಾಗೂ ಗರಿಕೆ ಕೊಡುವ ತೊಂದರೆಯನ್ನು ಒಗಟುಗಳು ಹೇಗೆ ವಿವರಿಸುತ್ತವೆ ?

ಉತ್ತರಾಣಿ ಗಿಡವು ದಾರಿಯ ಬದಿಯಲ್ಲಿ ಹುಟ್ಟುವುದು.ದಾರಿಯ ಬದಿಯಲ್ಲಿ ಬೆಳೆಯುವುದು.ದಾರಿಯಲ್ಲಿ ಓಡಾಡುವವರ ಮುಂಜೆರಗನ್ನು ಹಿಡಿದು ತೊಂದರೆ ಕೊಡುವುದು. ಅದೇ ರೀತಿ ಗರಿಕೆಯ ಹುಲ್ಲು ಹೊಲದಲ್ಲಿ ಹುಟ್ಟಿ ಹೊಲದಲ್ಲಿ ಬೆಳೆದು ಬೆಳೆಯು ಬೆಳೆಯಲು ತೊಂದರೆ ಕೊಡುವುದು..

೫.ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ ?

ಒಗಟುಗಳಿಂದ ಚಿಂತನಾ ಶಕ್ತಿ ಹೆಚ್ಚುತ್ತದೆ. ಆಲೋಚನಾ ಶಕ್ತಿ , ತಾರ್ಕಿಕ ಶಕ್ತಿ ಹೆಚ್ಚುತ್ತದೆ. ಮನರಂಜನೆ ಸಿಗುತ್ತದೆ.
ವರ್ಣನೆಗಳನ್ನು ಅರ್ಥೈಸುವ ಸಾಮರ್ಥ್ಯ ವೃದ್ಧಿಸುತ್ತದೆ.